ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 27 ಸಂಚಿಕೆ 42 ಅಕ್ಟೋಬರ್ 16, 2005 ಬೆಲೆ ರೂ. 3.00



ಬೀಜ ಮಸೂದೆ -2004
ರೈತರ ಹಕ್ಕಿನ ಮೇಲೆ ಧಾಳಿ

ಕರುನಾಡಿನಲ್ಲಿ
ಫ್ಯಾಸಿಸ್ಟ್ ಶಿವಸೇನೆ





- ವಿಶ್ವಸಂಸ್ಥೆ 'ಪ್ರಜಾಪ್ರಭುತ್ವ ನಿಧಿ' : ಭಾರತ ಬುಶ್‌ನ ಬಾಲಂಗೋಚಿಯೇ ?



- ಕೇರಳ : ಸ್ಥಳೀಯ ಚುನಾವಣೆ - ಎಲ್‌ಡಿಎಫ್ ಜಯಭೇರಿ
- ಮತಗಳ ಮಿತಿಗಳನ್ನು ಮೀರಿದ ಮದುವೆ

ಸೆಪ್ಟೆಂಬರ್ 29 ರ ಚಳುವಳಿಯ ಕರೆಗೆ ರಾಜ್ಯದಲ್ಲಿ ಅಪೂರ್ವ ಸ್ಪಂದನ

ಸೆಪ್ಟೆಂಬರ್ 29, ಅಖಿಲ ಭಾರತ ಮುಷ್ಕರಕ್ಕೆ ಕರ್ನಾಟಕ ರಾಜ್ಯದಲ್ಲಿ ದೊರೆತ ಅಭೂತಪೂರ್ವ ಸ್ಪಂದನದ ಬಗ್ಗೆ ಕಳೆದ ಸಂಚಿಕೆಯಲ್ಲಿ ಈಗಾಗಲೇ ಓದಿದ್ದೀರಿ. ಮತ್ತಷ್ಟು ಜಿಲ್ಲೆಗಳಿಂದ ಮತ್ತಷ್ಟು ಪ್ರದೇಶಗಳಿಂದ ಯಶಸ್ವಿ ಮುಷ್ಕರ ಮತ್ತು ಯಶಸ್ವಿ ಬಂದ್‌ನ ಉತ್ಸಾಹದ ವರದಿಗಳು ಬರುತ್ತಲೇ ಇವೆ.

ಬೀದರ್ : ದೊಡ್ಡ ಸಂಖ್ಯೆಯ ಮಹಿಳೆಯರು ಸೇರಿದಂತೆ ಸುಮಾರು 3000 ಜನರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆದಿದೆ. ಅಂಗನವಾಡಿ, ಗ್ರಾಮ ಪಂಚಾಯತ್ ಸಾಕ್ಷರತಾ ಪ್ರೇರಕರು, ಬ್ಯಾಂಕ್, ವಿಮೆ, ಸರ್ಕಾರಿ ನೌಕರರ ಒಕ್ಕೂಟದ ಸದಸ್ಯರು, ಎಸ್ಎಫ್ಐ, ಸಿಐಟಿಯು ಮುಂತಾದ ಸಂಘಟನೆಗಳ ಸದಸ್ಯರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸರ್ಕಾರಿ ನೌಕರರ ಒಕ್ಕೂಟದ ಮನೋಹರ್, ಬ್ಯಾಂಕ್ ನೌಕರರ ಸಂಘದ ಕುಲಕರ್ಣಿ, ಸಿಐಟಿಯು ಸಂಘಟನೆಯ ಪರವಾಗಿ ವಿಜಯ ಕುಮಾರ ಸೊನಾರೆ ಮುಂತಾದವರು ಚಳುವಳಿ ನೇತೃತ್ವ ವಹಿಸಿದ್ದರು.

ಹುಮ್ನಾಬಾದ್‌ನಲ್ಲಿ 300 ಜನರ ಪ್ರತಿಭಟನೆ ನಡೆದಿದೆ. ಗ್ರಾಮ ಪಂಚಾಯತ್ ನೌಕರರು ಬಿಸಿ ಊಟ, ಅಂಗನವಾಡಿ ನೌಕರರು ಪಾಲ್ಗೊಂಡಿದ್ದರು. ಬಸವ ಕಲ್ಯಾಣದಲ್ಲಿ 200 ಜನರ ಪ್ರತಿಭಟನೆ ನಡೆದಿದೆ. ಸಾಕ್ಷರತಾ ಪ್ರೇರಕರು, ಅಂಗನವಾಡಿ, ಬಿಸಿ ಊಟದ ನೌಕರರು ಪಾಲ್ಗೊಂಡಿದ್ದಾರೆ.

ಧಾರವಾಡ : ಧಾರವಾಡದಲ್ಲಿ ವಿಮಾ ನೌಕರರು - ಬ್ಯಾಂಕ್ ನೌಕರರು ಕಾರ್ಮಿಕರು ಸೇರಿದ ಸುಮಾರು 1000 ಜನರ ಬೃಹತ್ ಮೆರವಣಿಗೆ ನಡೆದಿದೆ. ಹುಬ್ಬಳ್ಳಿಯಲ್ಲಿ ಸುಮಾರು 2000 ಜನರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆದಿದೆ.

ಗದಗ್ : ಜಿಲ್ಲಾ ಕೇಂದ್ರ ಗದಗ್‌ನಲ್ಲಿ ವಿಮೆ-ಬ್ಯಾಂಕ್ ನೌಕರರು, ಗ್ರಾಮ ಪಂಚಾಯತ್, ಬಿಸಿ ಊಟ ಕಾರ್ಯಕರ್ತರು ವಿದ್ಯಾರ್ಥಿಗಳು ಸೇರಿ ಸುಮಾರು 3000 ಜನರ ಅಭೂತಪೂರ್ವ ಮೆರವಣಿಗೆ ನಡೆದಿದೆ. ಗಜೇಂದ್ರಗಡದಲ್ಲಿ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆದಿದೆ.

ಹಾವೇರಿ : ಜಿಲ್ಲಾ ಕೇಂದ್ರ ಹಾವೇರಿಯಲ್ಲಿ ಎಸ್ಎಫ್ಐ ಕಾರ್ಯಕರ್ತರು ಸಿಐಟಿಯು ಸಂಘಟನೆಯ ಹಮಾಲ ಕಾರ್ಮಿಕರು. ಸೇರಿ ಸುಮಾರು 500 ಜನರಿಂದ ರಸ್ತೆ ತಡೆ ನಡೆದಿದೆ. ಗ್ರಾಮ ಪಂಚಾಯ್ತಿ ನೌಕರರು ಧರಣಿ ನಡೆಸಿದ್ದಾರೆ. ಎಐಟಿಯುಸಿ ಕಾರ್ಮಿಕರು ಪ್ರತ್ಯೇಕ ಪ್ರತಿಭಟನೆ ನಡೆಸಿದ್ದಾರೆ. ಹಾವೇರಿಯ ಸಮೀಪದ ಕುಮಾರಪಟ್ಟಣಂನಲ್ಲಿ ಸಿಐಟಿಯು-ಎಐಟಿಯುಸಿಗೆ ಸೇರಿದ 1500 ಕಾರ್ಮಿಕರು ಮೆರವಣಿಗೆ ಬಹಿರಂಗ ಸಭೆ ನಡೆದಿದೆ.

ಹಾನಗಲ್‌ನಲ್ಲಿ ಕೃಷಿ ಕೂಲಿಕಾರರು ಎಸ್ಎಫ್ಐ-ಡಿವೈಎಫ್ಐ ಕಾರ್ಯಕರ್ತರು ಸೇರಿ ಸುಮಾರು 1000 ಜನರ ಮೆರವಣಿಗೆ ನಡೆದಿದೆ. ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಂ. ನಿತ್ಯಾನಂದ ಸ್ವಾಮಿ, ಕಾಂ. ಫಕೀರಪ್ಪ ಹೋತನಹಳ್ಳಿ ಮುಂತಾದವರು ನೇತೃತ್ವ ವಹಿಸಿದ್ದರು. ಶಿಗ್ಗಾಂವಿ ತಾಲ್ಲೂಕಿನಲ್ಲಿ ಗ್ರಾಮ ಪಂಚಾಯ್ತಿ ನೌಕರರು ಪ್ರತಿ ನೌಕರರು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ.

ಬೆಂಗಳೂರು : ಈಗಾಗಲೇ ವರದಿಯಾಗಿರುವುದಲ್ಲದೇ ಬೆಂಗಳೂರಿನ ಶ್ರೀರಾಮಪುರ ಪ್ರದೇಶದಲ್ಲಿ ಮೆರವಣಿಗೆ- ದೇವಯ್ಯ ಪಾರ್ಕ್ ಬಳಿ ರಸ್ತೆ ತಡೆ ನಡೆದಿದೆ, ಸಿಪಿಐ(ಎಂ) ಪಕ್ಷದ ಮುಖಂಡ ಗೋಪಾಲ ಕೃಷ್ಣ ಹರಳಹಳ್ಳಿ, ಡಿವೈಎಫ್ಐ ಮುಖಂಡ ಚಂದ್ರಯ್ಯ ಮುಂತಾದವರು ನೇತೃತ್ವ ವಹಿಸಿದ್ದರು.

ವರ್ತಕರು ಸ್ವಯಂ ಪ್ರೇರಣೆಯಿಂದ ಅಂಗಡಿ ಮುಂಗಟ್ಟು ಬಂದ್ ಮಾಡಿ ಮುಷ್ಕರವನ್ನು ಬೆಂಬಲಿಸಿದರು.


ಇದಲ್ಲದೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ನೌಕರರು ಬನ್ನೇರುಘಟ್ಟ ರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು.

ಮಂಗಳೂರು: ಈಗಾಗಲೇ ವರದಿಯಾಗಿರುವುದಲ್ಲದೆ ಉಳ್ಳಾಲದ ಸಿಪಿಐ(ಎಂ) ವಲಯ ಸಮಿತಿ ಮತ್ತು ಕಾರ್ಮಿಕ ಸಂಘಗಳ ಜಂಟಿ ಆಶ್ರಯದಲ್ಲಿ ನಡೆದ ಮುಷ್ಕರಕ್ಕೆ ಉಳ್ಳಾಲದ 14 ಗ್ರಾಮದಲ್ಲಿ ಅಭೂತಪೂರ್ವ ಬೆಂಬಲ ವ್ಯಕ್ತವಾಗಿರುತ್ತದೆ. ಈ ಪ್ರದೇಶಗಳಲ್ಲಿ ಯಾವುದೇ ಅಂಗಡಿಗಳು, ಬಸ್ಸುಗಳು,



ಬೆಂಗಳೂರಿನ ಕುಂಬಳಗೋಡಿನಲ್ಲಿ ರಸ್ತೆ ತಡೆ

ರಿಕ್ಷಾಗಳು ಸಂಚರಿಸದೆ ಸಂಪೂರ್ಣವಾಗಿ ಈ ಮುಷ್ಕರದಲ್ಲಿ ಭಾಗವಹಿಸಿ ಸಾರ್ವತ್ರಿಕ ಮುಷ್ಕರವು ಬಂದ್ ಆಗಿ ಪರಿವರ್ತನೆಗೊಂಡಿರುತ್ತದೆ. ಈ ಮುಷ್ಕರದಲ್ಲಿ ಎಲ್ಲಾ ಜನ ವಿಭಾಗಗಳು 29ರ ಬೆಳಿಗ್ಗೆಯಿಂದಲೇ ಪಕ್ಷದ ಕಛೇರಿಗೆ ಬಂದು ಸೇರಿ ಪಕ್ಷದ ಕೆಂಬಾವುಟವನ್ನು ಹಿಡಿದು ಬಂದ್‌ನಲ್ಲಿ ಸಹಕರಿಸಬೇಕೆಂದು ವಿನಂತಿಸಲಾಯಿತು. ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಎಲ್ಲಾ ಜನರು ಒಟ್ಟು ಸೇರಿ ಸಾರ್ವಜನಿಕ ಸಭೆ ನಡೆಸಲಾಯಿತು. ಕೇಂದ್ರ ಸರಕಾರದ ಜನ ವಿರೋಧಿ ನೀತಿ ಕಾರ್ಮಿಕ ವಿರೋಧಿ ನೀತಿ ಲಾಭದಾಯಕ ಸಾರ್ವಜನಿಕ ಕೈಗಾರಿಕೆಗಳನ್ನು ವಿದೇಶಿಯರಿಗೆ ಮಾರ ಹೊರಟ ಯು.ಪಿ.ಎ. ಸರಕಾರದ ಕಾಂಗ್ರೆಸ್ ನೀತಿಯನ್ನು ಜನತೆಯ ಮುಂದೆ ಸವಿವರವಾಗಿ ಹೇಳಲಾಯಿತು. ಈ ಸಭೆಗೆ ಜನ ವಿಭಾಗದ ಬೆಂಬಲವು ಸಿಕ್ಕಿರುತ್ತದೆ. ಎಲ್ಲರ ಬಾಯಲ್ಲೂ ಈ ಬಂದ್‌ಗೆ ಭಾಗವಹಿಸಲೇ ಬೇಕು. ಇದು ಜನ ಸಾಮಾನ್ಯರ ದಿನ ನಿತ್ಯದ ಸಮಸ್ಯೆಗಳು ಎಂಬ ಜನರ ಮನಸ್ಸುಗಳ ಭಾವನೆಯನ್ನು ಅರ್ಥ ಮಾಡಿಕೊಳ್ಳಲು ಕೂಡ ಸಾಧ್ಯವಾಯಿತು. ತೊಕ್ಕೊಟ್ಟು ನಿಂದ ಹೊರಟ ಸಂಗಾತಿಗಳು ಕುತ್ತಾರ್ ಜಂಕ್ಷನ್‌ನಲ್ಲಿ ಒಟ್ಟು ಸೇರಿ ಹೋರಾಟದ ವಿಷಯವನ್ನು ಜನರಿಗೆ ಮನವರಿಕೆ ಮಾಡಿ ಕೊಟ್ಟರು. ಮುನ್ನೂರು ಗ್ರಾಮದ ಜನತೆ ಬಂದ್‌ನಲ್ಲಿ ಸಹಕರಿಸಿ ಬೆಂಬಲ ಸೂಚಿಸಿದ್ದಕ್ಕೆ ಅಭಿನಂದನೆ ಸಲ್ಲಿಸಲಾಯಿತು.



ಚಿತ್ರದುರ್ಗದ ಚಳ್ಳಕೆರ

ಬೆಳ್ತಂಗಡಿ : ಮುಷ್ಕರಕ್ಕೆ ಬೆಳ್ತಂಗಡಿಯಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿತ್ತು. ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿ ಕರ್ನಾಟಕ ಪ್ರಾಂತ ರೈತ ಸಂಘ(ಎ.ಐ.ಕೆ.ಎಸ್.) ಗಳಿಂದ ನಗರದಲ್ಲಿ ಪ್ರತಿಭಟನಾ ರ್‍ಯಾಲಿ ಮತ್ತು ರಸ್ತೆ ತಡೆ ಚಳುವಳಿ ನಡೆದು ನೂರಾರು ಕಾರ್ಯ ಕರ್ತರು ಬಂಧಕ್ಕೊಳಗಾದರು.

ಮುಷ್ಕರದಂಗವಾಗಿ ಬ್ಯಾಂಕ್, ಟೆಲಿಕಾಂ, ಅಂಚೆ, ಬೀಡಿ ಕಂಪೆನಿಗಳನ್ನು ಎಲ್ಲಾ ಅಂಗನವಾಡಿ, ಬಾಲವಾಡಿಗಳನ್ನು ಮುಚ್ಚಲಾಗಿತ್ತು. ಪರೀಕ್ಷೆಗಳನ್ನು ಮುಂದೂಡಿ ಶಾಲಾ-ಕಾಲೇಜ್‌ಗಳನ್ನು ಬಂದ್ ಮಾಡಲಾಗಿತ್ತು. ಖಾಸಗೀ ಬಸ್ಸುಗಳು ರಸ್ತೆಗಿಳಿಯದೆ ಮುಷ್ಕರದಲ್ಲಿ ಭಾಗಿಯಾದರೆ, ಒಂದೆರಡು ಖಾಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡಾಡುತ್ತಿತ್ತು. ಸರ್ಕಾರಿ ಕಛೇರಿಗಳು ತೆರೆದಿದ್ದರೂ ಹಾಜರಾತಿ ಸಂಪೂರ್ಣ ಕುಸಿದಿತ್ತು. ರಾಜ್ಯ ಸರ್ಕಾರಿ ನೌಕರರ ಸಂಘದ ಬೆದರಿಕೆಯ ನಡುವೆಯೂ ಸರ್ಕಾರಿ ಇಲಾಖೆಗಳಲ್ಲಿ ನೌಕರರ ಹಾಜರಾತಿ ಕಡಿಮೆಯಿದ್ದದ್ದು ಮುಷ್ಕರಕ್ಕೆ ನೌಕರರು ಬೆಂಬಲ ನೀಡಿದ್ದರು ಎಂಬುದನ್ನು ಸಾಬೀತುಪಡಿಸಿತು.

ಮುಷ್ಕರಕ್ಕೆ ಬೆಂಬಲ ಸೂಚಿಸಿ ಕರ್ನಾಟಕ ಪ್ರಾಂತ ರೈತ ಸಂಘ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ರಸ್ತೆ ತಡೆ ನಡೆಸಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿ ಸದಸ್ಯರಾದ ಕಾಂ. ಬಿ.ಎಂ. ಭಟ್ ಮಾತಾಡಿದರು. .

ರೈತ ಸಂಘದ ತಾಲೂಕು ಕಾರ್ಯದರ್ಶಿ ಕಾಂ. ಹರಿದಾಸ್, ಸಿಪಿಐ(ಎಂ)ನ ತಾಲೂಕು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಯರಾಂ, ಕಾಂ.ಮಂಜುನಾಥ್, ಪಾವಚ್ಚನ್, ಸಿಐಟಿಯು ಮುಖಂಡರಾದ ಕಾಂ.ಗೀತಾ ಶೆಟ್ಟಿ, ಯಶೋಧ, ನೆಬಿಸಾ, ಜೆ.ಎಂ.ಎಸ್.ನ ಸುಕನ್ಯಾ, ಡಿವೈಎಫ್ಐ ನ ಮಹಮ್ಮದ್ ಕಕ್ಕೆಂಜೆ, ಶ್ಯಾಂರಾಜ್, ಸುನೀಲ್, ಮನೋಹರ, ಕುಶಾಲಪ್ಪ ಪದ್ಮುಂಜ, ಹರೀಶ್ ಪಿ. ನಾರಾಯಣ ಕೈಕಂಬ, ಶಮೀಮಾ ಬೆಳ್ತಂಗಡಿ ಭಾಗವಹಿಸಿದ್ದರು.

ಹಾಸನ ಜಿಲ್ಲೆ

ಜಿಲ್ಲಾದ್ಯಂತ ಎಲ್ಲಾ ಬ್ಯಾಂಕುಗಳು ಹಾಗೂ ವಿಮಾ ಕಛೇರಿಗಳು ಮುಚ್ಚಿದ್ದವು. ಬಿಎಸ್ಎನ್ಎಲ್ ನೌಕರರ ಮುಷ್ಕರ ದಿಂದಾಗಿ ಟೆಲಿಕಾಂ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು. ಅದೇ ರೀತಿ ಅಂಚೆ ಕಛೇರಿಗಳ ಪರಿಸ್ಥಿತಿಯೂ ಆಗಿತ್ತು. ಜಿಲ್ಲಾದ್ಯಂತ ಬಹುತೇಕ ಅಂಗನವಾಡಿ ಕೇಂದ್ರಗಳು ಮುಚ್ಚಿದ್ದವು. ಬಿಸಿಯೂಟ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಗ್ರಾಮಪಂಚಾಯತಿ ನೌಕರರು, ಪ್ಲಾಂಟೇಷನ್ ಕಾರ್ಮಿಕರು, ಕಾಫಿ ಕ್ಯೂರಿಂಗ್ (ಸಿಐಟಿಯುಗೆ ಸೇರಿದ) ಜಿಲ್ಲಾದ್ಯಂತ ಮುಷ್ಕರದಲ್ಲಿ ಪಾಲ್ಗೊಂಡರು. ಎಫ್ಎಂಆರ್ಎಐ ನೇತೃತ್ವದಲ್ಲಿ ಔಷಧ ಮಾರಾಟಗಾರರು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಸದಸ್ಯರು ಮುಷ್ಕರದಲ್ಲಿ ಪಾಲ್ಗೊಂಡರು. ನಗರದ ಅನೇಕ ಶಾಲಾ ಕಾಲೇಜುಗಳು ಎಸ್ಎಫ್ಐ ನೇತೃತ್ವದಲ್ಲಿ ಬಂದಾದವು. 29ರಂದು ಸಂಜೆ ಸಿಐಟಿಯು, ರೈತ ಸಂಘಟನೆ, ಡಿವೈಎಫ್ಐ ಮತ್ತು ಎಸ್ಎಫ್ಐ ಕಾರ್ಯಕರ್ತರು ಹಾಸನದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಹಿಂದಿನ ಕಳೆದೆರಡು ದಿನಗಳಿಂದ ತಮ್ಮ ಬೇಡಿಕೆಗಳಿಗಾಗಿ ಹಾಸನ, ಬೇಲೂರು, ಅರಕಲಗೂಡು, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಸೀಕೆರೆ ಹಾಗೂ ಸಕಲೇಶಪುರ ತಾಲ್ಲೂಕು ಪಂಚಾಯ್ತಿ ಕಛೇರಿಗಳ ಮುಂದೆ ಕೆಲಸ ನಿಲ್ಲಿಸಿ ಧರಣಿ ನಡೆಸಿದ ಗ್ರಾಮಪಂಚಾಯ್ತಿ ನೌಕರರು, ಜಿಲ್ಲಾದ್ಯಂತ ಮುಷ್ಕರ ನಡೆಸಿದ ದೊಡ್ಡ ವಿಭಾಗದ ಅಂಗನವಾಡಿ



ದೇವದುರ್ಗ

ನೌಕರರು, ಬಿಸಿಯೂಟದ ನೌಕರರು, ಪ್ಲಾಂಟೇಷನ್ ಕಾರ್ಮಿಕರು ಎಐಇಇಎ ಸಂಘಟನೆಯ ಸದಸ್ಯರು, ಎಫ್ಎಂಆರ್ಎಐ ನೌಕರರು ಅಂಚೆ ನೌಕರರು, ವಿದ್ಯಾರ್ಥಿಗಳು, ಡಿವೈಎಫ್ಐ ನೇತೃತ್ವದಲ್ಲಿ ಯುವಜನರು, ಭೂಮಾಪಕರು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನೇತೃತ್ವದಲ್ಲಿ ಮುಷ್ಕರ ನಡೆಸಿದ ಸರ್ಕಾರಿ ನೌಕರರು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನೇತೃತ್ವದಲ್ಲಿ ಮುಷ್ಕರ ನಡೆಸಿದ ಸರ್ಕಾರಿ ನೌಕರರು ಕೆಲವು ಕೆ.ಎಸ್.ಆರ್.ಟಿ.ಸಿ.ಯ ನೌಕರರು ಮೊದಲಾದವರು 29ರಂದು ಹಾಸನದಲ್ಲಿ ನಡೆದ ಬೃಹತ್ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿ ನಗರದ ಜನತೆಯಲ್ಲಿ ಜಾಗೃತಿ ಮೂಡಿಸಿದರು.

ನಗರದ ಬಸ್ ಸ್ಟ್ಯಾಂಡ್ ಬಳಿಯ ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟ ಪ್ರತಿಭಟನಾಕಾರರ ಬೃಹತ್ ಮೆರವಣಿಗೆ ಪೊಲೀಸ್ ವೃತ್ತ ಬೆಂಗಳೂರು, ಮಂಗಳೂರು ಹೆದ್ದಾರಿಯಲ್ಲಿ ಸುಮಾರು 3/4 ಗಂಟೆ ರಸ್ತೆ ತಡೆ ನಡೆಸಿ ಮುಖ್ಯರಸ್ತೆಗಳಲ್ಲಿ ಸಂಚರಿಸಿ ಹಲವು ಕಡೆ ರಸ್ತೆ ತಡೆ ನಡೆಸಿ ಕೊನೆಗೆ ಜಿಲ್ಲಾ ಪಂಚಾಯತ್‌ನ ಎದುರಿನ ಬೆಂಗಳೂರು, ಮಂಗಳೂರು ರಸ್ತೆಯಲ್ಲಿರುವ ವೃತ್ತದಲ್ಲಿ ಸುಮಾರು 1 ಗಂಟೆಗೂ ಮೀರಿ ರಸ್ತೆ ತಡೆ ನಡೆಸಲಾಯ್ತು. ನಂತರ ಅಲ್ಲಿ ಸೇರಿದ ಜನರನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಜಿಲ್ಲಾ ಸಂಚಾಲಕರೂ ಆದ ಕಾಂ.ವಿ.ಸುಕುಮಾರ್ ಆ ದಿನದ ಅಖಿಲ ಭಾರತ ಮುಷ್ಕರದ ಮಹತ್ವವನ್ನು ವಿವರಿಸಿ ಮಾತನಾಡಿದರು. ಕಾಂ.ಧರ್ಮೇಶ್ ವಂದಿಸಿದರು.

ಬ್ಯಾಂಕ್ ನೌಕರರು ಜಂಟಿ ಹೋರಾಟ ಸಮಿತಿಯಲ್ಲಿದ್ದರೂ ಹಿಂದಿನ ದಿನ ತೀರ್ಮಾನಿಸಿ ಪ್ರತ್ಯೇಕವಾಗಿ ಅವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯ ಮುಂಭಾಗ ಪ್ರದರ್ಶನ ನಡೆಸಿ ಮುಕ್ತಾಯಗೊಳಿಸಿದ್ದರು.

ಸಕಲೇಶಪುರದಲ್ಲಿ ಸಿಐಟಿಯು ಗೆ ಸೇರಿದ ತೋಟ ಕಾರ್ಮಿಕರು, ವಿಮಾ ನೌಕರರು, ಬ್ಯಾಂಕು ನೌಕರರು, ಅಂಚೆ ಬಿಎಸ್ಎನ್ ಎಲ್ ನೌಕರರು ಜಂಟಿಯಾಗಿ ಸಕಲೇಶಪುರದ ಮುಖ್ಯಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿ ಉಪ ವಿಭಾಗಾಧಿಕಾರಿಯವರ ಕಚೇರಿಯ ಮುಂದೆ ಸಭೆ ನಡೆಸಿದರು.

ಪುಟ 4 ನೋಡಿ

ಕರುನಾಡಿನಲ್ಲಿ ಫ್ಯಾಸಿಸ್ಟ್ ಶಿವಸೇನೆ!!!

ಎಸ್.ವೈ.ಗುರುಶಾಂತ್

ಕರ್ನಾಟಕದಲ್ಲಿ ಅತ್ಯಂತ ಅಪಾಯಕಾರಿಯಾದ ಮತ್ತೊಂದು ಶಕ್ತಿ ತಲೆ ಎತ್ತುತ್ತಿದೆ. ಕರ್ನಾಟಕಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಗಡಿಯ ಕೆಲವು ಹಳ್ಳಿಗಳಲ್ಲಿ ನಾಮ(ಫಲಕ) ಹಾಕಿಕೊಂಡು ಆಗೀಗ ಕೆಮ್ಮುತ್ತಿದ್ದ ಈ ಶಕ್ತಿ ಈಗ ಕರ್ನಾಟಕದ ರಾಜಧಾನಿಗೇ ಕಾಲಿಟ್ಟಿದೆ. ಬೇರು ಬಿಡಲು, ವ್ಯವಸ್ಥಿತವಾದ ಜಾಲ ಹಬ್ಬಿಸಲು ತೀವ್ರ ಹವಣಿಕೆಯಲ್ಲಿದೆ. ಇದಕ್ಕೆ ಗೊಬ್ಬರ, ನೀರು ಹಾಕಿ ಬೆಳೆಸಲು ಹಲವಾರು ಕೈಗಳು ತೆರಮರೆಯಲ್ಲಿ ನಿರತವಾಗಿವೆ!

ಇದು ಫ್ಯಾಸಿಸ್ಟ್ ಸಂತತಿಯ ಸೃಷ್ಟಿ! ಇದು ಶಿವಸೇನೆ

ಮಹಾರಾಷ್ಟ್ರದಲ್ಲಿ ಏಕೀಕರಣ ಚಳುವಳಿಯ ಸಕಾರಾತ್ಮಕ ಆಶಯಗಳನ್ನು ಧ್ವಂಸಿಸಿ, ಜನಾಶಯಗಳನ್ನು ತಿರುಚಿ ಅದರ ದುರ್ಬಳಕೆಯಲ್ಲಿ ವಿಕೃತವಾಗಿ ಹೊರಹೊಮ್ಮಿದ್ದ ನಕಾರಾತ್ಮಕ ಭಾಷಾಂಧ ಛಿದ್ರಕಾರಿ ಶಕ್ತಿಯಿದು. ಮರಾಠಿಗರನ್ನು ಅನ್ಯಭಾಷಿಕರ ವಿರುದ್ಧ ಎತ್ತಿ ಕಟ್ಟಿದ, ಫ್ಯಾಸಿಸ್ಟ್ ಹಿಟ್ಲರನ ಗುಪ್ತ ಪೊಲೀಸ್ ಪಡೆಯಂತೆ ಕೋಮುದ್ವೇಷದ ದಳ್ಳುರಿ ಹಬ್ಬಿಸಿ ಅಮಾನುಷ ಕ್ರೌರ್ಯ ಎಸಗಿದ ಕುಖ್ಯಾತಿಯ ಶಿವಸೇನೆ ಇದೇ. ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ, ಬಹುಮುಖಿ ಸಂಸ್ಕೃತಿಯ ಕಡುವಿರೋಧಿಯಾದ ಬಾಳಾಠಾಕ್ರೆಯ ಶಿವಸೇನೆ. ಕರ್ನಾಟಕದಲ್ಲಿ ಕೋಮು ಸೌಹಾರ್ದತೆಗೆ ಕಿಚ್ಚುಹಚ್ಚಿ, ನೂರಾರು ಅಮಾಯಕ ಜನರ ಪ್ರಾಣಕ್ಕೆ, ಆಸ್ತಿಗೆ ಸಂಚಕಾರ ತಂದ ಕಿರಾತಕ ಕ್ರೌರ್ಯದ ಬಜರಂಗದಳದ ಗೂಂಡಾನಾಯಕ ಪಡೆಯ ಪ್ರಮೋದ ಮುತಾಲಿಕ ಈಗ ಇದರ ನಾಯಕ!

ಈತ ಬಜರಂಗದಳವನ್ನು ಬಿಟ್ಟು ಬಿಟ್ಟಿದ್ದಾನಂತೆ!

ವಿಶ್ವ ಹಿಂದೂ ಪರಿಷತ್‌ಗೆ ವಿದಾಯ ಹೇಳಿದ್ದಾನಂತೆ!

ಬಿಜೆಪಿ ದ್ರೋಹ ಮಾಡಿಬಿಟ್ಟಿದೆಯಂತೆ. ಅದಕ್ಕೆಂದೇ ಈ ಪರ್ಯಾಯ ರಾಜಕೀಯ ಪಕ್ಷವಂತೆ!

ಎಲ್ಲಿಂದ ಬಿಡುಗಡೆ? ಯಾವ ಕಡೆಗೆ?

ಈ ಕಾಗಕ್ಕ, ಗುಬ್ಬಕ್ಕನ ಕಥೆಗೆ 'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ಎಂಬ ಎಲ್ಲದರ ಸೂತ್ರಧಾರಿ ತನ್ನ ಧ್ವನಿಯನ್ನು ಸೇರಿಸುತ್ತಿದೆ. 'ಮುತಾಲಿಕನನ್ನು ಹಿಂದಿನ ಜವಾಬ್ದಾರಿಗಳಿಂದ ಬಿಡುಗಡೆ ಮಾಡಲಾಗಿದೆ'ಎಂದು! ಆದರೆ ಸಂಘ ಪರಿವಾರದೊಂದಿಗೆ ಸಂಬಂಧ....?! 'ಹಳೆಯ ಜವಾಬ್ದಾರಿಗಳಿಂದ ಬಿಡುಗಡೆ ಮಾಡಲಾಗಿದೆ' ಎಂಬುದೇ ಸತ್ಯ. ಈಗ ವಹಿಸಿರುವುದು ಹೊಸ ಜವಾಬ್ದಾರಿ! ಶಿವಸೇನೆಯ ಮುಖದ ಮೂಲಕ ಹೊಸ ವಿಧ್ವಂಸಕ ಜವಾಬ್ದಾರಿ!

ಮುತಾಲಿಕ ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತಾನೆ. 'ನನ್ನ ಬದ್ಧತೆ ಹಿಂದುತ್ವಕ್ಕೆ. ಆರ್‌ಎಸ್‌ಎಸ್ ಚಿಂತನೆಯೇ ನನ್ನ ಅಂತರಾತ್ಮ'. ಅಂದರೆ ಇಲ್ಲಿ ಯಾರೂ ಯಾರನ್ನೂ ಯಾವುದನ್ನೂ ಬಿಟ್ಟಿಲ್ಲ. ಸಂಘ ಪರಿವಾರದ ಮೂಲ ಅಜೆಂಡಾ ಜಾರಿಗೆ ಇದೊಂದು ಹೊಸ ಅವತಾರ! ಮುತಾಲಿಕನೋ ಸಂಘದ ಕಟ್ಟಾಳು. ವಿಚಿತ್ರವೆಂದರೆ ತನಗೆ ಪ್ರತಿಸ್ಪರ್ಧಿ ಎಂದೆಲ್ಲಾ ಮುತಾಲಿಕ ಮಹಾಶಯ ಹೇಳಿಕೊಂಡರೂ ಬಿಜೆಪಿ ಅದರ ವಿರುದ್ಧ ಒಂದೇ ಒಂದು ದೂಸ್ರಾ ಮಾತನ್ನು ಆಡಿಲ್ಲ. ಅಂದರೆ?.... ಹಿಡನ್ ಅಜೆಂಡಾದ (ಬಚ್ಚಿಟ್ಟ) ಜಾರಿಗೆ ಹಲವು ಕವಲೊಡೆದ ಹಾದಿಗಳೇ!

ಹೌದು! ಇದರಲ್ಲಿ ಅನುಮಾನಕ್ಕೆ ಎಳ್ಳಷ್ಟು ಅವಕಾಶವಿಲ್ಲ! ಆರ್‌ಎಸ್‌ಎಸ್ ಎಂಬ 'ವಿಷವೃಕ್ಷ'ದ ಚಿಂತನೆ ಮತ್ತು ಕಾರ್ಯವಿಧಾನವೇ ಹಾಗೇ!


ಶಿವಸೇನೆ ಬಿಡಾರ!

ಮರಾಠಿಗಳ ಹಿತರಕ್ಷಣೆಗೆಂದೇ ತನ್ನ ಅವತಾರ ಎಂದು ಹೇಳಿಕೊಂಡು ಶಿವಸೇನೆ ಹುಟ್ಟಿತು. ಕನ್ನಡಿಗರು ಒಳಗೊಂಡು ದಕ್ಷಿಣ ಭಾರತದ, ವಿವಿಧ ಭಾಷಿಕರ ಮೇಲೆ ಮಾರಕ ಧಾಳಿಯನ್ನು ಹರಿಯಬಿಟ್ಟಿತು. ನಂತರ ಏರಿಳಿತದ ನಡುವೆ ಸಾಗಿದ ಶಿವಸೇನೆ ಅಂತಿಮವಾಗಿ ಹಿಂದುತ್ವದ ಬಿಡಾರ ದೊಳಗೆ ಬೀಡುಬಿಟ್ಟಿತು. ಬಿಜೆಪಿ ದೀರ್ಘಕಾಲದ ಏಕೈಕ ರಾಜಕೀಯ ಸಖನಾಗಿರುವ ಶಿವಸೇನೆಯದ್ದು ಅನೇಕ ವಿಧ್ವಂಸಕತೆಯ, ಕುಖ್ಯಾತಿ ಕ್ರೌರ್ಯಗಳ ದಾಖಲೆ.

> **ಕೆಲವೊಂದು ಜಾತಿಯ ಸರ್ಪಗಳ ಉಸಿರಿನಲ್ಲೂ ವಿಷವಿದೆ ಎನ್ನಲಾಗುತ್ತದೆ. ಅದು ಸುಳ್ಳೇ ಇರಬಹುದು. ಆದರೆ ಶಿವಸೇನೆಯಂತಹ ಒಂದು ವಿಷ ಜಂತು ಉಸಿರಾಡುವ ಪರಿಸರವೆಲ್ಲಾ ವಿಷಯಮವಾಗುವುದರ ಬಗ್ಗೆ ಯಾವುದೇ ಅನುಮಾನವಿಲ್ಲ. ಭೀಕರ ಕೋಮು ಹಿಂಸಾಚಾರದ ಚರಿತ್ರೆ-ವಿದ್ವೇಷದ ಸಿದ್ಧಾಂತ - ಫ್ಯಾಸಿಸ್ಟ್ ಸಂಸತಿಯ ಶಿವಸೇನೆ ಕರ್ನಾಟಕದಲ್ಲಿ ತಳವೂರಲು ಯತ್ನಿಸುವುದರ ಬಗ್ಗೆ - ಸಂಘ ಪರಿವಾರದ ಹುನ್ನಾರಗಳ ಬಗ್ಗೆ ಕಟ್ಟೆಚ್ಚರ ಅಗತ್ಯವಾಗಿದೆ.**

ಪ್ರತಿರೋಧ

ಇಂತಹ ಶಿವಸೇನೆ ರಾಜ್ಯದಲ್ಲಿ ವಿಸ್ತರಿಸಿಕೊಳ್ಳುವ ಹವಣಿಕೆಯ ಸಂದರ್ಭದಲ್ಲಿ ಪ್ರತಿರೋಧವೂ ವ್ಯಕ್ತವಾಗಿದೆ. ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ. ಹಲವು ಪ್ರಗತಿಪರರು ಧ್ವನಿ ಎತ್ತಿದ್ದಾರೆ. ಮಾಧ್ಯಮಗಳಲ್ಲಿ ವರದಿಯಾದಂತೆ ಕರ್ನಾಟಕ ರಕ್ಷಣಾ ವೇದಿಕೆ, ಕನ್ನಡ ಕೇಂದ್ರ ಚಳುವಳಿ ಯಂತಹ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಶಿವಸೇನೆಯ ಸಮಾವೇಶಗಳಿಗೆ ನುಗ್ಗಿದ್ದಾರೆ. ಸೀಮಿತ ದೃಷ್ಟಿಯಲ್ಲಿ ಟೀಕಿಸಿದ್ದಾರೆ. ಕನ್ನಡದ ಹಿರಿಯ ಸಾಹಿತಿಗಳು ಸೇನೆಯ ವಿರುದ್ಧ ಮಾತನಾಡಿದ್ದಾರೆ. ಈ ಪ್ರತಿರೋಧದ ಧ್ವನಿಯು ಭಾಷೆ, ಅಥವಾ ಗಡಿಗಳಂತಹ ಪ್ರಶ್ನೆಗಳಿಗೆ ಮಾತ್ರ ಸೀಮಿತ ಗೊಳ್ಳುವುದು ತೀರಾ ಮಿತಿಯಾಗುತ್ತದೆ. ಅಪಾಯದ ಒಟ್ಟು ಪರಿಸ್ಥಿತಿಯನ್ನು ಸಮಗ್ರವಾಗಿ, ಆಳವಾಗಿ ಗ್ರಹಿಸಬೇಕಾಗುತ್ತದೆ. ರಾಜಕೀಯ, ಸೈದ್ಧಾಂತಿಕ ಎಚ್ಚರವೂ ಹೋರಾಟದ ಸ್ವರೂಪವೂ ಇದರಿಂದಲೇ ನಿರ್ಧಾರವಾಗುತ್ತದೆ.



ವಿಧ್ವಂಸಕ ಅಜೆಂಡಾ

ಕನ್ನಡ ಸಂಘಗಳ ಕನ್ನಡ ಪರತೆಯನ್ನು ಪ್ರಶ್ನಿಸಿರುವ ಮುತಾಲಿಕ, ತನ್ನದೇ ಶೈಲಿಯ ಕನ್ನಡ ಪ್ರೀತಿಯನ್ನು ನಟಿಸಿದ್ದಾನೆ. ಬಾಬಾ ಬುಡನ್‌ಗಿರಿಯ ದರ್ಗಾ-ಪೀಠದ ಗುಹೆಯನ್ನು ವಿಮೋಚನೆಗೊಳಿಸುವ (ವಿಧ್ವಂಸಗೊಳಿಸುವ) ಕೋಮುದ್ವೇಷದ ಕಿಡಿ ಹೊತ್ತಿಸುವ ಸರದಿ ತನ್ನದೇ ಎಂದಿದ್ದಾನೆ. ಒಡನೆಯೇ ಕಮ್ಯುನಿಸ್ಟರು, ವಿಶೇಷವಾಗಿ ಸಿಪಿಐ(ಎಂ)- ಅದರ ಕೆಂಬಾವುಟದ ಮೇಲೆ ಹರಿಹಾಯ್ದಿದ್ದಾನೆ. ಶಿವಸೇನೆಯ ಅಜೆಂಡಾ ಅರಿಯಲು ಈ ಕೆಲವು ತುಣುಕುಗಳೇ ಸಾಕು!

ರಕ್ತ-ಸಿಕ್ತ ಇತಿಹಾಸ

ಈ ಶಿವಸೇನೆಯದ್ದು 39 ವರ್ಷಗಳ ರಕ್ತ-ಸಿಕ್ತ ಇತಿಹಾಸ! ಸ್ಥಾಪನೆಯಾದದ್ದು 1966 ಜೂನ್ 19 ರಂದು. ಹರಿದುಹಂಚಿಹೋಗಿದ್ದ ಮರಾಠಿ ಭಾಷಿಕ ಪ್ರದೇಶಗಳ (ಭಾಷಾವಾರು ಪ್ರಾಂತ್ಯ ರಚನೆಗಾಗಿ) ಒಗ್ಗೂಡುವಿಕೆಗೆ ನಡೆದ ಸಂಯುಕ್ತ ಮಹಾರಾಷ್ಟ್ರ ಚಳುವಳಿಯ ಉತ್ಕಟ ಪ್ರಜಾಸತ್ತಾತ್ಮಕ ವಾತಾವರಣದ ಸಂದರ್ಭ. ಇಂತಹ ಚಳುವಳಿಯ ನಾಯಕರಲ್ಲೊಬ್ಬರಾಗಿದ್ದ ಕೆ.ಎಸ್.ಠಾಕರೆಯವರು ಒಬ್ಬರು (ಬಾಳಾ ಠಾಕರೆ ಅಪ್ಪ) ಶಿವಸೇನೆ ಸ್ಥಾಪಿಸಿ ಪ್ರಾದೇಶಿಕ ಛಿದ್ರಕಾರಿ ಮನೋಭಾವಕ್ಕೆ ಬೀಜ ಇಟ್ಟರು. ಹಿಂದೆ ಪ್ರಸ್ತಾಪಿಸಿದಂತೆ ಮಹಾರಾಷ್ಟ್ರೀಯರ ಹಿತಕಾಯುವುದೇ ಗುರಿ ಎಂದ ಸೇನೆ ಮರಾಠಿಗರಿಗೆ ಉದ್ಯೋಗ ಇಲ್ಲದಿರುವುದಕ್ಕೆ ದಕ್ಷಿಣ ಭಾರತದವರು ಇಲ್ಲಿರುವುದೇ ಕಾರಣ ಎಂದು ಪ್ರತಿಪಾದಿಸಿತು, ಪ್ರಚಾರಿಸಿತು.

ಕಮ್ಯುನಿಸ್ಟರ ವಿರುದ್ಧ ಬಂಡವಾಳಗಾರರ ಬಂಟ

ದಕ್ಷಿಣ ಭಾರತದ ರಾಜ್ಯಗಳಲ್ಲದೇ ಗುಜರಾತ್ ಮುಂತಾದೆಡೆಯಿಂದಲೂ ಐತಿಹಾಸಿಕ ಕಾರಣಗಳಿಂದಾಗಿ ಬ್ರಿಟಿಷರ ಆಡಳಿತದಲ್ಲಿ ಆ ಪ್ರದೇಶದಲ್ಲಿ ಶ್ರಮಿಕವರ್ಗ ಕೈಗಾರಿಕೆ ಇತ್ಯಾದಿ ರಂಗದಲ್ಲಿ ದುಡಿಯುತ್ತಿತ್ತು. ಸೇನೆಯ ಧಾಳಿ ವಿಶೇಷವಾಗಿ 1966 ರಿಂದ 1975 ರವರೆಗೂ ನಿರ್ದಿಷ್ಟವಾಗಿ ಕನ್ನಡಿಗರನ್ನೂ ಒಳಗೊಂಡು ದಕ್ಷಿಣ ಭಾರತದ ದುಡಿಯುವವರು, ನಾಗರಿಕರ ಮೇಲೆ ನಡೆದವು. ಕೊಲೆಗಳು, ಲೂಟಿಗಳಿಗೆ ಲೆಕ್ಕವಿಲ್ಲವಾಯಿತು. ಇದರ ಜೊತೆ ಜೊತೆಯಲ್ಲೇ ಶಿವಸೇನೆ ಎತ್ತಿದ ಘೋಷಣೆ ಅಂದು ಪ್ರಬಲವಾಗಿದ್ದ ಕಮ್ಯುನಿಸ್ಟ್ ಚಳುವಳಿಯ ವಿರುದ್ಧ. ಬಾಂಬೆ ಮುಂತಾದ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ವರ್ಗವನ್ನು ಪ್ರಬಲವಾಗಿ ಸಂಘಟಿಸಿ ಹಲವಾರು ಧೀಮಂತ ಹೋರಾಟಗಳನ್ನು, ಸಾಮ್ರಾಜ್ಯಶಾಹಿ ಬ್ರಿಟೀಷರ ವಿರುದ್ಧ, ತ್ಯಾಗ ಬಲಿದಾನಗಳ ಮಹಾ ಸಮರವನ್ನು ಸಾರಿದ್ದು ಕೆಂಬಾವುಟದ ನೇತೃತ್ವದಲ್ಲಿಯೇ. ಕಾರ್ಮಿಕ ವರ್ಗದ ಈಸಮರಶೀಲತೆ, ಬಲ, ಒಗ್ಗಟ್ಟು, ಮಾಲೀಕ ವರ್ಗವನ್ನು ಕಂಗೆಡಿಸಿತ್ತು. ವಾಸ್ತವದಲ್ಲಿ ಕಮ್ಯುನಿಸ್ಟ್ ಚಳುವಳಿ ಹಾಗೂ ಕಮ್ಯುನಿಸ್ಟ್ ನೇತೃತ್ವದ ಟ್ರೇಡ್ ಯೂನಿಯನ್‌ಗಳನ್ನು ಮುರಿಯಲೆಂದೇ ಶಿವಸೇನೆ ಕಾರ್ಯಾರಂಭಿಸಿತು. ಕಡು ಕಮ್ಯುನಿಸ್ಟ್ ವಿರೋಧವನ್ನು ಆರಂಭದಿಂದೇ ತೋರಿಸಿತ್ತು. ಈ ಹಿನ್ನೆಲೆಯಲ್ಲಿ ಮರಾಠಿಗರ ಹಿತವೆಂಬುದು ಕೇವಲ ನೆಪ, ಆ ಮೂಲಕ ದುಡಿಯುವ ಜನರ, ಪ್ರಜಾಸತ್ತಾತ್ಮಕ ವಿಭಾಗಗಳಲ್ಲಿ ಒಗ್ಗಟ್ಟು ಮುರಿಯುವುದೇ ಮುಖ್ಯ ಧ್ಯೇಯವಾಗಿತ್ತು. ಆದ್ದರಿಂದಲೇ ಶಿವಸೇನೆಯ ಘೋಷಣೆ 'ಲಾಲ್ ಬಾವುಟ್ ಕೋ ಜಲಾದೋ' (ಕೆಂಪು ಬಾವುಟವನ್ನು ಸುಟ್ಟು ಹಾಕಿರಿ) 'ಬಜಾವೋ ಪುಂಜಿ, ಹಠಾವೋ ಲುಂಗಿ' (ಬಂಡವಾಳ ಉಳಿಸಿ, ಲುಂಗಿ ಓಡಿಸಿ) ಎಂಬುದು ಅದರ ಮುಖ್ಯ ಕರೆಯಾಗಿತ್ತು. ಇದಕ್ಕೆ ಅತಿದೊಡ್ಡ ಬಂಡವಾಳಗಾರರು, ಆಳುವ ವರ್ಗಗಳು ಪೂರ್ಣವಾಗಿ ಬೆಂಬಲಿಸಿ ನೆರವು ನೀಡಿದರು. ಇವರ ಕೃಪಾಕಟಾಕ್ಷದಿಂದಲೇ ಶಿವಸೇನೆ ಬಲಿಯುವಂತಾಯಿತು. ಗಮನಿಸ ಬೇಕಾದ ಅಂಶವೆಂದರೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಸುಮಾರು ಎರಡು ದಶಕಗಳ ಕಾಲ ನಗ್ನವಾಗಿ ಶಿವಸೇನೆಗೆ ಪೋಷಿಸಿ, ಬೆಂಬಲಿಸಿದ್ದು. 1990 ರ ದಶಕದ ಮಧ್ಯಾವಧಿಯಲ್ಲಿ ಮಾತ್ರವೇ ಸೇನೆ ಕಾಂಗ್ರೆಸ್ ವಿರುದ್ಧ ತಿರುಗಿದ್ದು.

ಸಂದರ್ಭಸಾಧಕ ರಾಜಕಾರಣ

ಮುಂದಿನ ವರುಷಗಳಲ್ಲಿಯೂ ಸಹ ಪ್ರಭುತ್ವದ ಬಲ, ಅಧಿಕಾರಶಾಹಿ, ಪೊಲೀಸ್ ಹಾಗೂ ಟಿ.ವಿ. ಪತ್ರಿಕೆಗಳಂತಹ ಮಾಧ್ಯಮಗಳು ಸತತ ನೆರವನ್ನು ಶಿವಸೇನೆಗೆ ನೀಡುತ್ತಾ ಬಂದವು. ಇಂತಹ ಶಿವಸೇನೆಗೆ ಕಾಂಗ್ರೆಸ್ ಅಲ್ಲದೇ ಇತರೆ ಬಹುತೇಕ ಬೂರ್ಜ್ವಾ ಪಕ್ಷಗಳು ಒಂದಿಲ್ಲ ಒಂದು ಹಂತದಲ್ಲಿ ಮೈತ್ರಿ ಮಾಡಿಕೊಂಡಿದ್ದು ಸಂದರ್ಭಸಾಧಕ ರಾಜಕಾರಣದ ಒಂದು ಉದಾಹರಣೆ.

ಕ್ರಿಮಿನಲ್ ಪಾತ್ರ

1966 - 75 ಇದರ ಪ್ರಭಾವ ಮುಂಬೈ ಮತ್ತು ಥಾಣೆ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಎರಡನೆ ಘಟ್ಟ ಅಂದರೆ 1975 ರಿಂದ 84 ರಲ್ಲಿ ಬೆಳವಣಿಗೆಯಲ್ಲಿ ರಾಜಕೀಯ ಪ್ರಭಾವದಲ್ಲಿಯೂ ನೆಲ ಕಚ್ಚಿತು. ತುರ್ತು ಪರಿಸ್ಥಿತಿಯ ಅದರ ಸಮರ್ಥನೆಯು ಜನರಿಂದ ತಿರಸ್ಕಾರಕ್ಕೆ ಒಳಗಾಗುವಂತೆ ಮಾಡಿದ್ದರಲ್ಲಿ ಸಹ ಒಂದು ಅಂಶ. ಅದರ ಮೂರನೇ ಘಟ್ಟ 1984 ರಿಂದ 95. ಆಕ್ರಮಣಕಾರಿ ಹಿಂದುತ್ವದ ಕೋಮುವಾದವನ್ನು ಅನುಸರಿಸಿತಲ್ಲದೆ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಧಾಳಿ ನಡೆಸಿತು. ಅಲ್ಲದೇ ದಲಿತ ವಿರೋಧಿಯಾಗಿಯೂ ಆಕ್ರಮಣ ಹರಿಯಬಿಟ್ಟು ಮೇಲ್ ಜಾತಿಯ ಕ್ರೋಢೀಕರಣಕ್ಕೆ ಮುಂದಾಯಿತು. ನಾಲ್ಕನೆಯ ಘಟ್ಟ 1995 ರ ನಂತರ ಅಧಿಕಾರಕ್ಕೆ ಬಂದಿದ್ದು ಬಹುರಾಷ್ಟ್ರೀಯ ಕಂಪನಿಗಳು, ದೇಶಿಯ ಬಂಡವಾಳಗಾರ, ಸ್ಥಾಪಿತ ಹಿತಾಸಕ್ತಿಗಳ ಕ್ರಿಮಿನಲ್‌ಗಳ ರಕ್ಷಕನಾಗಿ ವರ್ತಿಸಿದೆ.

ಮಹಾರಾಷ್ಟ್ರದಲ್ಲಿ ಶಿವಸೇನೆಯ ಬೆಳವಣಿಗೆ ಹಾಗೂ ವಹಿಸುತ್ತಿರುವ ಪಾತ್ರದ ಕುರಿತಂತೆ ವಿಷದವಾಗಿ ಅಧ್ಯಯನ ಮಾಡಿರುವ ಡಾ. ಅಶೋಕ ಧವಳೆ ಅತ್ಯಂತ ಮಹತ್ವದ ಹಲವಾರು ಸಂಗತಿಗಳನ್ನು ಎತ್ತಿ ತೋರಿಸಿದ್ದಾರೆ. ಸಮಾಜದಲ್ಲಿ ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟು, ಅದು ಹುಟ್ಟುಹಾಕುವ ಅತೃಪ್ತಿ, ಹಿಂದಿನ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳು, ಶಿವಸೇನೆಯಂತಹ ಅಪಾಯಕಾರಿ ಶಕ್ತಿಗಳ ಬೆಳವಣಿಗೆಗೆ ತಳಹದಿ ನಿರ್ಮಿಸಿದವು. ಅದರ ಕೋಮುವಾದಿ ವಿಷಪ್ರಚಾರ ಮತ್ತು ಕೃತ್ಯಗಳು ಮೇಲುಗೈ ಸಾಧಿಸುವಂತಾದ ಸಂಗತಿಗಳನ್ನು ಅವರು ಗಮನಿಸುತ್ತಾರೆ.

ಫ್ಯಾಸಿಸ್ಟ್ ಮುಖ

ಶಿವಸೇನೆ 1989 ರ ಅಡ್ವಾಣಿಯವರ ಅಯೋಧ್ಯ ರಥಯಾತ್ರೆ ಸಂದರ್ಭದಲ್ಲಿ ಸಕ್ರಿಯವಾಗಿ ಧುಮುಕಿತು. 1992 ರಲ್ಲಿ ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಮುಂಬೈ ಮತ್ತು ಮಹಾರಾಷ್ಟ್ರದ ಹಲವಾರು ಜಿಲ್ಲೆಗಳಲ್ಲಿ ಅದು ವ್ಯಾಪಕವಾದ ಕೋಮು ಗಲಭೆಗಳನ್ನು ನಡೆಸಿತಲ್ಲದೇ ನೂರಾರು ಜನರ ಹತ್ಯೆಗಳಲ್ಲಿ, ಬೆಂಕಿಹಚ್ಚುವಿಕೆ, ಲೂಟಿ, ಅತ್ಯಾಚಾರದಂತಹ ಅಮಾನುಷ ಕೃತ್ಯಗಳನ್ನು ಸಂಘಟಿಸಿತು. ಈ ಭೀಕರ ಹತ್ಯಾಕಾಂಡದ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿರುವ ಶ್ರೀ ಕೃಷ್ಣ ಆಯೋಗವು ಬಾಳಾ ಠಾಕ್ರೆಯನ್ನು ಹಾಗೂ ಶಿವಸೇನೆಯ ಕುಖ್ಯಾತ ಕ್ರೌರ್ಯದ ಪಾತ್ರವನ್ನು ನಿಖರವಾಗಿ ಗುರುತಿಸಿದೆ. ಇದರೊಂದಿಗೆ ಆರ್‌ಎಸ್‌ಎಸ್ ಪಡೆ ಸಾಥಿ ನೀಡಿತ್ತು.

ಅಲ್ಪಸಂಖ್ಯಾತರು, ದಲಿತರು, ಕಮ್ಯುನಿಸ್ಟರ ವಿರುದ್ಧ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು, ಜಾತ್ಯತೀತ ಮೌಲ್ಯಗಳ ವಿರುದ್ಧ ಅತ್ಯಂತ ಹೇಯವಾದ ಧಾಳಿಯನ್ನು ಠಾಕ್ರೆ ಮಾಡಿದ್ದಾರೆ. ನೆಲದ ಕಾನೂನು, ಸಂವಿಧಾನವನ್ನು, ಶಾಸನಬದ್ಧ ಆಡಳಿತವನ್ನು ಧಿಕ್ಕರಿಸಿದ್ದಾರೆ. ಅವರ ಕೋಮುದ್ವೇಷದ, ಮತಾಂಧತೆ ಕೆರಳಿಸುವ ಭಾಷಣಗಳಿಗೆ ಎಣೆ ಇಲ್ಲ. ಹೀಗಾಗಿ ಚುನಾವಣಾ ಆಯೋಗವು ಶಿವಸೇನೆ ಮುಖ್ಯಸ್ಥ ಬಾಳಾಠಾಕ್ರೆಯ 'ಮತದಾರಿಕೆ'ಯನ್ನೇ ಅನರ್ಹಗೊಳಿಸಿತು. ಅಂತಹ ಹಲವಾರು ಪ್ರಕರಣಗಳು ದಾಖಲಾಗಿವೆ. ಆದರೆ ಅಂತಹ ಕೇಸ್‌ಗಳನ್ನು ಶಿವಸೇನೆ-ಬಿಜೆಪಿ ಸರ್ಕಾರ ಹಿಂತೆಗೆದುಕೊಂಡಿತು. ಅದು ಅಧಿಕಾರದ ಅವಧಿಯಲ್ಲಿ ನಡೆಸಿದ ಭ್ರಷ್ಟಾಚಾರ-ಹಗರಣಗಳಿಗೆ ಲೆಕ್ಕವಿಲ್ಲ. ಇದು ಕ್ರಿಮಿನಲ್ ಗ್ಯಾಂಗ್‌ಗಳ ಕೂಟವಾಗಿರುವುದು ಹೊಸ ಸಂಗತಿಯೇನಲ್ಲ. ಸರ್ಕಾರದಲ್ಲಿರುವಾಗ ಉದಾರೀಕರಣ - ಜಾಗತೀಕರಣದ ಆರಾಧಕನಾಗಿ ಕೈಗೊಂಡ ಜನವಿರೋಧಿ, ದೇಶದ್ರೋಹಿ ನೀತಿಗಳು ದೇಶಪ್ರೇಮಿ, ಧರ್ಮರಕ್ಷಣೆಯ ಅದರ ಹುಸಿ ಮಾತುಗಳನ್ನು ಅರೆ ಫ್ಯಾಸಿಸ್ಟ್ ಮುಖವನ್ನು ತೆರೆದಿಟ್ಟಿವೆ.

ಶಿವಸೇನೆ ಆರ್‌ಎಸ್‌ಎಸ್ ನ ಪರಿವಾರದ ಭಾಗವಾಗಿರುವಂತೆ, ನಿಯಂತ್ರಣದಲ್ಲಿರುವಂತೆ ಕೆಲಸ ಮಾಡುತ್ತಿದೆ. ಸಂಘ ಪರಿವಾರದ ಸೈದ್ಧಾಂತಿಕತೆಗೆ ಬದ್ಧತೆ ತೋರಿಸಿದೆ. ಶಿವಸೇನೆಯೂ ಸಹ ಕೋಮುವಾದಿ ಫ್ಯಾಸಿಸ್ಟ್ ಮಾದರಿಯನ್ನೇ ಪ್ರತಿಪಾದಿಸುತ್ತದೆ. 'ಸಾಂಸ್ಕೃತಿಕ ರಾಷ್ಟ್ರೀಯ ವಾದ'

ಪುಟ 9 ಕ್ಕೆ

ಸೆಪ್ಟೆಂಬರ್ 29 ರ ಚಳುವಳಿ...............

ಕೊಡಗು : ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆನೀಡಿದ ಸೆ.29ರ ಅಖಿಲ ಭಾರತ ಮುಷ್ಕರಕ್ಕೆ ಕೊಡಗು ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಅಖಿಲ ಭಾರತ ಮಟ್ಟದ ಬೇಡಿಕೆಗಳಲ್ಲದೆ, ಜಿಲ್ಲೆಯ ಕೆಲವು ಬೇಡಿಕೆಗಳನ್ನೊಳಗೊಂಡ ಸುಮಾರು 5,000 ಕರಪತ್ರ ಮುದ್ರಿಸಿ ಕಳೆದ 15 ದಿನಗಳಿಂದ ಸಾಮೂಹಿಕ ಸಂಘಟನೆಯ ಕಾರ್ಯಕರ್ತರು ಮನೆ ಮನೆಗೆ ತೆರಳಿ ಕರಪತ್ರ ಹಂಚಲಾಗಿತ್ತು. ತೋಟಗಳಲ್ಲಿ ಗೇಟ್ ಸಭೆಗಳನ್ನು ನಡೆಸಲಾಯಿತು. ಎಲ್.ಐ.ಸಿ., ಬ್ಯಾಂಕ್, ಬಿ.ಎಸ್.ಎನ್.ಎಲ್., ಸಿ.ಐ.ಟಿ.ಯು., ಪಿ.ಸಿ.ಇ.ಯು, ಡಿ.ವೈ.ಎಫ್.ಐ., ಕೆ.ಪಿ.ಆರ್.ಎಸ್. ಕಟ್ಟಡ ಕಾರ್ಮಿಕ ಸಂಘ, ರಾಜ್ಯ ಸರಕಾರಿ ನೌಕರರ ಒಕ್ಕೂಟ, ಪ್ರತ್ಯೇಕವಾಗಿ ತಮ್ಮ ತಮ್ಮ ಬೇಡಿಕೆಗಳನ್ನು ಪ್ರಚುರ ಮಾಡಿದ್ದರು.

ಬೆಳಿಗ್ಗೆ 11 ಗಂಟೆ ಸುಮಾರಿಗೆ 3 ಸಾವಿರದಿಂದ 3500 ಕಾರ್ಮಿಕರು ಜಮಾಯಿಸಿದರು. ನಗರದಲ್ಲಿ ಅವರ ಅವರ ಕಛೇರಿಯಿಂದ ಬೇರೆ ಬೇರೆ ಸಂಘಟನೆಯ ಬ್ಯಾನರ್ ಅಡಿಯಲ್ಲಿ ಮೆರವಣಿಗೆ ಮುಖಾಂತರ ಗಾಂಧಿ ಮೈದಾನ ಸೇರಿದರು, 11.30 ಗಂಟೆಗೆ ಪ್ರಾರಂಭವಾದ ಮೆರವಣಿಗೆ ಸುಮಾರು ಎರಡು ಗಂಟೆಗಳ ಕಾಲ ಇಡೀ ಮಡಿಕೇರಿಯನ್ನು ಕೆಂಪು ಬಾವುಟ ಹಿಡಿದ ಜನರ ಮೆರವಣಿಗೆ ನೋಡುತ್ತಿದ್ದ ಜನರಿಗೆ ಹೊಸ ಯುಗದ ಕಡೆ ನೆನೆಪಿಸುವಂತಾಗಿತ್ತು.

ಎಲ್ಲಿ ನೋಡಿದರು 'ಕೆಂಬಾವುಟ'. ಜಾಗತೀಕರಣಕ್ಕೆ ಧಿಕ್ಕಾರ, ಖಾಸಗೀಕರಣಕ್ಕೆ ಧಿಕ್ಕಾರ, ಅಮೇರಿಕದ ಸೇವಕರಂತೆ ವರ್ತಿಸುವ ಯು.ಪಿ.ಎ. ಸರಕಾರಕ್ಕೆ ಧಿಕ್ಕಾರ, ಯು.ಪಿ.ಎ. ಸರಕಾರಕ್ಕೆ ಎಚ್ಚರಿಕೆ ಎನ್.ಡಿ.ಎ.ಗೆ ಅದಗತಿ ನಿಮಗೂ ಆದೀತು. ಎಚ್ಚರವಹಿಸಿ ಎಡಪಕ್ಷಗಳ ಸಲಹೆಯನ್ನು ತಿರಸ್ಕರಿಸದಿರಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಜಾರಿಗೆ ತನ್ನಿ ಎಂಬ ಘೋಷಣೆ ಮುಗಿಲು ಮುಟ್ಟಿತ್ತು.

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದ ವಿದೇಶಿ ವ್ಯಾಮೋಹ, ಕಾರ್ಮಿಕ-ರೈತ ವಿರೋಧಿ ನೀತಿಯನ್ನು ಖಂಡಿಸಿ, ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಲವಾರು ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಇಂದು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಆಡಳಿತ ವ್ಯವಸ್ಥೆಯ ವಿರುದ್ಧ ಘೋಷಣೆಗಳನ್ನು ಮೊಳಗಿಸಿದರು.

ನಗರದ ಗಾಂಧಿ ಮೈದಾನದಿಂದ ಹೊರಟ ಬೃಹತ್ ಮೆರವಣಿಗೆ ಖಾಸಗಿ ಬಸ್ ನಿಲ್ದಾಣ, ಕಾಲೇಜು ರಸ್ತೆ, ಕೊಹಿನೂರು ರಸ್ತೆ, ಗೌಳಿಬೀದಿ ಮಾರ್ಗವಾಗಿ ಕೋಟೆ ಆವರಣದಲ್ಲಿ ಸಮಾವೇಶಗೊಂಡಿತು. ಮೆರವಣಿಗೆಯುದ್ದಕ್ಕೂ ವಿದೇಶಿ ವ್ಯಾಮೋಹಕ್ಕೆ ಒಳಗಾಗುತ್ತಿರುವ ರೈತ ಮತ್ತು ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಧಿಕ್ಕಾರಗಳನ್ನು ಕೂಗಿದರು. ಈ ಸಂದರ್ಭ ಜಿಲ್ಲಾಡಳಿತದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸಿದ ಪ್ರತಿಭಟನಾಕಾರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಕೊಡಗಿನ ಪ್ರಮುಖ ವಾಣಿಜ್ಯ ಬೆಳೆಗಳ ದರ ಕುಸಿತದಿಂದ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗುವ ವ್ಯವಸ್ಥೆ ಮಾಡಬೇಕು. ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಬೆಳೆಹಾನಿಯಾಗಿದ್ದು, ಈ ಹಿನ್ನೆಲೆಯಲ್ಲಿ ರೈತರು ಪಡೆದಿರುವ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಬೇಕು. ಕೊಡಗಿನ ವಿಧಾನಸಭಾ ಕ್ಷೇತ್ರಗಳನ್ನು ಮೊಟಕುಗೊಳಿಸದೆ ಪ್ರತ್ಯೇಕ ಲೋಕಸಭಾ ಸ್ಥಾನ ನೀಡಬೇಕೆಂದು ಆಗ್ರಹಿಸಿದರು. ಕಾರ್ಮಿಕರ ಪರ ಬೇಡಿಕೆಗಳನ್ನು ಈಡೇರಿಸಬೇಕು. ಶ್ರೀಮಂತರಿಂದ ಬರಬೇಕಾದ 'ಎನ್‌ಪಿಎ' ಸಾಲವನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸಬೇಕು, ಹೊಸ ಸರಕಾರಿ ನೌಕರರಿಗೆ ನಿವೃತ್ತಿ ವೇತನ ಜಾರಿಗೆ ತರಬೇಕು, ಸಮಗ್ರ ಭೂ ಸುಧಾರಣೆ ಜಾರಿಗೊಳಿಸಬೇಕು, ಸಂಪರ್ಕ ವಲಯ ರಕ್ಷಣಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ತಡೆಯಬೇಕು. ಅಸಂಘಟಿತ ಮತ್ತು ಕೃಷಿ ಕಾರ್ಮಿಕರ ಸೇವಾ ಭದ್ರತೆ, ಸಾಮಾಜಿಕ ಭದ್ರತೆಗೆ ಕೇಂದ್ರೀಯ ಶಾಸನ ರಚಿಸಬೇಕೆಂದು ಒತ್ತಾಯಿಸಿದರು. ನಷ್ಟದಲ್ಲಿರುವ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಬೇಕು. ಉದ್ಯೋಗ ಕಡಿತ, ಗುತ್ತಿಗೆ ಪದ್ಧತಿ ನಿಲ್ಲಿಸಬೇಕು. ನೌಕರರಿಗೆ 6ನೇ ವೇತನ ಮಂಡಳಿ ರಚಿಸಬೇಕು. ರಾಷ್ಟ್ರೀಯ ವಿದ್ಯುತ್ ನೀತಿಯನ್ನು ಪುನರ್ ಪರಿಶೀಲಿಸಬೇಕು.



ರಾಯಚೂರಿನ ತಾಲ್ಲೂಕಿನ ಕಲ್ಮಲದಲ್ಲಿ ರಸ್ತೆ ತಡೆ

ಜಾಗತೀಕರಣದ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿತರುವುದನ್ನು ನಿಲ್ಲಿಸಬೇಕು. ಮಹಿಳಾ ಕಾರ್ಮಿಕರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಶಾಸನ ತರಬೇಕು. ಕಟ್ಟಡ ಕಾರ್ಮಿಕರ ಕಾನೂನು ನಿಯಮಾವಳಿಗಳನ್ನು ರಚಿಸಬೇಕು ಅಂಗನವಾಡಿ ಕಾರ್ಯಕರ್ತರನ್ನು ಖಾಯಂಗೊಳಿಸಬೇಕು.

ಕೊಡಗು ಮೀಟರ್ಸ್‌ಗೆ ಅನುದಾನ ನೀಡಬೇಕೆಂದು ಆಗ್ರಹಿಸಿದರಲ್ಲದೇ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು.

ಬಿಎಸ್‌ಎನ್‌ಎಲ್‌ಯುನ ಜಿಲ್ಲಾಧ್ಯಕ್ಷ ಜಿ.ಜಿ.ನಾಯಕ್ ಪ್ರಧಾನ ಕಾರ್ಯದರ್ಶಿ ವಿ.ಜೆ.ಆಂಥೋಣಿ, ಮುಖಂಡ ಚಂದ್ರಮೋಹನ್ ಅಂಥೋಣಿ ಅಲ್ಫೋನ್ಸ, ಎನ್‌ಎಫ್‌ಇಟಿಯ ಎನ್.ಕೆ. ಮೋಹನ್ ಕುಮಾರ್, ಮಹಾಲಿಂಗೇಶ್ವರ ಭಟ್, ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ಬಿ.ಎಸ್.ಸದಾನಂದ ಕುಮಾರಸ್ವಾಮಿ, ಕಟ್ಟಡ ಕಾರ್ಮಿಕರ ಸಂಘದ ಐ.ಆರ್.ಪ್ರಮೋದ್, .ಸುಕುಮಾರ್, ಡಿವೈಎಫ್ಐನ ಪೀಟರ್ ಲೋಬೋ, ವಸಂತ ಕುಮಾರ್ ಹೊಸಮನೆ, ಪ್ರಾಂತ ರೈತ ಸಂಘದ ವೀರಾಸ್ವಾಮಿ, ಕಾರ್ಮಿಕ ಮುಖಂಡ ಎನ್.ಡಿ. ಕುಟ್ಟಪ್ಪ, ಜೀವ ವಿಮಾ ನಿಗಮದ ಶ್ರೀಮತಿ ನೀರಜ ಹೊಳ್ಳ ಅವರುಗಳ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ ನಡೆಯಿತು.



ಕೊಡಗು

ಬೆಳಗಾವಿಯಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳಿಂದ ಭವ್ಯ ಮೆರವಣಿಗೆ

ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿವಿಧ ಕಾರ್ಮಿಕ ಸಂಘಟನೆಗಳು ನೀಡಿದ್ದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಕರೆಗೆ ಓಗೊಟ್ಟು ಗುರುವಾರ ಬೆಳಗಾವಿನಗರದಲ್ಲಿ ಸಿಐಟಿಯು, ವಿಮಾ ಕ್ಷೇತ್ರದ ನೌಕರರು, ಬ್ಯಾಂಕ್ ಕಾರ್ಮಿಕರು, ಅಂಗನವಾಡಿ, ಮಧ್ಯಾಹ್ನ ಬಿಸಿ ಊಟದ ಕಾರ್ಯಕರ್ತರು ಸೇರಿದಂತೆ 18ಕ್ಕೂ ಹೆಚ್ಚು ಸಂಘಟನೆಗಳು ಜೊತೆಗೂಡಿ ಬೃಹತ್ ರ್‍ಯಾಲಿ ನಡೆಸಿದರು.



ಬಿಜಾಪುರ

ಈ ಹಿನ್ನೆಲೆಯಲ್ಲಿ ನಗರದಲ್ಲಿ ಬ್ಯಾಂಕ್ ವಹಿವಾಟು ಸ್ಥಗಿತ ಗೊಂಡಿತ್ತು. ಆಟೋರಿಕ್ಷಾಗಳು ರಸ್ತೆಗಳಿಯದೇ ಒಳಗೇ ಉಳಿದಿದ್ದವು. ಜೀವ ವಿಮಾ ಮುಷ್ಕರದಿಂದ ಪ್ರಭಾವಿತಗೊಂಡಿದ್ದವು. ಮುಷ್ಕರ ಶಾಂತಿಯುತವಾಗಿ ನೆರವೇರಿದರೂ ಸಾಮಾನ್ಯ ಜನಜೀವನ ಏರುಪೇರಾಗಿತ್ತು. ಬೆಳಗಾವಿಯ ಸರದಾರ ಹೈಸ್ಕೂಲ್ ಮೈದಾನದಲ್ಲಿ ಸೇರಿದ ಸಿಐಟಿಯು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ವಿಮಾ ನೌಕರ ಸಂಘ, ಬ್ಯಾಂಕ್ ಸಂಘಟನೆಗಳು, ಎ.ಐ.ಟಿ.ಯು.ಸಿ. ಔಷಧ ಪ್ರತಿನಿಧಿಗಳು, ಕಾಲೇಜು ರಸ್ತೆ, ಮಾರುತಿ ಗಲ್ಲಿ, ಗಣಪತಿ ಗಲ್ಲಿ ಮೂಲಕ ಜಿಲ್ಲಾಧಿಕಾರಿಗಳ ಕಛೇರಿ ಆವರಣಕ್ಕೆ ಮೆರವಣಿಗೆ ನಡೆಸಿದರು. ಅಲ್ಲದೇ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಮನವಿ ಅರ್ಪಿಸಿದರು.

ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು ಹಣಕಾಸು ವಲಯದ ಖಾಸಗೀಕರಣ ಬೇಡ ಎಂದು ಆಗ್ರಹಿಸಿದರು. ಬೆಳಗಾವಿ ನಗರದ ರಸ್ತೆಗಳ ದುರಸ್ತಿಗೆ ಕ್ರಮ ಜರುಗಿಸಬೇಕು. ಬಿಸಿಯೂಟ ಯೋಜನೆಯನ್ನು ಖಾಸಗೀಕರಣ ಮಾಡಬಾರದು ಎಂಬಿತ್ಯಾದಿ ಬೇಡಿಕೆಗಳನ್ನೂ ಈಡೇರಿಸಲು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ಅಧ್ಯಕ್ಷ ಕಾಂ. ಸಿ.ಎ.ಖರಾಡೆ, ವಿಮಾ ರಂಗದ ಪಿ.ಎ.ಜೋಸೆಫ್, ಬ್ಯಾಂಕಿಂಗ್ ಕ್ಷೇತ್ರದ ಏಕನಾಥ ಗಿಂಡೆ, ಜಿ.ಎಂ.ಜೈನೇಖಾನ್, ಎನ್.ಪಿ.ಜಮಕಿ, ಮುಂತಾದವರು ವಹಿಸಿದ್ದರು.

ರಾಮದುರ್ಗದಲ್ಲಿ ನೂರಾರು ಬೀಡಿ ಕಾರ್ಮಿಕರು, ಅಂಗನವಾಡಿ ನೌಕರರು, ಅಕ್ಷದಾಸೋಹ ಕಾರ್ಯಕರ್ತೆಯರು ಮತ್ತು ಗ್ರಾಮ ಪಂಚಾಯತಿ ನೌಕರರು ಭಾರೀ ಮೆರವಣಿಗೆ, ಮತಪ್ರದರ್ಶನ ನಡೆಸಿದ್ದಾರೆ. ಬ್ಯಾಂಕುಗಳು ವಹಿವಾಟು ನಡೆಸಲಿಲ್ಲ. ವ್ಹಿ.ಪಿ.ಕುಲಕರ್ಣಿ ಮತ್ತಿತರರು ನೇತೃತ್ವ ವಹಿಸಿದ್ದರು.

ಜಿಲ್ಲೆಯ ರಾಯಬಾಗದಲ್ಲಿ ಅಂಗನವಾಡಿ ನೌಕರರು ಬೃಹತ್ ಮೆರವಣಿಗೆ ನಡೆಸಿದ್ದಾರೆ. ಸವದತ್ತಿ, ಅಥಣಿ, ಬೈಲಹೊಂಗಲಗಳಲ್ಲಿ ಗ್ರಾಮ ಪಂಚಾಯಿತಿ ನೌಕರರು ಮೆರವಣಿಗೆ, ಪ್ರತಿಭಟನಾ ಸಭೆ ನಡೆಸಿದ್ದಾರೆ. ಚಿಕ್ಕೋಡಿಯಲ್ಲಿ ಸರಕಾರಿ ನೌಕರರು ಮೆರವಣಿಗೆ ಮುಷ್ಕರ ನಡೆಸಿದ್ದಾರೆ.

ವಿಜಾಪುರ : ವಿವಿಧ ಸಂಘಟನೆಗಳು ತಮ್ಮ ತಮ್ಮ ಬ್ಯಾನರ್‌ಗಳ ಅಡಿಯಲ್ಲಿ ಎಲ್ಲ ಜನತೆಯೊಂದಿಗೆ ಮೆರವಣಿಗೆ ಮುಖಾಂತರ ಸಿದ್ದೇಶ್ವರ ಗುಡಿಯು ಮುಂದೆ ಸೇರಿ ಬೃಹತ್ ಮೆರವಣಿಗೆಯಾಗಿ ಮುಖ್ಯ ಬೀದಿಗಳಲ್ಲಿ "ಕೇಂದ್ರ ಹಾಗೂ ರಾಜ್ಯ ಸರಕಾರಗಳ ರೈತ-ಕಾರ್ಮಿಕ-ಜನ ವಿರೋಧಿ ನೀತಿಗೆ ಧಿಕ್ಕಾರ, ಖಾಸಗೀಕರಣಕ್ಕೆ ಧಿಕ್ಕಾರ" ಎಂದು ಮುಗಿಲು ಮುಟ್ಟಿದಂತೆ ಘೋಷಣೆ ಕೂಗುತ್ತಾ ಗಾಂಧಿ ಚೌಕದಲ್ಲಿ ಸೇರಿ ರಸ್ತೆ ತಡೆ ನಡೆಸಲಾಯಿತು. ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಭೀಮಸಿ ಕಲಾದಗಿ ಮಾತನಾಡಿ ಹಿಂದಿನ ಕೇಂದ್ರ ಸಮ್ಮಿಶ್ರ ಎನ್.ಡಿ.ಎ. ಸರಕಾರದ ನೀತಿಯನ್ನೆ ಮುಂದುವರಿಸುತ್ತಾ, ವಿದ್ಯುತ್ ಕಾಯ್ದೆ 2003, ಎ.ಪಿ.ಎಂ.ಸಿ. ಕಾಯ್ದೆ 2003, ಹಾಗೂ ಬೀಜ ಕಾಯ್ದೆ 2004 ಈ ಕಾಯ್ದೆಗಳಿಂದ ರೈತರ ವರ್ತಕರ ಕಾರ್ಮಿಕರ ಹಕ್ಕುಗಳನ್ನು ಕಸಿದು ಕೊಳ್ಳುವುದನ್ನು ಕಟುವಾಗಿ ಟೀಕಿಸಿದರು.

ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಸಾರ್ವಜನಿಕರ ಮೇಲೆ, ರೈತ ಕಾರ್ಮಿಕರ ಮೇಲೆ ದುಷ್ಪರಿಣಾಮ ಬೀರುತ್ತದೆ. ರೈತ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ಮಾಡಬೇಕಂತಾ ಕರೆ ಕೊಟ್ಟರು.

ಸಮಗ್ರ ನೀರಾವರಿ ಯೋಜನೆಗಳು ಜಾರಿಗೆ ತರಲು ರಾಜ್ಯ ಸರಕಾರ ವಿಫಲವಾಗಿದೆ. ನೆರೆ ಹಾವಳಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಸರಿಯಾಗಿ ಪರಿಹಾರಧನ ವಿತರಣೆ ಮಾಡದೇ ಇದ್ದುದನ್ನು, ದುರುಪಯೋಗವನ್ನು ತಡೆಗಟ್ಟಬೇಕು. ಕೃಷ್ಣಾ, ಭೀಮಾ ನದಿಯಿಂದ ಕೆರೆಗಳಿಗೆ ನೀರು ಪೂರೈಸಬೇಕು. ಬೆಳೆ ವಿಮಾ ಹಣವನ್ನು ಬೆಳೆಗಳಿಗೆ ಕೊಡಬೇಕು ಎಂದು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನವಿರೋಧಿ ನೀತಿ ಹಾಗೂ ರೈತ ಕಾರ್ಮಿಕರ ವಿರೋಧಿ ನೀತಿಯನ್ನು ಖಂಡಿಸಿ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು ಎಂದೂ ಕರೆ ಕೊಟ್ಟರು, ಅರ್ಧ ಗಂಟೆ ಮೇಲ್ಪಟ್ಟು ರಸ್ತೆ ತಡೆ ಮಾಡಿ ನಂತರ ಮೆರವಣಿಗೆ ಹೊರಟು ಕೇಂದ್ರ ಬಸ್ ನಿಲ್ದಾಣಕ್ಕೆ ಹೋಗಿ ಗೇಟ್ ಮುಂದೆ ಸಭೆ ನಡೆಸಲಾಯಿತು. ಬಸ್ ಸಂಚಾರ, ಸಿಟಿ ಬಸ್ ಸಂಚಾರ ಸ್ಥಗಿತಗೊಂಡಿದ್ದು ಅಂಗಡಿ ಮುಂಗಟ್ಟು ಬಂದ್ ಮಾಡಿದರು.

ಮೆರವಣಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ತಲುಪಿತು. ರಾಜೇಂದ್ರ ಕಾವಿ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಅಧ್ಯಕ್ಷರು, ಗಂಗಾಧರ ಸಾಲಕ್ಕಿ, ಬಿ.ಎಸ್.ಎನ್.ಎಲ್. ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ, ಸಿ.ಎ. ಗಮಟೆಪ್ಪ ಗೋಳ ಗ್ರಾಮೀಣ ಬ್ಯಾಂಕ್, ವಿಜಯಹೊಸೂರ ಬ್ಯಾಂಕ್ ನೌಕರರ ಒಕ್ಕೂಟದ ಸಂಘಟನೆಯ ಅಧ್ಯಕ್ಷರು, ಎ.ಐ.ಟಿ.ಯು.ಸಿ. ಪ್ರಕಾಶ ಹಿಟ್ನಳ್ಳಿ, ಅಶೋಕ ಚಂಚಲಕರ, ದಿನಗೂಲಿ ನೌಕರರ ಜಿಲ್ಲಾ ಅಧ್ಯಕ್ಷರಾದ ವಿರುಪಾಕ್ಷ ಮಾದರ, ನದಾಫ ಎಲ್.ಐ.ಸಿ. ನೌಕರರ ಸಂಘ, ರಾಜ್ಯ ರೈತ ಸಂಘದ ಸಿದ್ರಾಮ ರಂಜೂಣಗಿ, ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಐ.ಗದಗಿನಮಠ, ಎಸ್.ಆರ್.ವಿಭೂತಿ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು, ಅಂಚೆ ನೌಕರರ ಸಂಘದ ಬಸವರಾಜ ಹೂಗಾರ, ಕಾರ್ಯದರ್ಶಿ, ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ, ಇವರೆಲ್ಲರೂ ಕೇಂದ್ರ ಹಾಗೂ ಜಿಲ್ಲೆಯ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿದರು. ಸಾರ್ವತ್ರಿಕ ಮುಷ್ಕರ

ಪುಟ 4 ಕ್ಕೆ

ಕೇರಳ : ಎಲ್‌ಡಿಎಫ್ ಗೆ ಭರ್ಜರಿ ಗೆಲುವು



ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಅಭೂತಪೂರ್ವ ವಿಜಯ ಸಾಧಿಸಿದೆ. ಆಂಧ್ರ ಪ್ರದೇಶದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಿಪಿಐ(ಎಂ) ಪಕ್ಷದ ಬಲ ದ್ವಿಗುಣಗೊಂಡಿದೆ. ಅಂಡಮಾನ್-ನಿಕೊಬಾರ್‌ನಲ್ಲಿ ಸಹ ಸಿಪಿಐ(ಎಂ) ಪಕ್ಷ ಗಮನಾರ್ಹ ಮುನ್ನಡೆ ಸಾಧಿಸಿದೆ.

ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎಡ ಪ್ರಜಾಪ್ರಭುತ್ವ ರಂಗ (ಎಲ್‌ಡಿಎಫ್) ಭರ್ಜರಿ ಜಯಗಳಿಸಿದೆ. ಎಲ್‌ಡಿಎಫ್ 14 ರಲ್ಲಿ 11 ಜಿಲ್ಲಾ ಪಂಚಾಯತಿಗಳನ್ನು ಗೆದ್ದಿದೆ. 53 ನಗರಸಭೆಗಳಲ್ಲಿ 34 ಎಲ್‌ಡಿಎಫ್ ಗೆದ್ದಿದೆ. ಕಳೆದ ಬಾರಿ 15 ನಗರಸಭೆಗಳಲ್ಲಿ ಎಲ್‌ಡಿಎಫ್ ಗೆದ್ದಿತ್ತು. ಎಲ್ಲಾ ಐದು ಮಹಾನಗರ ಪಾಲಿಕೆಗಳು ಎಲ್‌ಡಿಎಫ್‌ನ್ನು ಆರಿಸಿವೆ. ತ್ರಿಶೂರ್ ಮಹಾನಗರ ಪಾಲಿಕೆ ಯುಡಿಎಫ್ ನಿಂದ ಈ ಬಾರಿ ಎಲ್‌ಡಿಎಫ್ ಪಾಲಾಗಿದೆ. 152 ಬ್ಲಾಕ್ ಪಂಚಾಯತಿಗಳಲ್ಲಿ 114 ರಲ್ಲಿ ಎಲ್‌ಡಿಎಫ್ ಗೆದ್ದಿದೆ. ಯುಡಿಎಫ್ ಗೆದ್ದಿದ್ದು 29 ಮಾತ್ರ. ಒಂಭತ್ತು ಬ್ಲಾಕ್ ಪಂಚಾಯತಿಗಳಲ್ಲಿ ಸಮ ಬಂದಿದೆ. 999 ಗ್ರಾಮ ಪಂಚಾಯತಿಗಳಲ್ಲಿ 700 ನ್ನು ಎಲ್ ಡಿಎಫ್ ಗೆದ್ದಿದೆ. ಯುಡಿಎಫ್ ಗೆದ್ದಿರುವುದು 200 ಗ್ರಾಮ ಪಂಚಾಯತಿಗಳಷ್ಟೇ. ಯುಡಿಎಫ್ ನ ಪಾಲು ಕಳೆದ ಬಾರಿ 40 ಶೇಕಡಾ ಇದ್ದದ್ದು ಈ ಬಾರಿ ಶೇ. 20 ಕ್ಕೆ ಇಳಿದಿದೆ.

ಸಿಪಿಐ(ಎಂ) ಮತ್ತು ಎಲ್‌ಡಿಎಫ್ ನ ಈ ಭಾರೀ ಗೆಲುವು 2004 ರ ಲೋಕಸಭಾ ಚುನಾವಣೆಗಳಲ್ಲಿ ಎಲ್‌ಡಿಎಫ್ ಪಡೆದ ಬೃಹತ್ ಜನಬೆಂಬಲದ ಮುಂದುವರಿಕೆಯೇ ಆಗಿದೆ. ಯುಡಿಎಫ್ ತನ್ನ ಹಲವು ಭದ್ರಕೋಟೆಗಳಲ್ಲಿ ಹಿಂದೆ ಬಿದ್ದಿದೆ. ಇದು ಒಮನ್ ಚಾಂಡಿಯವರಿಗೆ ಬಿದ್ದಿರುವ ಭಾರೀ ಪೆಟ್ಟು. ಅವರ ಶೋಚನೀಯ ದಾಖಲೆಯಿಂದಾಗಿ ಯುಡಿಎಫ್‌ನ್ನು ಬೆಂಬಲಿಸುತ್ತಾ ಬಂದಿರುವವರೂ ಈ ಬಾರಿ ದೂರ ಸರಿದಿದ್ದಾರೆ. ದುಡಿಯುವ ಜನಗಳನ್ನು ತಟ್ಟಿದ ನಿರ್ಲಕ್ಷ್ಯದ ನೀತಿಗಳಿಂದಾಗಿ ಕಾಂಗ್ರೆಸ್-ನೇತೃತ್ವದ ಈ ಸಮಿಶ್ರ ಕೂಟವನ್ನು ಜನ ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ.

ಈ ಚುನಾವಣೆಯ ಇನ್ನೊಂದು ಮುಖ್ಯಾಂಶವೆಂದರೆ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಬಿಜೆಪಿಯೊಂದಿಗೆ ಕಾಂಗ್ರೆಸ್ ಬಹಿರಂಗ ಮೈತ್ರಿಯನ್ನು ಬೆಸೆದದ್ದು. ತಾವು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರೊಂದಿಗೆ ಸೀಟುಗಳ ಹಂಚಿಕೆಯ ಬಗ್ಗೆ ಮಾತುಕತೆ ನಡೆಸಿರುವುದಾಗಿ ಬಿಜೆಪಿಯ ಮುಖಂಡತ್ವವೇ ಪ್ರಕಟಿಸಿದೆ. ಇಂತಹ ನೀತಿಬಾಹಿರ ಮೈತ್ರಿಯಿಂದ ಬಿಜೆಪಿಗೆ ಕೆಲವು ಕಡೆ ಲಾಭವಾಗಿದೆ. ಇದರಿಂದ ಕಾಸರಗೋಡು ಜಿಲ್ಲಾ ಪಂಚಾಯ್ತಿಯಲ್ಲಿ ಎರಡು ಸ್ಥಾನಗಳನ್ನು ಪಡೆಯಲು, ಅಲ್ಲಿನ ನಗರಸಭೆಯಲ್ಲಿ ಸೀಟುಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನ ಪಡೆಯುವುದು ಬಿಜೆಪಿಗೆ ಸಾಧ್ಯವಾಯಿತು. ಪಾಲಕ್ಕಾಡ್ ನಗರಸಭೆಯಲ್ಲಿ ಈ ಅನೀತಿಯುತ ಕೂಟದಿಂದಾಗಿ ಯುಡಿಎಫ್ 16 ಸ್ಥಾನ ಗೆದ್ದಿದೆ. ಬಿಜೆಪಿಗೆ 17 ಸ್ಥಾನಗಳು ಸಿಗಲು ಸಾಧ್ಯವಾಗಿದೆ.

ಕಾಂಗ್ರೆಸ್‌ನ ಜಾತ್ಯತೀತತೆಗೆ ಕೇರಳದಲ್ಲಿ ಪ್ರದರ್ಶಿಸಿದ ಈ ಬಹಿರಂಗ ಸಮಯಸಾಧಕತನ ಎಷ್ಟರ ಮಟ್ಟಿಗೆ ಸರಿ ಹೊಂದುತ್ತದೆ ಎಂಬುದಕ್ಕೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಮುಖಂಡತ್ವ ವಿವರಣೆ ನೀಡಬೇಕಾಗಿದೆ. ಕೇರಳದ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಎಡಪಕ್ಷಗಳ ವಿರುದ್ಧ ಸ್ಪರ್ಧಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಇವುಗಳ ನೀತಿಗಳು ಭಿನ್ನವಾಗಿವೆ. ಆದರೆ ಕೇರಳಧಲ್ಲಿ ಕಮ್ಯುನಿಸ್ಟ್ ವಿರೋಧವೇ ಕಾಂಗ್ರೆಸ್‌ನ ಮುಖ್ಯ ಲಕ್ಷಣವಾಗಿಬಿಟ್ಟಿದೆ. ಇದರಿಂದಾಗಿ ಅದು ಬಿಜೆಪಿ-ಆರ್‌ಎಸ್‌ಎಸ್ ನೊಂದಿಗೂ ಸೇರಿಕೊಳ್ಳುವ ಹೊಲಸು ಕೃತ್ಯಕ್ಕಿಳಿದಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶ ಕಾಂಗ್ರೆಸ್‌ಗೊಂದು ಎಚ್ಚರಿಕೆ. ಇಂತಹ ಹೊಲಸು ತಂತ್ರಗಳಿಂದ ಅದು ಜನಗಳ ಕ್ರೋಧದಿಂದ ಪಾರಾಗಲು ಸಾಧ್ಯವಿಲ್ಲ. ಎಡಪಕ್ಷಗಳು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಹಾಗೂ ನಾಗರಿಕ ಚಟುವಟಿಕೆಗಳಲ್ಲಿ ಜನಗಳ ಹೆಚ್ಚಿನ ಭಾಗವಹಿಸುವಿಕೆಗೆ ಬದ್ಧವಾಗಿರುವುದರಿಂದ ಎಲ್‌ಡಿಎಫ್‌ನ ಈ ನಿರ್ಣಾಯಕ ವಿಜಯದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಹುರುಪು ಮೂಡಲಿದೆ.

ಕಾಂಗ್ರೆಸ್‌ಗೆ ಮುಖಭಂಗ

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್, ನಗರ ಸಭೆ ಹಾಗೂ ಮಹಾನಗರ ಪಾಲಿಕೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ದೊಡ್ಡವಿಜಯ ಸಾಧಿಸಬಹುದೆಂದು ಕೇರಳದಲ್ಲಿ ಕಾಂಗ್ರೆಸ್‌ನ ರಾಜ್ಯ ಮುಖಂಡರು ಹಾಗೂ ಬಿಜೆಪಿಯ ರಾಷ್ಟ್ರೀಯ ನಾಯಕರುಗಳು ಪ್ರಚಾರ ಮಾಡಿದ್ದರು. ಈ ಚುನಾವಣೆಯಲ್ಲಿ ಸರ್ಕಾರದ ವೈಫಲ್ಯಗಳನ್ನು ಜನರ ಹತ್ತಿರ ಹೇಳಲು ಹಾಗೂ ಈ ಬಗ್ಗೆ ಪ್ರಚಾರ ಮಾಡಲು ಸರಿಯಾದ ಸಮಯ ಕೊಡದೆ ಆತುರಾತುರವಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಘೋಷಿಸಲಾಗಿತ್ತು. ಆದರೂ ಎಡಪ್ರಜಾಪ್ರಭುತ್ವ ರಂಗದ ಕಾರ್ಯಕರ್ತರು ಈ ಸವಾಲನ್ನು ಧೈರ್ಯವಾಗಿ ಎದುರಿಸಿದರು. ಚುನಾವಣೆ ಸಂದರ್ಭದಲ್ಲಿ ಕೇರಳದ ಬಂಡವಾಳಶಾಹಿ ಗುತ್ತೇದಾರಿ ಪತ್ರಿಕೆಗಳು ಎಡರಂಗಕ್ಕೆ ಎದುರಾಗಿ ಹಲವು ಅಪಪ್ರಚಾರಗಳನ್ನು ಮಾಡಿದ್ದವು. ಆದರೆ ಈ ಅಪಪ್ರಚಾರಗಳಿಗೆ ಜನರು ಕಿವಿಗೊಡಲಿಲ್ಲ.

ಸ್ಥಳೀಯ ಚುನಾವಣೆಗೆ ಮುಂಚಿತವಾಗಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾಗಾಂಧಿ ರವರು ಕೇರಳಕ್ಕೆ ಭೇಟಿ ನೀಡಿ ಕೇರಳದಲ್ಲಿ ಕಾಂಗ್ರೆಸ್‌ನ ಮುಖ್ಯ ವಿರೋಧಿ ಸಿಪಿಐ(ಎಂ) ಆಗಿರುತ್ತದೆ, ಈ ಚುನಾವಣೆಯಲ್ಲಿ ಸಿಪಿಐ(ಎಂ)ನ ನೇತೃತ್ವದಲ್ಲಿರುವ ಎಡರಂಗವನ್ನು ಸೋಲಿಸಿ ನಾವು ಖಂಡಿತವಾಗಿ ಅಧಿಕಾರಕ್ಕೆ ಬರಬೇಕೆಂದು ಕಾಂಗ್ರೆಸ್‌ನ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಕೇರಳದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಕಾಸರಗೋಡು ನಿಂದ ಕನ್ಯಾಕುಮಾರಿವರೆಗೆ ಪಾದಯಾತ್ರೆ ಮಾಡಿ ಸಿಪಿಐ(ಎಂ) ಮತ್ತು ಎಡಪ್ರಜಾಪ್ರಭುತ್ವ ರಂಗದ ವಿರುದ್ಧ ಅಪಪ್ರಚಾರ ನಡೆಸಿದ್ದರು. ಚುನಾವಣೆ ನಡೆಯುವ ದಿನ ಕೇವಲ ಕಣ್ಣೂರ್ ಜಿಲ್ಲೆಯಲ್ಲಿಯೇ 3000 ಪೊಲೀಸರನ್ನು ಬೇರೆ ಬೇರೆ ರಾಜ್ಯಗಳಿಂದ ಕರೆತಂದಿಡಲಾಗಿತ್ತು. ಕಣ್ಣೂರುಜಿಲ್ಲೆಯಲ್ಲಿ ಚುನಾವಣೆ ಸಂದರ್ಭದಲ್ಲಿ ಗಲಭೆ ಮಾಡುವವರನ್ನು ಕಂಡಲ್ಲಿ ಗುಂಡಿಕ್ಕಬೇಕೆಂದು ಆಳುವ ಸರ್ಕಾರ ಆದೇಶ ನೀಡಿತ್ತು. ಈ ಚುನಾವಣೆಯಲ್ಲಿ ಹಲವು ಜಿಲ್ಲೆಗಳಲ್ಲಿ ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಬಿಜೆಪಿ ಪಕ್ಷಗಳು ಬಹಿರಂಗವಾಗಿ ಅಪವಿತ್ರ ಮೈತ್ರಿ ಮಾಡಿಕೊಂಡಿದ್ದವು. ಇದರಿಂದ ಕೇರಳದ ಕೆಲವೇ ಕೆಲವು ಭಾಗಗಳಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಾಯಿತು. ಆದರೆ ಚುನಾವಣೆಯಲ್ಲಿ ಕಮ್ಯುನಿಸ್ಟರನ್ನು ಸೋಲಿಸಲಿಕ್ಕಾಗಿ ಬಿಜೆಪಿ ಮತ್ತು ಮುಸ್ಲಿಂ ಲೀಗ್ ಸೇರಿದಂತೆ ಎಲ್ಲಾ ಜಾತಿವಾದಿ ಸಂಘಟನೆಗಳು, ಪತ್ರಿಕಾ ಮಾಧ್ಯಮಗಳು ಒಟ್ಟಾರೆ ನಿಂತರೂ ಕೇರಳದ ನಗರ ಹಾಗೂ ಗ್ರಾಮ ಪ್ರದೇಶಗಳಲ್ಲಿ ಇವರು ನಡೆಸಿದ ಕುತಂತ್ರಗಳು ಫಲಕಾರಿಯಾಗಲಿಲ್ಲ.

ಈ ಬಾರಿ ಮೂರು ಹಂತಗಳಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯುಡಿಎಫ್ ಅಂಗ ಪಕ್ಷಗಳಾದ ಮುಸ್ಲಿಂ ಲೀಗ್ ಹಾಗೂ ಕೇರಳ ಕಾಂಗ್ರೆಸ್ ಪಕ್ಷಗಳಿಗೆ ಬಲವಿರುವ ಕೇಂದ್ರಗಳಲ್ಲಿ ಸಹಾ ಎಡಪ್ರಜಾಪ್ರಭುತ್ವ ರಂಗ ಜಯಗಳಿಸಿದೆ. ಸ್ಥಳೀಯ ಸಂಸ್ಥೆಗಳು ಚುನಾವಣೆಗೆ ಮುಂಚಿತವಾಗಿ ಕೇರಳದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯನ್ನು ಹಾಗೂ ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನು ಬದಲಾವಣೆ ಮಾಡಲಾಯಿತು. ಅಲ್ಲದೆ ಕೇರಳದಲ್ಲಿ ಅನೇಕ ಜಿಲ್ಲಾ ಘಟಕಗಳ ಕಾಂಗ್ರೆಸ್ ಅಧ್ಯಕ್ಷರನ್ನು ಬದಲಾಯಿಸಿ ಯುಡಿಎಫ್ ಈಸಲ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಜೀವನ-ಮರಣದ ಪ್ರಶ್ನೆಯಾಗಿ ಸ್ವೀಕರಿಸಿತ್ತು.

ಎಲ್‌ಡಿಎಫ್ ಅನ್ನು ಸೋಲಿಸುವ ಸಲುವಾಗಿ ಕಾಂಗ್ರೆಸ್‌ನ ಅಖಿಲ ಭಾರತ ಅಧ್ಯಕ್ಷೆ ಸೋನಿಯಾ ಗಾಂಧಿ, ಪ್ರಧಾನಿ ಮನಮೋಹನ ಸಿಂಗ್ ರವರು ಕೇರಳಕ್ಕೆ ಚುನಾವಣೆ ಸಮಯದಲ್ಲಿ ಭೇಟಿ ನೀಡಿ ಹಲವು ಕೇಂದ್ರಗಳಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದರು. ಆದರೆ ಇವರು ಭಾಷಣ ಮಾಡಿದ ಸ್ಥಳಗಳಲ್ಲೆಲ್ಲಾ ಕಾಂಗ್ರೆಸ್ ದಯನೀಯವಾಗಿ ಸೋಲು ಕಂಡಿದೆ. ಮಾಧ್ಯಮಗಳ ಲಾಬಿಗಳು ಒಟ್ಟಾಗಿ ಸಿಪಿಐ(ಎಂ) ಹಾಗೂ ಇತರೆ ಎಡ ಪ್ರಜಾಸತ್ತಾತ್ಮಕ ರಂಗದ ಪಕ್ಷಗಳ ವಿರುದ್ಧ ಅಪಪ್ರಚಾರದ ಸಲುವಾಗಿಯೇ ಪತ್ರಿಕೆಗಳ ಲಕ್ಷಾಂತರ ಪ್ರತಿಗಳನ್ನು ಅಚ್ಚು ಮಾಡಿ ವಿತರಿಸಿದವು. ಆದರೆ ರಾಜಕೀಯ ಪ್ರಬುದ್ಧತೆ ಇರುವ ಕೇರಳದ ಜನತೆ ಈ ಮಾಧ್ಯಮಗಳ ಲಾಬಿಗಳಿಗೆ ಮುಖಭಂಗವಾಗುವ ರೀತಿಯಲ್ಲಿ ಚುನಾವಣೆ ಫಲಿತಾಂಶದ ಮೂಲಕ ಏಟು ನೀಡಿರುತ್ತಾರೆ.

- ಇ.ಕೆ.ಎನ್.ರಾಜನ್

ಆಂಧ್ರ ಮುನಿಸಿಪಲ್ ಚುನಾವಣೆ....

ಆಂಧ್ರ ಮುನಿಸಿಪಲ್ ಚುನಾವಣೆಯಲ್ಲಿ ಸಿಪಿಐ(ಎಂ) ತನ್ನ ಸ್ಥಾನಗಳನ್ನು ಇಮ್ಮಡಿಗೊಳಿಸಿಕೊಂಡಿದೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 33 ಮುನಿಸಿಪಾಲಿಟಿಗಳಲ್ಲಿ 72 ಕೌನ್ಸಿಲ್ ಸ್ಥಾನಗಳನ್ನು ಗಳಿಸಿದ ಸಿಪಿಐ(ಎಂ), 5 ಮಹಾನಗರ ಪಾಲಿಕೆಗಳಲ್ಲಿ 17 ಕಾರ್ಪೋರೇಟರ್ ಸ್ಥಾನಗಳನ್ನು ಗಳಿಸಿದೆ, 2000ದಲ್ಲಿ ಗಳಿಸಿದ ಸ್ಥಾನಗಳನ್ನು ಇಮ್ಮಡಿಗೊಳಿಸಿಕೊಂಡಿದೆ.

ಕಮ್ಮಾಮ್ ಮುನಿಸಿಪಾಲಿಟಿಯಲ್ಲಿ 41 ಸ್ಥಾನಗಳ ಪೈಕಿ, ಸಿಪಿಐ(ಎಂ) 18 ಸ್ಥಾನಗಳನ್ನು ಗಳಿಸುವುದರ ಮೂಲಕ ಅತ್ಯಂತ ಹೆಚ್ಚು ಸ್ಥಾನಗಳನ್ನು ಗಳಿಸಿದ ಪಕ್ಷವಾಗಿದೆ. ಮಿರ್ಯಾಲಗುಡ ಮುನಿಸಿಪಾಲಿಟಿಯಲ್ಲಿ 34 ಸೀಟುಗಳಲ್ಲಿ 10 ಗಳಿಸಿದೆ. ಕರ್ನೂಲ್ ಮುನಿಸಿಪಲ್ ಕಾರ್ಪೊರೇಶನ್‌ನಲ್ಲಿ ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳದೆ 8 ಸ್ಥಾನಗಳನ್ನು ಗಳಿಸಿದೆ.

2000ನೇ ಇಸವಿಯಲ್ಲಿ 16 ಮುನಿಸಿಪಾಲಿಟಿಗಳಲ್ಲಿ 36 ಕೌನ್ಸಿಲ್ ಸ್ಥಾನಗಳನ್ನು 3 ಮುನಿಸಿಪಲ್ ಕಾರ್ಪೊರೇಶನ್‌ಗಳಲ್ಲಿ 8 ಸ್ಥಾನಗಳನ್ನು ಸಿಪಿಐ(ಎಂ) ಪಡೆದಿತ್ತು.

ಪಕ್ಷದ ಚುನಾವಣಾ ಯಶಸ್ಸಿಗಾಗಿ ಶ್ರಮಿಸಿದ ಮತದಾರರನ್ನು ಕಾರ್ಯಕರ್ತರನ್ನು ಅಭಿನಂದಿಸಿದ ಆಂಧ್ರಪ್ರದೇಶದ ಕಾರ್ಯದರ್ಶಿ ಹಾಗೂ ಪಿ.ಬಿ.ಸದಸ್ಯರಾದ ಬಿ.ವಿ ರಾಘವಲು "ಇದರಿಂದ ಪಕ್ಷದ ಜವಾಬ್ದಾರಿ ಹೆಚ್ಚಾಗಿದೆ. ನಗರದ ನಾಗರೀಕರಿಗೆ ಸವಲತ್ತುಗಳನ್ನು ಒದಗಿಸಲು ಶಕ್ತಿಮೀರಿ ಪ್ರಯತ್ನಿಸಲಾಗುವುದು" ಎಂದು ಹೇಳಿದರು. ಹಲವು ವರ್ಷಗಳಿಂದ ಜನರ ನಡುವೆ ಸತತವಾಗಿ ಕೆಲಸ ಮಾಡಿದುದರ ಪರಿಣಾಮವಾಗಿ ಈ ಗೆಲುವು ಸಾಧ್ಯವಾಗಿದೆ ಎಂದೂ ಅವರು ಹೇಳಿದರು.

ಅಂಡಮಾನ್‌ನಲ್ಲೂ ಮುನ್ನಡೆ :

ಅಂಡಮಾನ್ ಮತ್ತು ನಿಕೋಬಾರ್‌ನಲ್ಲೂ ಸಿಪಿಐ(ಎಂ) ಮುನ್ನಡೆ ಸಾಧಿಸಿದೆ. ಪೋರ್ಟ್ ಬ್ಲೇರ್ ಮುನಿಸಿಪಾಲಿಟಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಥಮ ಬಾರಿಗೆ 1 ಸ್ಥಾನಗಳಿಸಿದೆ. ಗ್ರಾಮಪಂಚಾಯತಿಗಳಲ್ಲಿ ಜಿಲ್ಲಾ ಪರಿಷತ್‌ಗಳಲ್ಲೂ ಜಯ ಸಾಧಿಸಿದೆ. 2005ರಲ್ಲಿ ಮತ್ತು 2000ದಲ್ಲಿ ಪಕ್ಷವು ಗಳಿಸಿದ ಸ್ಥಾನಗಳು ಈ ಕೆಳಗಿನಂತಿವೆ.

	ಒಟ್ಟು ಸ್ಥಾನ	2000ದಲ್ಲಿ ಪಡೆದ ಸ್ಥಾನ	2005ರಲ್ಲಿ ಪಡೆದ ಸ್ಥಾನ
ನೇರ ಚುನಾವಣೆಯ	ಪಕ್ಷತೀತರಾಗಿ		
ಪ್ರಧಾನ ಹುದ್ದೆ	65	1	2
ಗ್ರಾಮ ಪಂಚಾಯತ್ ಸ್ಥಾನಗಳು	650	4	28
ಪಂಚಾಯತಿ ಸಮಿತಿ	67	0	2
ಜಿಲ್ಲಾ ಪರಿಷತ್	30	0	1

ದಕ್ಷಿಣದ 2 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಪಕ್ಷವು ತನ್ನ ಸ್ಥಾನ ಮತ್ತು ಮತಗಳನ್ನು ಹೆಚ್ಚಿಸಿಕೊಂಡಿರುವುದು ಮಹತ್ವದ ಬೆಳವಣಿಗೆ. ಸದ್ಯದಲ್ಲೇ ಅಸೆಂಬ್ಲಿ ಚುನಾವಣೆಯನ್ನು ಎದುರಿಸುವ ಕೇರಳ ರಾಜ್ಯದಲ್ಲಿ ಪಕ್ಷ ಮತ್ತು ಎಡಪ್ರಜಾಸತ್ತಾತ್ಮಕ ರಂಗ ಸತತವಾಗಿ ಮುನ್ನಡೆ ಸಾಧಿಸಿದೆ.

ಬೀಜ ಮಸೂ

'ಹರಿಯೋ ನದಿಗೆ ದೊಣ್ಣೆ ನಾಯಕನ ಅಪ
ಬೀಜ ಮಸೂದೆ - 2004. ರೈತ ತನಗೆ ಬೆ
ಉತ್ಪಾದಿಸಿಕೊಳ್ಳುವಂತಿಲ್ಲ! ಅದನ್ನು ವಿನಿಮ
ಮಾರುವಂತೆಯೂ ಇಲ್ಲ!!! ಹಾಗೇನಾದರ
ಮುಂಚಿತವಾಗಿ ನೋಂದಾಯಿಸಿಕೊಂಡು ಅ
'ಹೊಟ್ಟೆಪಾಡಿಗಾಗಿ ನಾಲ್ಕು ಕಾಳು ಬೆಳೆಯು
ದೇಶಗಳ ಕೋಟಿ ಕೋಟಿ ರೈತರ ಗೋಣು
ಬೀಜೋತ್ಪಾದನೆ ಸೇರಿದಂತೆ ಸಮಾಜದ ಸ
ಸ್ಥಾಪಿಸಿ, ಲೂಟಿ ನಡೆಸಲು ಸಂಚು ಹೂಡಿರ
ಅಣತಿಯಂತೆ ಗ್ಯಾಟ್, ಡಬ್ಲ್ಯುಟಿಓ ಒಪ್ಪಂದ
ಮಣಿತವೆಂಬಂತೆ 'ಬರುತ್ತಿದೆ' ಈ ಬೀಜ ಕ



ರೈತರ ಮೂಲಭೂತ
ಬಹುರಾಷ್ಟ್ರೀಯ ಕಂಪ

ಭಾರತ ಸರ್ಕಾರ ಇದೀಗ ಬೀಜ ಮಸೂದೆ - 2004 ನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಂದಿದೆ. ನಿಧಾನವಾಗಿಯಾದರೂ ಈ ಮಸೂದೆಯ ಕುರಿತು ಪರ-ವಿರೋಧ ಚರ್ಚೆಗಳು ಆರಂಭಗೊಂಡಿವೆ. ರೈತ ಚಳುವಳಿಗಳು, ಎಡಪಕ್ಷಗಳು ಈ ಮಸೂದೆಯ ಅಪಾಯದ ಕುರಿತು ಗಂಭೀರ ಧ್ವನಿ ಎತ್ತಿವೆ. ಈಗಿರುವ ಸ್ವರೂಪದಲ್ಲಿ ಅದು ಅಂಗೀಕಾರವಾಗದಂತೆ ಪ್ರತಿರೋಧಿಸುತ್ತಿವೆ. ಅದೇ ಸಂದರ್ಭದಲ್ಲಿ ರೈತರ ಪರವಾದ ವ್ಯವಸಾಯದ ಪರವಾದಂತಹ ಬೀಜ ನೀತಿಯನ್ನು ಜಾರಿಗೆ ತರಲು ಒತ್ತಾಯಿಸುತ್ತಿವೆ.

ರೈತರು ಕೇಳಿದ್ದೇನು?

ಭಾರತ ದೇಶವು ಈಗಲೂ ಒಂದು ಕೃಷಿ ಪ್ರಧಾನವಾದ ದೇಶವಾಗಿಯೇ ಮುಂದುವರೆದಿದೆ. 10 ಕೋಟಿಗೂ ಅಧಿಕ ಕುಟುಂಬಗಳು ಕೃಷಿಯಲ್ಲಿ ನೇರವಾಗಿ ತಮ್ಮನ್ನು ತೊಡಗಿಸಿಕೊಂಡಿವೆ. ಇದರಲ್ಲಿ ಶೇ 70 ಕ್ಕೂ ಹೆಚ್ಚು ಜನ ಬಡ ರೈತರಾಗಿದ್ದಾರೆ. ಅಥವಾ ಸಣ್ಣ-ಅತಿಸಣ್ಣ ಹಿಡುವಳಿದಾರರಾಗಿದ್ದಾರೆ. ಶೇ 70 ರಷ್ಟು ವ್ಯವಸಾಯದ ಜಮೀನು ಇನ್ನೂ ಕೂಡ ನೀರಾವರಿಗೊಳಪಟ್ಟಿಲ್ಲ. ಹೀಗಾಗಿ ಹಸಿರು ಕ್ರಾಂತಿಯಂತಹ ಆಧುನಿಕ ಬೇಸಾಯದ ಘೋಷಣೆಗಳು ಏನೆಲ್ಲಾ ಇದ್ದರೂ ಬಹುಸಂಖ್ಯಾತ ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕ ಬಿತ್ತನೆ ಬೀಜಗಳೇ ಇನ್ನೂ ಬಳಕೆಯಲ್ಲಿವೆ. ಅದು ಮಾತ್ರವಲ್ಲ ನೀರಾವರಿಯ ಶೇ 20 ಕ್ಕೂ ಅಧಿಕ ಪ್ರದೇಶದ ಹಿಡುವಳಿದಾರರು ಇವುಗಳನ್ನೇ ಅವಲಂಬಿಸಿದ್ದಾರೆ! ಕಡಿಮೆ ಮಳೆ ಅಥವಾ ಮಳೆಯ ಕಣ್ಣು ಮುಚ್ಚಾಲೆಯ ಆಟ ರೈತರು ಇವುಗಳ ಮೇಲೆ ಅವಲಂಬಿಸಲು ಒಂದು ಕಾರಣವಾದರೆ, ರೋಗ ಪ್ರತಿರೋಧದ ಗುಣ-ಕಡಿಮೆ ಖರ್ಚಿನ ಬೇಸಾಯದ ಅಂಶವು ಮತ್ತೊಂದು ಕಾರಣವಾಗಿದೆ. ಸಾವಿರಾರು ವರ್ಷಗಳಿಂದ ರೈತರೇ ಇಲ್ಲಿನ ಹವಾಗುಣ-ವಾತಾವರಣದಲ್ಲಿ ಹೆಚ್ಚು ರೋಗ ಪೀಡಿತವಾಗದೇ ಬೆಳೆಯಬಲ್ಲ ಈ ಬೀಜಗಳನ್ನು ಅಭಿವೃದ್ಧಿ ಪಡಿಸಿರುವುದು ವಿಧಿತವೇ ಆಗಿದೆ.

ಈ ಎಲ್ಲಾ ಪ್ರದೇಶದ ರೈತರು ಸಹಜವಾಗಿಯೇ ಈ ಸಾಂಪ್ರದಾಯಿಕ ಬಿತ್ತನೆ ಬೀಜಗಳನ್ನು ಇನ್ನಷ್ಟು ಸುಧಾರಿಸಿ ಮತ್ತಷ್ಟು ಅಧಿಕ ಇಳುವರಿ ಬರುವಂತೆ ಕ್ರಮವಹಿಸಬೇಕೆಂದು ಬಯಸಿದ್ದಾರೆ. ಸರ್ಕಾರವನ್ನು ಒತ್ತಾಯಿಸಿದ್ದಾರೆ!

ಅದೇ ಸಂದರ್ಭದಲ್ಲಿ ಹಸಿರು ಕ್ರಾಂತಿಯ ನಂತರ ದೇಶಾದ್ಯಂತ ಸುಧಾರಿತ ಹೈಬ್ರಿಡ್ ತಳಿಗಳು ಬಳಕೆಗೆಬಂದಿವೆ. ಇಂತಹ ಸುಧಾರಿತ ಬೀಜಗಳನ್ನು ಮಾರಾಟ ಮಾಡುವ ದೇಶೀಯ ಹಾಗೂ ವಿದೇಶೀಯ ಕಂಪನಿಗಳು ದೇಶದಾದ್ಯಂತ ಪಸರಿಸಿವೆ. ಸ್ವಾತಂತ್ರ್ಯ ನಂತರದಲ್ಲಿ ಈ ಕಂಪನಿಗಳು ಇಲ್ಲಿಯವರೆಗೆ ದೇಶದಬೀಜ ಮಾರುಕಟ್ಟೆಯ ಒಟ್ಟು ಪ್ರದೇಶದ ಶೇ 40 ರಷ್ಟು ಮಾರುಕಟ್ಟೆ ಪಡೆದಿವೆಯೆಂದು ಒಂದು ಅಂದಾಜು ತಿಳಿಸುತ್ತದೆ. ಇಂತಹ ಕೆಲವು ಬೀಜಗಳ ಗುಣಮಟ್ಟ ಮತ್ತು ಪೂರೈಕೆಯನ್ನು ನಿಯಂತ್ರಿಸುವ ಸಲುವಾಗಿ ಬೀಜ ಕಾಯ್ದೆ - 1966 ನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು! ಈ ಕಾಯ್ದೆಯು ಕೃಷಿಯೆಂದರೆ, ತೋಟಗಾರಿಕೆಯನ್ನು ಒಳಗೊಳ್ಳುತ್ತದೆ ಎಂದು ವಿವರಿಸುತ್ತಾ, ಸಾಂಪ್ರದಾಯಿಕ ಬೀಜ ಬಿತ್ತನೆ, ಬಳಕೆ, ವಿನಿಮಯದ ಹಕ್ಕನ್ನು ರೈತರಿಗೆ ಉಳಿಸಿಕೊಟ್ಟಿತ್ತು.

ಕಳಪೆ ಬೀಜ

ಹೀಗಿರುವಾಗಲೇ ಸುಧಾರಿತ ತಳಿಯ ಬೀಜಗಳ ಹಾಗೂ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆಯಲ್ಲಿ ಹಲವು ವಂಚನೆಯ ಪ್ರಕರಣಗಳಿಂದ ರೈತರು ತೀವ್ರವಾಗಿ ಬಾಧಿತರಾದರು. ಕಳಪೆ ಅಥವಾ ಕೀಳುಗುಣಮಟ್ಟದ ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಪ್ರತಿಎಕರೆಗೆ 10 ಸಾವಿರದಿಂದ 25 ಸಾವಿರ ರೂಪಾಯಿಗಳ ವರೆಗೆ ಹಾನಿಯುಂಟು ಮಾಡಿದವು ! ಇಂತಹ ಕಳಪೆ ಬೀಜ ಮಾರಾಟದಲ್ಲಿ ಹಲವೆಡೆ ಬಹುರಾಷ್ಟ್ರೀಯ ಸಂಸ್ಥೆಗಳು ಪಾಲ್ಗೊಂಡಿವೆ.

ನಷ್ಟ ಪರಿಹಾರ ಕೇಳಿದ ರೈತರನ್ನು ದಬಾಯಿಸಿವೆ. ಉಡಾಫೆ ತನದಿಂದ ವರ್ತಿಸಿವೆ. ಪ್ರತಿರೋಧಿಸಿದ ರೈತರಿಗೆ ಅಲ್ಪ-ಸ್ವಲ್ಪ ಪರಿಹಾರ ನೀಡಿವೆ. ಈ ಮೂಲಕ ರೈತರಿಗೆ ಇಂತಹ ಪ್ರಕರಣಗಳಲ್ಲಿ ಹಾನಿಯನ್ನು ತುಂಬಿಕೊಡುವಲ್ಲಿ ಸರ್ಕಾರ ವಿಫಲವಾಗಿತ್ತು. ಈ ಪರಿಸ್ಥಿತಿ ಉದ್ಭವಿಸಿದಾಗಲೆಲ್ಲಾ ಕಳಪೆ ಗುಣಮಟ್ಟದ ಬೀಜ, ಮತ್ತಿತರೆ ಲಾಗುವಾಡುಗಳಿಂದಾಗುವ ಹಾನಿಯನ್ನು ತಡೆಯಲು ರೈತರು ಸೂಕ್ತ ಕ್ರಮಗಳಾಗಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದಾರೆ. ಬೀಜಕಾಯ್ದೆ - 1966 ಇಂತಹ ಹಾನಿಯಿಂದ ರೈತರನ್ನು ಸಂರಕ್ಷಿಸುವಲ್ಲಿ ವಿಫಲವಾಗಿತ್ತು. ಗುಣಮಟ್ಟದ ಸರ್ಟಿಫಿಕೇಟ್ ಹೊಂದಿದ ಕೀಳುಮಟ್ಟದ ಬೀಜ ಮಾರಾಟ ಮಾಡುವ ಕಂಪನಿಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ, ಅದೇ ರೀತಿ ಅಂತಹ ಬೀಜಗಳ ಬಳಕೆಯಿಂದಾಗಿ ರೈತರಿಗಾಗುವ ಪೂರ್ಣ ಪ್ರಮಾಣದ ಹಾನಿಯನ್ನು ಭರ್ತಿ ಮಾಡಿಕೊಡಲು ಕಾಯ್ದೆಗೆ ಸೂಕ್ತ ತಿದ್ದುಪಡಿಯಾಗಬೇಕೆಂದು ರೈತರ ಮತ್ತೊಂದು ಪ್ರಮುಖ ಕೋರಿಕೆಯಾಗಿತ್ತು.


ದುಬಾರಿ ಬೆಲೆ

ಹಾಗೆ ಸರ್ಟಿಫಿಕೇಟ್ ಬೀಜಗಳ ಬೆಲೆಗಳ ಮೇಲಿನ ನಿಯಂತ್ರಣ ಇನ್ನೊಂದು ಬೇಡಿಕೆಯಾಗಿತ್ತು. ದೊಡ್ಡವು ಸೇರಿದಂತೆ ಎಲ್ಲಾ ಕಂಪನಿಗಳು ನಮ್ಮ ರೈತರಿಂದಲೇ ಬೀಜಗಳನ್ನು ಉತ್ಪಾದಿಸುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ರೈತರಿಂದ ಪಡೆದ ಬೀಜಗಳನ್ನು ಸಂಸ್ಕರಿಸುವ ಪ್ರಕ್ರಿಯೆಗೊಳಪಡಿಸಿ, ರಸಾಯನಿಕಗಳಿಂದ ಉಪಚರಿಸಿ, ಚೀಲಗಳಲ್ಲಿ ಸಂಗ್ರಹಿಸಿ ಬ್ರಾಂಡ್ ಹಾಕಿ, ಮಾರುಕಟ್ಟೆಗೆ ಬಿಡುಗಡೆ ಮಾಡುವಾಗ ಅದರ ಬೆಲೆಯು, ಬೀಜ ಉತ್ಪಾದಿಸಿದ ರೈತರು ಪಡೆದ ಬೆಲೆಯ ಕನಿಷ್ಟ 10 ಪಟ್ಟು ಹೆಚ್ಚಾಗಿರುತ್ತದೆ.

ಕಂಪನಿಗಳು ರೈತರಿಗೆ ಕೊಟ್ಟುಬೆಳೆಸಿದ ಬೀಜಕ್ಕೆ, ಬಿತ್ತನೆಗಲ್ಲದೆ ಇತರೆ ಬಳಕೆಗೆ ಬಳಸುವ ಬೆಳೆಯ ಬೆಲೆಗಿಂತ ತುಸುವೇ ಹೆಚ್ಚು ಬೆಲೆ ನೀಡಲಾಗುತ್ತಿದೆ. ಉದಾಹರಣೆಗೆ - ಜೋಳದ ಬೆಲೆಯು ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲಿಗೆ 500 ರೂ. ಇದೆ ಎಂದುಕೊಂಡರೆ, ಬೀಜಕ್ಕಾಗಿಯೇ ಬೆಳೆದ ಜೋಳದ ಬೆಲೆಯು ಪ್ರತಿ ಕ್ವಿಂಟಾಲಿಗೆ 600 ರಿಂದ 800 ರೂಗಳಾಗಬಹುದು.

ರೈತರಿಂದ ಕೊಂಡ ಬಿತ್ತನೆ ಬೀಜಗಳನ್ನು ಸಂಸ್ಕರಿಸಲು, ಕಂಪನಿಗಳಿಗೆ ಆಗುವ ವೆಚ್ಚ ರೈತರಿಂದ ಕೊಂಡ ಬೀಜದ ಬೆಲೆಯ ಶೇ 30 ನ್ನು ದಾಟದಾಗಿದೆ. ಹೀಗಿರುವಾಗ ಕಂಪನಿಗಳು ರೈತರಿಂದ ಕೊಂಡ ಬೀಜದ ಬೆಲೆಯ ಕನಿಷ್ಠ ಪಕ್ಷ ಹತ್ತುಪಟ್ಟುದುಬಾರಿ ಬೆಲೆಗೆ ಮಾರಾಟ ಮಾಡಿ ಹೇರಳವಾದ ಲಾಭ ಸಂಪಾದಿಸುತ್ತಿವೆ. ಕಂಪನಿಗಳ ಈ ನೀತಿ ಒಂದೆಡೆ ಬೀಜ ಉತ್ಪಾದಕರನ್ನು ವಂಚಿಸಿದರೇ ಮತ್ತೊಂದೆಡೆ ಆಹಾರ ಮತ್ತಿತರೆ ಧಾನ್ಯ ಬೆಳೆಗಾರರನ್ನು ಹಾಗು ಬಳಕೆದಾರರನ್ನು ವಂಚಿಸುವುದಾಗಿದೆ. ಆದ್ದರಿಂದ ರೈತರು ಈ ಕುರಿತು ಚಿಂತಿತರಾಗಿದ್ದಾರೆ.



ಪರಿಸರ ಹಾನಿ

ಜಾಗತೀಕರಣದ ಈ ಅವಧಿಯಲ್ಲಿ ರೈತರಿಗೆ, ರೈತ ಸಂಘಗಳಿಗೆ ಪ್ರಗತಿಪರರಿಗೆ ಮತ್ತೊಂದು ಗಂಭೀರವಾದ ಆತಂಕ ಕಂಡುಬಂತು. ಹೊಸ ಕುಲಾಂತರ ಬೀಜಗಳನ್ನು ಸರ್ಕಾರಿ ಕೃಷಿವಿಶ್ವ ವಿದ್ಯಾನಿಲಯಗಳಲ್ಲಿ, ಫಾರಂಗಳಲ್ಲಿ ಪ್ರಯೋಗಕ್ಕೊಳಪಡಿಸಿ ತಜ್ಞರಿಂದ ಅವುಗಳ ಲಾಭ ಹಾಗೂಹಾನಿಯ ಕುರಿತು ಅಂದಾಜು ಮಾಡಿ ಈ ಪ್ರದೇಶದ ಹವಾಗುಣಕ್ಕೆ ಯೋಗ್ಯವೆನಿಸಿದಲ್ಲಿ, ಅವರ ಶಿಫಾರಸ್ಸಿನಂತೆ ಮಾರುಕಟ್ಟೆಗೆ ಬಿಡುಗಡೆ ಮಾಡುವ ಬದಲು, ಅಬ್ಬರದೊಂದಿಗೆ ಮೋಸದ ಪ್ರಚಾರನಡೆಸಿ ನೇರವಾಗಿ ರೈತರ ಹೊಲಗಳಲ್ಲಿ ಬೆಳೆಯಲು ಒದಗಿಸುವುದೇ ಆತಂಕದ ಮೂಲವಾಗಿತ್ತು. ಈ ಹೊಸ ರೀತಿಯ ಕುಲಾಂತರಿ ತಳಿಗಳನ್ನು ನೇರವಾಗಿ ಹೊಲಗಳಲ್ಲಿ ಬೆಳೆಸುವುದರಿಂದ ಪರಿಸರ ಹಾನಿಯಂತಹ ಗಂಭೀರ ಪರಿಣಾಮಗಳ ಬಗ್ಗೆ ವ್ಯಾಪಕವಾದ ಆತಂಕಗಳಿದ್ದರೂ ಬಿತ್ತನೆಗೆ ಬಿಡುಗಡೆ ಮಾಡಲಾಗುತ್ತಿತ್ತು. ಉದಾಹರಣೆಗೆ ಬಿ.ಟಿ. ಹತ್ತಿ. ಈ ತಳಿಯು ರೋಗನಿರೋಧಕ ಗುಣ ಹೊಂದಿದ್ದು, ಅಪಾರ ಇಳುವರಿ ಕೊಡುವುದೆಂದು ಅಬ್ಬರದ ಪ್ರಚಾರ ನಡೆಸಿ ದೇಶಾದ್ಯಂತ ಬಿತ್ತನೆಗೆ ಅವಕಾಶ ನೀಡಲಾಗಿತ್ತು! ಈ ಕುರಿತು ದೇಶದಾದ್ಯಂತ ಪ್ರತಿರೋಧ ಬಂತು. ಪರಿಸರದ ಹಾನಿಗೆ ಕಾರಣವಾಗಲಿದೆಯೆಂದು ಹಲವೆಡೆ ಹೊಲಗಳಿಂದ ಬೆಳೆಯನ್ನು ನಾಶ ಮಾಡಲಾಯಿತು. ಆದಾಗ್ಯೂ ಬಲಿಬಿದ್ದ ರೈತರು ಅಧಿಕ ಲಾಭದ ಆಸೆಯಿಂದ ಬಿತ್ತಿದವರು ತಲಾ ಎಕರೆಗೆ 25,000 ದಿಂದ 30,000 ರೂ.ಗಳವರೆಗೆ ಖರ್ಚು ಮಾಡಿ ಬೆಳೆಸಿದರು. ರೋಗನಿರೋಧಕವೆಂದು ಪ್ರಚಾರ ನಡೆಸಿದ್ದರೂ ರೋಗಕ್ಕೆ ತುತ್ತಾಯಿತು. ಮಾತ್ರವಲ್ಲ ಸಾಮಾನ್ಯ ಇಳುವರಿಯನ್ನೂ ಹಲವೆಡೆ ನೀಡಲಿಲ್ಲ. ಹೀಗಾಗಿ ರೈತರು ಪ್ರತಿ ಎಕರೆಗೆ ಕನಿಷ್ಟವೆಂದರೂ 25000 ದಿಂದ 30,000 ದಷ್ಟು ನಷ್ಟ ಅನುಭವಿಸುವಂತಾಯಿತು. ಆದಾಗಲೂ ಸರ್ಕಾರ ಸೂಕ್ತಕ್ರಮವಹಿಸದೇ ಹೋದುದು ವಿಪರ್ಯಾಸವೇ ಸರಿ. ರೈತರ ವಂಚನೆ ಇನ್ನೂ ನಿಂತಿಲ್ಲ.

ಒಂದೇರೀತಿ ಉತ್ಪನ್ನ ಪೇಟೆಂಟ್‌ನಿಂದಾಗಿ ದೇಶದ ಆಹಾರದ - ಔಷಧೀಯ ಮತ್ತಿತರೆ ಸಸ್ಯ-ಬೀಜಗಳನ್ನು ಸಂರಕ್ಷಿಸಲು ಕ್ರಮಗಳಾಗಬೇಕು. ಹೀಗೆ ಮಾರುಕಟ್ಟೆಯ ಪ್ರಶ್ನೆಯೂ ಸೇರಿದಂತೆ ಹಲವುವಿಚಾರಗಳ ಕುರಿತು ಕೇಂದ್ರ-ರಾಜ್ಯ ಸರ್ಕಾರಗಳು ಗಮನಹರಿಸುವಂತೆ ಕಳೆದ 3-4 ದಶಕಗಳಿಂದ ಒತ್ತಾಯಿಸುತ್ತಾ ಬಂದರೂ ಸರ್ಕಾರಗಳು ಗಂಭೀರವಾಗಿ ಗಮನ ಹರಿಸಲಿಲ್ಲ.

ಈಗ ದಿಢೀರನೆ ಸರ್ಕಾರಕ್ಕೆ ಜ್ಞಾನೋದಯವಾದಂತೆ, ಗುಣಮಟ್ಟದ ಬೀಜ ಉತ್ಪಾದನೆ, ಪೂರೈಕೆಯ ಹೆಸರಿನಲ್ಲಿ ಬೀಜ ಮಸೂದೆ - 2004 ನ್ನು ಚರ್ಚೆಗಿಟ್ಟಿರುವುದು ಸಹಜವಾಗಿಯೇ ರೈತರ - ಪ್ರಗತಿಪರರ ಆತಂಕಕ್ಕೆಡೆ ಮಾಡಿದೆ.

ಬೀಜ ಮಸೂದೆ

ಖಂಡಿತವಾಗಲೂ ಈ ಕಾಯ್ದೆ ಅನಿರೀಕ್ಷಿತವೇನು ಆಗಿರಲಿಲ್ಲ. ಅಸಮಾನವಾದ ಗ್ಯಾಟ್ ಒಪ್ಪಂದಗಳಿಗೆ ಸಹಿ ಹಾಕಿದಾಗಲೇ, ಅದರ ಜಾರಿಯ ಭಾಗವಾಗಿ ಇಂತಹದ್ದೊಂದು ಕಾಯ್ದೆ ನಿರೀಕ್ಷಿಸಲಾಗಿತ್ತು. ಈ ಮಸೂದೆಯ ಪೂರ್ವದಲ್ಲಿ ಬೌದ್ಧಿಕ ಆಸ್ತಿಹಕ್ಕು - 1970 ರ ಉತ್ಪಾದನಾ ವಿಧಾನಕ್ಕೆ ಇದ್ದ ಏಕಸ್ವಾಮ್ಯವನ್ನು ಕಳೆದ 3-4 ವರ್ಷಗಳಲ್ಲಿ 3 ಬಾರಿ ತಿದ್ದುಪಡಿ ಮಾಡಿ ಉತ್ಪನ್ನಗಳಿಗೆ ಏಕಸ್ವಾಮ್ಯ ನೀಡುವ ಕ್ರಮ ಕೈಗೊಂಡಾಗ ಅದು ನಿಚ್ಚಳವಾಗಿತ್ತು.

ಡಬ್ಲ್ಯುಟಿಓ ಶರತ್ತುಗಳನ್ನು ಪೂರೈಸುವುದು ಮತ್ತು ಬೀಜ ಉತ್ಪಾದನೆ - ವಿತರಣೆಯಲ್ಲಿ ಮತ್ತು ಬೀಜ ಪರೀಕ್ಷೆ ಹಾಗೂ ಸರ್ಟಿಫಿಕೇಟ್ ನೀಡುವಲ್ಲಿ ಖಾಸಗೀ ಸಹ ಭಾಗಿತ್ವವನ್ನು ಮತ್ತಷ್ಟು ವಿಸ್ತರಿಸುವ ಅವಶ್ಯಕತೆಯ ಆಧಾರದಲ್ಲಿ ಈ ಮಸೂದೆ ಎಂದು ಕೃಷಿ ಮಂತ್ರಿ ಶರದ್ ಪವಾರ್‌ರವರು ಅದರ ಕಾರಣ ವಿವರಿಸುತ್ತಾ ತಿಳಿಸಿದ್ದಾರೆ.

ಬೀಜ ಮಸೂದೆಯಲ್ಲಿ ಒಟ್ಟು 10 ಅಧ್ಯಾಯಗಳಿದ್ದು 40 ಕಲಂಗಳನ್ನು ಹೊಂದಿದೆ. ಬೀಜ ಉತ್ಪಾದಕರು, ಬೀಜ ಮಾರಾಟಗಾರರ ಮತ್ತು ಎಲ್ಲಾ ರೀತಿಯ ಬೀಜಗಳ ನೋಂದಣಿಯನ್ನು ಈ ಮಸೂದೆ ಕಡ್ಡಾಯಗೊಳಿಸುತ್ತದೆ. ಕಾಯ್ದೆ ಉಲ್ಲಂಘನೆ ಮಾಡುವವರಿಗೆ 5000 ದಿಂದ 25000ದವರೆಗೆ ದಂಡ ವಿಧಿಸಿ ಅಥವಾ 6 ತಿಂಗಳು ಸೆರೆಮನೆಗೆ ತಳ್ಳಿ ಕಾಯಿದೆಯನ್ನು ರಕ್ಷಿಸಲು ಮಸೂದೆ ಮುಂದಾಗುತ್ತದೆ. ಬೀಜ ಪರೀಕ್ಷೆ ಮಾಡುವ ಹಾಗೂ ಸರ್ಟಿಫಿಕೇಟ್ ನೀಡುವ ಅಧಿಕಾರವನ್ನು ಖಾಸಗಿ ಕಂಪನಿಗಳೊಂದಿಗೆ ಸರ್ಕಾರ ಹಂಚಿಕೊಳ್ಳುವ ಪ್ರಸ್ತಾಪವನ್ನಿಟ್ಟಿದೆ. ಕೇಂದ್ರ ಬೀಜ ಸಮಿತಿಯಲ್ಲಿ ಎಲ್ಲಾ ರಾಜ್ಯಗಳ ಪ್ರತಿನಿಧಿಗಳಿರಬೇಕೆಂದಿದ್ದ ಹಳೆಯ ಪ್ರಸ್ತಾಪ ತಡೆದು ದೇಶವನ್ನು 5 ಭಾಗಗಳಾಗಿ ವಿಭಜಿಸಿ 5 ಭಾಗಗಳಿಂದ 5 ಪ್ರತಿನಿಧಿಗಳಿರಲು ಸೂಚಿಸಲಾಗಿದೆ. ಬೀಜ ನಿರೀಕ್ಷಕರಿಗೆ ಹೆಚ್ಚಿನ ಅಧಿಕಾರಗಳನ್ನು ಪ್ರಸ್ತಾಪಿಸಲಾಗಿದೆ. ಅದೇನೇ ಇರಲಿ. ಈ ಕಾಯ್ದೆ ಈಗಿರುವ ರೀತಿಯಲ್ಲೇ

- 2004

ತ ಹಾಗೆ ಇಗೋ ಬಂದಿದೆ
ತ್ತನೆ ಬೀಜವನ್ನು ತಾನೇ
ಕೊಳ್ಳುವಂತಿಲ್ಲ!!
ಬೇಕಾದಲ್ಲಿ ಆ ಬಗ್ಗೆ
ರಡೆದುಕೊಳ್ಳಬೇಕು!!!.
ಮತ್ತು ಭಾರತದಂತಹ
ವ ತಂತ್ರದ ಭಾಗವಾಗಿ ಕೃಷಿ,
ಯುಗಳಲ್ಲೂ ತಮ್ಮ ಏಕಸ್ವಾಮ್ಯ
ರಾಷ್ಟ್ರೀಯ ಕಂಪನಿಗಳ
ರ್ಗಗಳಿಗೆ ಆಳುವ ಸರ್ಕಾರಗಳ
2004.

ಕ್ಕಿನ ಮೇಲೆ ಧಾಳಿ
ಗಳಿಗೆ ರತ್ನಗಂಬಳಿ !

ಯು.ಬಸವರಾಜು

ಯಾದರೆ ಆಗುವ ಪರಿಣಾಮಗಳೇನು? ದ ಯಾರಿಗೆ ಲಾಭ? ರೈತ ಚಳುವಳಿಗಳಿಗೇಕೆ ? ರೈತರ ಬೇಡಿಕೆಗಳನ್ನು, ಆಶಯಗಳನ್ನು ದೇ ಗುಣಮಟ್ಟದ ಬೀಜಗಳ ಪೂರೈಕೆ - ಂರಕ್ಷಣೆಯ ಹೆಸರಲ್ಲಿ ಮುಂದೆ ಬರಲಿರುವ ದೆಯಲ್ಲಿ ಯಾಕೀ ಆತಂಕಗಳು? ಏನೀ ಗಳು?

ಬೀಜದ ಹಕ್ಕು

ೕಶದಾದ್ಯಂತ ರೈತರು ಇಲ್ಲಿಯವರೆಗೆ ತಾವು ಬೆಳೆಯಲ್ಲಿ ಉತ್ತಮವಾದ ಬೀಜಗಳನ್ನು ಹಿಸಿಕೊಂಡು, ಮುಂದಿನ ಬೆಳೆಗೆ ಯೋಗಿಸುವುದು ಸಹಜವಾಗಿತ್ತು. ಂದು ವೇಳೆ ಸಂಗ್ರಹಿಸಲಾಗದವರು ುವರಿಂದ ಪಡೆಯುವುದು, ಅಥವಾ ಲ್ಲಿರುವ ಇತರೆ ಬೀಜಗಳನ್ನು ಅವರಿಗೆ ನೀಡಿ ಬೇಕಾದುದದನ್ನು ಅವರಿಂದ ಪಡೆಯುವುದು ತ್ತು. ಈಗಲೂ ನಡೀತಾ ಇದೆ.

ದೇ ರೀತಿ ಸಸಿ ಮಡಿಗಳನ್ನು ಮಾಡಿ ಬೀಜ ಹಾಕಿ ಸಸಿಗಳನ್ನು (Seed Lings) ುವುದು, ಬೇಕಾದವರೆಲ್ಲರೂ ಅವರಿಂದ ುವುದು ನಡೆದೇ ಇದೆ. ಉದಾಹರಣೆಗೆ ಭತ್ತ, ಿ, ಮುಂತಾಗಿ.


ಾಗೇನೆ ರೈತರು ಉಪಕಸುಬಾಗಿ, ಳನ್ನು, ಎಮ್ಮೆ ಕುರಿ, ಹಂದಿ, ಮೇಕೆ, ಮುಂತಾಗಿ ಪಶುಪಾಲನೆ ಮಾಡುವುದು, ಬೇಕಾದ ತಳಿಗಳು ಹಾಕಿದ ಮರಿಗಳನ್ನು ಬೆಳೆಸುವುದು ಇಲ್ಲವೇ ಬೇಡವಾದಲ್ಲಿ ್ಬರಿಗೆ ಮಾರಾಟ ಮಾಡುವುದು ನಡೆದಿದೆ. ದೇ ರೀತಿ ಕೆಲವು ವಿದ್ಯಾವಂತ ನಿರುದ್ಯೋಗಿ ಅರಣ್ಯಕ್ಕಾಗಿ ಅಥವಾ ತೋಟಗಾರಿಕೆಗಾಗಿ ಗಳನ್ನು ಮಾಡಿಕೊಂಡು, ಸಸಿಗಳನ್ನು ಬೆಳೆಸಿ ಟ ಮಾಡುವುದು ಈಗಲೂ ನಡೆದಿದೆ. ಪಘಾತದಿಂದಾಗಿ ಹಾನಿಗೆ ಅಥವಾ ರೆ ಖಾಯಿಲೆಗಳಿಗೆ ಗ್ರಾಮೀಣ ಪ್ರದೇಶದಲ್ಲಿ ೀಯ ಗಿಡಮೂಲಿಕೆ ಬಳಸುವುದು ವಾಡಿಕೆ! ಮ್ಮ ಹಿತ್ತಲಿನಲ್ಲಿ ಬೆಳೆಸುವುದು ಇದೆ.

ಲವು ಬಹುರಾಷ್ಟ್ರೀಯ ಕಂಪನಿಗಳು ಕೂಡ ರೀತಿಯಲ್ಲಿ ರೈತರಿಂದಲೇ ಬಿತ್ತನೆಯ ಗಳನ್ನು ಬೆಳೆಸುವುದು ಮತ್ತು ಅವರಿಂದ ಸುವುದು ನಡೆಯುತ್ತಿದೆ.

ಎಲ್ಲಾ ರೀತಿಯ ಚಟುವಟಿಕೆಗಳನ್ನು ಬೀಜ ಮಸೂದೆ-2004 ಹೇಳುತ್ತದೆ.

ಯಾವುದೇ ರೈತ ಇಲ್ಲಿಯವರೆಗೆ ತಾನು ಬಳಸುವ, ಮಾರಾಟ ಮಾಡುವ ಅಥವಾ ವಿನಿಮಯ ಮಾಡಿಕೊಳ್ಳುವ ಬೀಜವನ್ನು ಕಡ್ಡಾಯವಾಗಿ ನೋಂದಾಯಿಸಬೇಕಾಗಿರಲಿಲ್ಲ. ಅದೇ ರೀತಿ ಉಪಕಸುಬಾಗಿ ನಡೆಸುವ ಪಶುಪಾಲನೆಯ ಹಸು, ಎಮ್ಮೆ ಕೋಳಿ,ಹಂದಿ, ಕುರಿಗಳ ಮಾರಾಟದ ಹಕ್ಕನ್ನು ಉಳಿಸಿಕೊಂಡಿದ್ದನು. ಇದಕ್ಕೂ ನೋಂದಣಿ ಇರಲಿಲ್ಲ. ಹಾಗೆ ಸಾಂಪ್ರದಾಯಿಕ ಬೀಜ ಬಿತ್ತನೆ ಮಾಡಲಾಗಲೀ, ಪಶುಪಾಲನೆ ಗೈಯಲಾಗಲೀ, ಔಷಧೀಯ ಗಿಡಮೂಲಿಕೆ ಸಸಿ ಬೆಳೆಯುವು ದಕ್ಕಾಗಲೀ ನೋಂದಾವಣಿ ಬೇಕಾಗಿರಲಿಲ್ಲ. ಬೀಜ ಕಾಯ್ದೆ - 1966 ಇದನ್ನು ಮುಟ್ಟಿರಲಿಲ್ಲ. ಆದರೆ ಈಗ ಬೀಜ ಮಸೂದೆ - 2004 ಸ್ಪಷ್ಟವಾಗಿ ಬೀಜ ಉತ್ಪಾದಕನ ಹಾಗೂ ಮಾರಟಗಾರನ ಮತ್ತು ಎಲ್ಲಾ ರೀತಿಯ ಬೀಜಗಳ ತಳಿಗಳ ನೋಂದಾವಣಿ ಕಡ್ಡಾಯವೆಂದು ಹೇಳುತ್ತಿದೆ. ಈ ಮಸೂದೆ ಪ್ರಕಾರ ಕೃಷಿಯೆಂದರೆ ತೋಟಗಾರಿಕೆ, ಅರಣ್ಯಗಾರಿಕೆ, ಔಷಧೀಯ ಸಸ್ಯಗಳು, ಪ್ಲಾಂಟೇಷನ್ ಹಿಡುವಳಿ ಮುಂತಾಗಿ ಒಳಗೊಂಡುದ್ದಾಗಿದೆ. ಪರಿಣಾಮವಾಗಿ ಎಲ್ಲಾ ರೀತಿಯ ಬೀಜಗಳು, ತಳಿಗಳು ನೋಂದಾಯಿಸಲ್ಪಡಬೇಕು. ಮಸೂದೆಯ ಕಲಂ-12 ಬೀಜ ನೊಂದಾವಣಿ ಕಡ್ಡಾಯವೆನ್ನುತ್ತದೆ. ಕಲಂ-13ರ ಪ್ರಕಾರ ಯಾವುದೇ ವ್ಯಕ್ತಿಯು ಬಿತ್ತನೆ ಅಥವಾ ನಾಟಿ ಮಾಡಲು ನೊಂದಣಿ ಮಾಡಲ್ಪಟ್ಟ ಬೀಜಗಳನ್ನು ಮಾತ್ರವೇ ಉಪಯೋಗಿಸಬೇಕು. ಕಲಂ-21 ರ ಪ್ರಕಾರ ಬೀಜ ಉತ್ಪಾದಕರ ನೋಂದಾವಣೆಯು ಕಡ್ಡಾಯವಾಗಿದೆ. ಹೀಗೆ ಎಲ್ಲ ರೀತಿಯ ಬೀಜಗಳು, ಉತ್ಪಾದಕರು, ಮಾರಾಟಗಾರರು ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ರಚಿಸಿದ ನೊಂದಣಿ ಸಮಿತಿಗಳಲ್ಲಿ ನಿಗದಿತ ಶುಲ್ಕ ನೀಡಿ ನಿಬಂಧನೆಗೊಳಪಟ್ಟು ನೊಂದಣಿ ಮಾಡುವುದು ಕಡ್ಡಾಯವೆಂದಿದೆ.

ಹಾಗೊಂದು ವೇಳೆ ಕಾಯಿದೆ ಉಲ್ಲಂಘಿಸಿ ನೊಂದಣಿ ಮಾಡದೇ ಉತ್ಪಾದನೆಯಲ್ಲಿ ತೊಡಗುವುದು, ಬೀಜ ಮಾರಾಟ ಮಾಡುವುದು, ಬಿತ್ತನೆ ಮಾಡುವುದು -ವಿನಿಮಯ ಮಾಡಿಕೊಳ್ಳುವುದು ಮಾಡಿದಲ್ಲಿ ಕಲಂ - 38 ರ ಪ್ರಕಾರ ಅಪರಾಧವಾಗುವುದು. ಮಾತ್ರವಲ್ಲ ಈ ಅಪರಾಧ ಮಾಡಿದುದಕ್ಕಾಗಿ ರೈತರು 5000 ರೂ.ಗಳಿಂದ 25,000 ರೂ. ಗಳವರೆಗೆ ದಂಡ ತೆರಬೇಕಾಗುತ್ತದೆ. ಇಲ್ಲವೇ ಆರು ತಿಂಗಳ ಜೈಲು ವಾಸ ಅನುಭವಿಸಬೇಕಾಗುತ್ತದೆ. ಇಲ್ಲವೇ ದಂಡ ಮತ್ತು ಜೈಲು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.



ಹಲವು ತೊಂದರೆ ಗಳನ್ನು ಎದುರಿಸಿ ರೈತನು ಬೀಜ ಉತ್ಪಾದಕನೆಂದು ತನ್ನನ್ನು ನೊಂದಾಯಿಸಿ ಕೊಂಡರೂ,ಕೇವಲ ಬೀಜಗಳನ್ನು ಬಳಸಬಹುದಷ್ಟೇ ಮಾರಾಟ ಮಾಡುವಂತಿಲ್ಲ. ಹಾಗೆಯೇ ಬೀಜಗಳನ್ನು ಮರು ಬಳಕೆ ಮಾಡುವಂತಿಲ್ಲ. ಮಾರಾಟ ಮಾಡಲು ಮುಂದಾಗಬೇಕಾದರೆ ಪುನಃ ಮಾರಾಟಗಾರನಾಗಿ ರಾಜ್ಯ ಸರ್ಕಾರ ರಚಿಸಿದ ನೊಂದಣಿ ಸಮಿತಿಯಲ್ಲಿ ನೊಂದಾಯಿಸಿಕೊಳ್ಳಬೇಕು. ಮಾತ್ರವಲ್ಲ ಮಾರಾಟ ಮಾಡಲಿರುವ ಬೀಜಗಳು ಅಥವಾ ತಳಿಗಳು ಕಲಂ-6 ರ ಖಂಡ (ಎ) ಪ್ರಕಾರ ಮೊಳಕೆ ಪ್ರಮಾಣ, ವಂಶವಾಹಿ, ಭೌತಿಕ ಪರಿಶುದ್ಧತೆ ಮತ್ತು ಬೀಜದ ಆರೋಗ್ಯಕ್ಕೆ ಸಂಬಂಧಿಸಿ ನಿರ್ದಿಷ್ಟ ಪಡಿಸಲಾದ ಕನಿಷ್ಟ ಪ್ರಮಾಣಗಳಿಗೆ ಅನುಗುಣವಾಗಿರತಕ್ಕದ್ದು ಎಂದು ಹೇಳಲಾಗಿದೆ.



ಈ ಎಲ್ಲವನ್ನು ಗಮನಿಸಿದಾಗ, ಸಾಮಾನ್ಯ ರೈತನೋರ್ವ ಇದೆಲ್ಲವನ್ನು ಪೂರೈಸಲು ಸಾಧ್ಯವೇ ಎಂಬ ಅನುಮಾನ ಯಾರಿಗಾದರೂ ಬರಲೇ ಬೇಕು. ಖಂಡಿತ ವಾಗಲೂ ಇದು ರೈತರನ್ನು, ಬೀಜ ಉತ್ಪಾದನೆಯಿಂದ - ಮಾರಾಟದಿಂದ ಹಾಗೂ ಬಳಕೆ, ವಿನಿಮಯದಿಂದ ದೂರವಿಡುವ ಹುನ್ನಾರವೇ ಆಗಿರುವುದು ಸ್ಪಷ್ಟವಾಗುತ್ತಿದೆ. ಆದ್ದರಿಂದಲೇ ಇದು ರೈತರ ಮೂಲಭೂತ ಬೀಜ ಹಕ್ಕಿನ ಮೇಲೆ ನಡೆಸಿದ ಗದಾ ಪ್ರಹಾರವಾಗಿದೆ.

ಗಗನಕ್ಕೆ ಏರುವ ಬೆಲೆಗಳು

ಕಡ್ಡಾಯ ನೊಂದಾವಣೆಯು ಒಂದು ಕಡೆ ರೈತರ ಮೂಲಭೂತ ಹಕ್ಕಿನ ಮೇಲೆ ದಾಳಿ ನಡೆಸಿದರೇ, ಇನ್ನೊಂದೆಡೆ ಈಗ ಬೀಜ ಮಾರುಕಟ್ಟೆಯ ಶೇ.40ರಷ್ಟು ಹಿಡಿತ ಹೊಂದಿರುವ ಖಾಸಗೀ ಕಂಪೆನಿಗಳಿಗೆ ಅದರಲ್ಲೂ ದೇಶೀಯ ಮತ್ತು ವಿದೇಶದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಶೇ.100 ರಷ್ಟು ಮಾರುಕಟ್ಟೆ ಹೊಂದಲು ಅವಕಾಶ ಮಾಡಿಕೊಡಲಿದೆ!

ಈಗಾಗಲೇ ಕೇಂದ್ರ ಸರ್ಕಾರ ಭೌದ್ಧಿಕ ಆಸ್ತಿ ಹಕ್ಕುಗಳ ಕಾಯ್ದೆ - 1970ಕ್ಕೆ ಈ ಅವಧಿಯಲ್ಲಿ 3 ಬಾರಿ ತಿದ್ದುಪಡಿ ತಂದಿದೆ ಮತ್ತು ಆ ಮೂಲಕ ಈ ಹಿಂದೆ ಉತ್ಪಾದನಾ ವಿಧಾನಕ್ಕೆ ನೀಡುತ್ತಿದ್ದ ಪೇಟೆಂಟ್ ಹಕ್ಕಿನ ಬದಲಿಗೆ ಉತ್ಪನ್ನಗಳಿಗೆ ನೀಡಲಾಗಿದೆ! ಇದರಿಂದ ಹೊಸ-ಹೊಸ ಸಂಶೋಧನೆಗಳ ಉತ್ಪನ್ನಗಳ ಮೇಲಿನ ಏಕಸ್ವಾಮ್ಯ ಹಕ್ಕು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸಿಗಲಿರುವುದರಿಂದ, ಉತ್ಪಾದಿಸುವ, ಮಾರಾಟ ಮಾಡುವ ಹಕ್ಕನ್ನು ನೊಂದಾಯಿಸಿಕೊಳ್ಳುವ ಶಕ್ತಿ ಇವುಗಳಿಗಿರುವುದರಿಂದ ಮಾತ್ರವಲ್ಲ ಈ ನೊಂದಾವಣೆಯು ವಾರ್ಷಿಕ - ದ್ವೈವಾರ್ಷಿಕ ಬೆಳೆಗಳಿಗೆ 15 ವರ್ಷಗಳವರೆಗೆ ಮತ್ತು ಬಹುವಾರ್ಷಿಕ ಬೆಳೆಗಳಿಗೆ 18 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ಹಾಗೆ ಅಲ್ಲಿಂದಾಚೆ ಪುನಃ ಇಷ್ಟೇ ಅವಧಿಗೆ ನೊಂದಣಿಯನ್ನು ಮುಂದುವರೆಸಿಕೊಳ್ಳಲು ಅವಕಾಶವನ್ನು ಮಸೂದೆಯು ನೀಡುವುದರಿಂದ ಬೀಜಗಳ ಬೆಲೆ ಮುಂದಿನ ಅವಧಿಯಲ್ಲಿ ಗಗನಕ್ಕೇರಲಿವೆ.

ಉತ್ಪನ್ನಗಳ ಮೇಲಿನ ಭೌದ್ಧಿಕ ಆಸ್ತಿ ಹಕ್ಕಿನಂತೆ ಬಳಕೆದಾರರು ಏಕಸ್ವಾಮ್ಯ ಹೊಂದಿದ ಸಂಸ್ಥೆಗೆ ರಾಯಧನವನ್ನೂ ನೀಡಬೇಕಾಗುತ್ತದೆ. ಇದರ ಜೊತೆ ಬೆಲೆಗಳ ಮೇಲೆ ಸರ್ಕಾರದ ಸರಿಯಾದ ನಿಯಂತ್ರಣವಿಲ್ಲದಿರುವುದರಿಂದ (ಈಗಾಗಲೇ ಉತ್ಪನ್ನಗಳ ನಿಜ ವೆಚ್ಚದ 10-15 ಪಟ್ಟು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿವೆ) ಬೀಜಗಳ ಬೆಲೆ ಇನ್ನು ಮುಂದೆ ಅದರ ವಾಸ್ತವಿಕ ಬೆಲೆಯ 20-30 ಪಟ್ಟು ಹೆಚ್ಚುವ ಅಪಾಯವಿದೆ.

ಇದರ ಜೊತೆ ಸಾಂಪ್ರದಾಯಿಕ ಬೀಜಗಳು, ಸಸ್ಯಗಳು - ತಳಿಗಳನ್ನು ಅಬಿವೃದ್ಧಿ ಪಡಿಸಿದ್ದು ಈ ದೇಶದ ರೈತರೇ ಆಗಿರುವುದರಿಂದ ಯಾರೊಬ್ಬರಿಗೂ ಅವುಗಳ ಮೇಲೆ ಏಕಸ್ವಾಮ್ಯ ವಿಲ್ಲವಾಗಿದೆ! ಆದರೆ ಮಸೂದೆ ಎಲ್ಲಾ ಬೀಜಗಳ ನೊಂದಣಿ ಕಡ್ಡಾಯವೆನ್ನುತ್ತಿದೆ! ಇಲ್ಲಿ ಪ್ರಶ್ನೆ ಇರುವುದು ಯಾರು ನೊಂದಾಯಿಸಿಕೊಳ್ಳಬೇಕು?! ಉಳಿಸುವಂತ ಕ್ರಮಗಳು ಮಸೂದೆಯಲ್ಲಿಲ್ಲ! ಹೋಗಲಿ, ಸಕಾಲದಲ್ಲಾದರು ಇವುಗಳನ್ನು ಯಾವುದೋ ಒಂದು ಕಂಪೆನಿ ಅಲ್ಪ- ಸ್ವಲ್ಪ ಸುಧಾರಣೆ ಮಾಡಿ ಏಕಸ್ವಾಮ್ಯಕ್ಕೆ ಒಳಪಡಿಸಿಕೊಂಡರೆ ಆಶ್ಚರ್ಯ ಪಡಬೇಕಿಲ್ಲ! ಈಗಾಗಲೇ ಬಹುರಾಷ್ಟ್ರೀಯ ಸಂಸ್ಥೆಗಳು 3ನೇ ಜಗತ್ತಿನ ತಳಿಗಳನ್ನೂ ಸುಧಾರಿಸಿ ತಮ್ಮ ಏಕಸ್ವಾಮ್ಯಕ್ಕೊಳಪಡಿಸಿರುವುದು ಜಗಜ್ಜಾಹೀರಾಗಿದೆ.

ಪರಿಣಾಮವಾಗಿ ರೈತರು ಮಾತ್ರವಲ್ಲ ದೇಶದ ಎಲ್ಲಾ ಬಳಕೆದಾರರು ಸಾರ್ವತ್ರಿಕ ಬೆಲೆ ಏರಿಕೆಗೆ ತುತ್ತಾಗಬೇಕಾಗುತ್ತದೆ.

ಇದೆಲ್ಲಾ ಬಹುರಾಷ್ಟ್ರೀಯ ಸಂಸ್ಥೆಗಳ ವ್ಯಾಪಕವಾದ ಸುಲಿಗೆಗೆ ಅನುಕೂಲಕರವಾಗಿದೆ! ಹಾಗೇ ದೇಶದ ರೈತರು-ಈ ಕಂಪೆನಿಗಳ ದುಬಾರಿಬೆಲೆಯ ಸುಲಿಗೆಯಿಂದ ರಕ್ಷಣೆ ನೀಡಬೇಕೆಂಬ ಕೋರಿಕೆಗೆ ತೀರಾ ವ್ಯತಿರಿಕ್ತವಾದುದಾಗಿದೆ.

ಕುಲಾಂತರಿ ತಳಿಗಳು

ಈ ಕುಲಾಂತರಿ ತಳಿಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಪಕವಾದ ಪ್ರಯೋಗಕ್ಕೆ ಒಳಪಡಿಸದೇ ನೇರ ರೈತರ ಹೊಲಗಳಿಗೆ

ಪುಟ 8 ಕ್ಕೆ

> ವಿಶ್ವ ಜೀನ್ ಬ್ಯಾಂಕ್‌ಗಳಲ್ಲಿರುವ ಬಹುದೊಡ್ಡ ಪಾಲು 3ನೇ ಜಗತ್ತಿನ ಕೃಷಿಯಿಂದ, ಸಾವಿರಾರು ವರ್ಷಗಳ ಕಾಲ ಈಗ ಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳ ರೈತರು ಸಹನೆಯಿಂದ ಪೋಷಿಸಿ ಬೆಳೆಸಿದ್ದರಿಂದ ಪಡೆದದ್ದು ಎಂಬುದನ್ನು ಗಮನಿಸಬೇಕು. ಇವನ್ನು ಬಳಸಿ ಬಹುರಾಷ್ಟ್ರೀಯ ಸಂಸ್ಥೆಗಳು ಹೊಸ ಬೀಜ ತಳಿಗಳನ್ನು ಉತ್ಪಾದಿಸಿ ಅವನ್ನು ತಮ್ಮ ಲಾಭಕ್ಕಾಗಿ ಪೇಟೆಂಟ್ ಮಾಡುತ್ತಾರೆ! ನಮ್ಮ ಬೌದ್ಧಿಕ ಜ್ಞಾನವನ್ನು ತಮ್ಮ ಲಾಭಕ್ಕಾಗಿ ಅಪಹರಿಸುತ್ತಾರೆ. ಉದಾ: ಇಥಿಯೋಪಿಯಾದ ಸೋರ್ಘಮ್(ಜೋಳದ ಜಾತಿಯ ಸಸ್ಯ) ಆಫ್ರಿಕಾದ ಕಾಫೀ, ಬೊಲಿವಿಯಾದ ಆಲುಗಡ್ಡೆಯನ್ನು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ರೋಗ ನಿರೋಧಕ ಶಕ್ತಿ ಬರುವಂತೆ ಮಾಡಿ ಅಭಿವೃದ್ಧಿ ಪಡಿಸಲಾಗಿದೆ. ಇವನ್ನು 3ನೇ ಜಗತ್ತಿನ ದೇಶಗಳ ಜೀನ್ ಬ್ಯಾಂಕುಗಳಲ್ಲಿ ಎಂದೂ ಪೇಟೆಂಟ್‌ಗೆ ಒಳಪಡಿಸಿದ್ದರಿಂದ ಬಹುರಾಷ್ಟ್ರೀಯ ಕಂಪೆನಿಗಳು ಹೊಸ ಉತ್ಪಾದನೆಗಳನ್ನು ತಡೆಯಲು ಪುಕ್ಕಟೆಯಾಗಿ ಪಡೆದವು. ಮಾತ್ರವಲ್ಲ ಹೊಸ ಉತ್ಪಾದನೆಗಳನ್ನು ಪೇಟೆಂಟ್ ಮಾಡಿದವು. ಈಗ ಇಥಿಯೋಪಿಯಾ, ಆಫ್ರಿಕಾ ಬೊಲಿವಿಯದ ರೈತರು ಇವುಗಳನ್ನು ರಾಯಧನ ನೀಡದೇ ಬಳಸುವಂತಿಲ್ಲ!
>
> **- ಸೀತಾರಾಂ ಯೆಚೂರು**
> ಗ್ಯಾಟ್-1994ರಿಂದ

ಬೀಜ ಮಸೂದೆ - 2004...

ಪುಟ 7 ರಿಂದ

ತೆಗೆದುಕೊಂಡು ಹೋಗಲು ಬಿಡಬಾರದು ಎಂಬ ಚಳುವಳಿಕಾರರ ಅಭಿಪ್ರಾಯಕ್ಕೆ ಈ ಮಸೂದೆಯು,

ಕಲಂ-15ರಲ್ಲಿ, 'ಕುಲಾಂತರಿ ವಿಧಕ್ಕೆ ಸೇರಿದ ಯಾವುದೇ ಬೀಜವನ್ನೂ ಅರ್ಜಿದಾರನು ಪರಿಸರ ಸಂರಕ್ಷಣೆ ಕಾಯ್ದೆ-1986ರ ವಿಧಿಗಳ ಅನ್ವಯ ಅನುಮತಿ ಪಡೆಯದ ಹೊರತು ನೊಂದಾವಣೆ ಮಾಡುವಂತಿಲ್ಲ'... ಎಂದು ಹೇಳಿದ್ದರೂ.. ಮುಂದುವರೆದು,

"ಆದಾಗ್ಯೂ ಅರ್ಜಿದಾರನು ಒದಗಿಸಿದ ಮಾಹಿತಿಗಳ ಮೇಲೆ ಪರಿಸರ ಸಂರಕ್ಷಣೆ ಕಾಯ್ದೆ - 1986ರ ಅನುಮತಿಯನ್ನು ನಿರೀಕ್ಷಿಸಿ 2 ವರ್ಷಗಳಿಗೆ ಮೀರದ ಅವಧಿಗೆ ತಾತ್ಕಾಲಿಕ ನೊಂದಾವಣೆಯನ್ನೂ, ನೋಂದಣೆ ಉಪ ಸಮಿತಿ ನೀಡಬಹುದು" ಎಂದು ಹೇಳುವ ಮೂಲಕ ಬುಡಮೇಲು ಮಾಡಲಾಗಿದೆ. ಹೀಗೆ ಪರವಾನಗಿ ಪಡೆದ 2 ವರ್ಷಗಳ ಈ ಅವಧಿಯಲ್ಲಿ ಉಂಟು ಮಾಡಬಹುದಾದ ಹಾನಿಯ ಬಗ್ಗೆ ಏನೊಂದು ಕ್ರಮಗಳಿಲ್ಲ.

ಅದು ಮಾತ್ರವಲ್ಲಾ ಈ ಕಂಪೆನಿಗಳು ತಮ್ಮ ಬೀಜಗಳು, ತಳಿಗಳ ಬಗ್ಗೆ, ಕುಲಾಂತರಿಯಾಗಲೀ, ಇತರೆ ಆಗಿರಲಿ ಅವುಗಳಿಗೆ ಸ್ವಯಂ ಸರ್ಟಿಫಿಕೇಟ್ ನೀಡಿಕೊಳ್ಳುವ ಅಧಿಕಾರವನ್ನು ಕಲಂ-27 ನೀಡುತ್ತದೆ. ಹೇಗಿದೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಣೆ ಹಾಸುವ ರೀತಿ!?

ಬೀಜ ಇನ್ಸ್‌ಪೆಕ್ಟರ್ :

ಮಸೂದೆಯಲ್ಲಿ, ಈ ಕಾಯ್ದೆ ಉಲ್ಲಂಘಿಸುವವರ ವಿರುದ್ಧ ದೃಢವಾದ ಕ್ರಮಗಳನ್ನು, ಕಠೋರವಾಗಿ ವ್ಯವಹರಿಸಲು ಬೇಕಾದ ರೀತಿಯಲ್ಲಿ ಕಲಂ-35 ಹೇಳುತ್ತಿದೆ. ಪ್ರಶ್ನೆಯಿರುವುದು ಈ ಕ್ರಮಗಳು ಯಾರ ವಿರುದ್ಧ ಬರಲಿವೆ! ಯಾರು ತಮ್ಮ ಮೂಲಭೂತ ಹಕ್ಕನ್ನು ಕಳೆದು ಕೊಂಡಿರುವರೋ, ಅಂತಹ ಪಾಪದ ರೈತರ ವಿರುದ್ಧ ಬಳಕೆಯಾಗಲಿರುವುದೇ ಹೊರತು, ಕಳಪೆ ಬೀಜ ಮಾರಾಟ ಮಾಡಿ ಹಾನಿಯುಂಟುಮಾಡುವವರಿಂದ ಹಾನಿ ತುಂಬಿಸಿಕೊಡಲಲ್ಲ! ಇವುಗಳನ್ನೂ ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕಿದೆ!

ನಷ್ಟ ಪರಿಹಾರ

ಬೀಜ ಕಾಯ್ದೆ-1966ರಲ್ಲಿ ಕಳೆದು ಹೋಗಿದ್ದ ಕಳಪೆ ಅಥವಾ ಕೀಳುಗುಣಮಟ್ಟದ ಬೀಜಗಳಿಂದಾಗಿ ಆಗುವ ಹಾನಿಯನ್ನೂ ರೈತರಿಗೆ ತುಂಬಿ ಕೊಡುವ ಪ್ರಶ್ನೆಯು ಬೀಜ ಮಸೂದೆ-2004 ರಲ್ಲಿ ಕಂಡುಬಂದಿಲ್ಲ. ರೈತರಿಗಾಗುವ ಹಾನಿಯನ್ನು ತುಂಬಿಕೊಡುವ ಕ್ರಮ ನಿರ್ಧಿಷ್ಟವಾಗಿ - ಪರಿಣಾಮಕಾರಿಯಾಗಿರುವಂತೆ ನೋಡಿಕೊಂಡಿಲ್ಲ! ಬದಲಿಗೆ,

ಕಲಂ-20ರ ಪ್ರಕಾರ ನೊಂದಾಯಿತ ಬೀಜವು ತಿಳಿಸಿದ ಪರಿಸ್ಥಿತಿಯಲ್ಲಿ ತಿಳಿಸಲಾದ ಕಾರ್ಯಕ್ಷಮತೆಯನ್ನು ಅಥವಾ ಇಳುವರಿಯನ್ನು ನೀಡದಿದ್ದರೇ, ಅಂಥ ರೈತನು ಗ್ರಾಹಕ ಸಂರಕ್ಷಣೆ ಕಾಯ್ದೆ-1986ರ ಪ್ರಕಾರ ಉತ್ಪಾದಕ, ವಿತರಕ, ಅಥವಾ ಮಾರಾಟಗಾರನಿಂದ ಪರಿಹಾರಕ್ಕೆ ದಾವೆ ಹಾಕಬಹುದು.

ಶೇ.70ರಷ್ಟಿರುವ ಸಣ್ಣ- ಅತಿ ಸಣ್ಣ ರೈತರು, ಈ ದೈತ್ಯ ಕಂಪೆನಿಗಳೆದುರು ಗ್ರಾಹಕರ ವೇದಿಕೆಗೆ ಹೋಗಿ ಗೆಲ್ಲಲು ಸಾಧ್ಯವೇ?! ಇದಕ್ಕಾಗುವ ವೆಚ್ಚ ಅಥವಾ ಸಮಯ ನೀಡಲು ಅವರಿಗೆ ಸಾಧ್ಯವೆ? ಒಂದು ವೇಳೆ ಭಾರಿ ತೊಂದರೆ, ಶ್ರಮ ಪಟ್ಟು ದಾವೆ ಹೂಡಿದರೆ ರೈತರಿಗಾದ ಪೂರ್ಣಹಾನಿಯನ್ನು ತುಂಬಿಕೊಡಲು ಈ ಕಾಯ್ದೆ ಸಮರ್ಪಕವಾಗಿದೆಯೇ?!

ಒಟ್ಟಾರೆ ಪರಿಹಾರವು ರೈತರು ಸಂಘಟಿತರಾಗಿ ತೀವ್ರ ಪ್ರತಿಭಟನೆ ನಡೆಸದಿದ್ದರೆ ಈಗ ಸಿಗುವ ಪರಿಹಾರವು ಮರೀಚಿಕೆಯಾಗಲಿದೆ!

ಇದನ್ನೆಲ್ಲಾ ವಿಮರ್ಶಿಸಿ ನೋಡುವಾಗ ರೈತರ ಬೇಡಿಕೆಗಳಿಗೆ ಜಾಗವೇ ಇಲ್ಲವಾಗಿದೆ. ಅಲ್ಲಿ ತಿಳಿಸಲಾದಂತೆ ಗುಣಮಟ್ಟದ ಬೀಜ ಪೂರೈಕೆಯ ಉದ್ದೇಶ ಕಪಟ ನಾಟಕವೆಂಬುದು ಗೊತ್ತಾಗುತ್ತದೆ. ಮಾತ್ರವಲ್ಲಾ ಈ ಮಸುದೆಯ ನಿಜ ಉದ್ದೇಶ ರೈತರ ಮೂಲಭೂತ ಹಕ್ಕಿನ ಮೇಲೆ ದಾಳಿ ನಡೆಸುವುದು! ಬೆಲೆಗಳ ಏರಿಕೆಯ ತೀವ್ರತೆಯ ಮೂಲಕ ರೈತರನ್ನೂ, ಬಳಕೆದಾರರನ್ನೂ ವ್ಯಾಪಕವಾಗಿ ಸುಲಿಗೆಗೊಳಪಡಿಸುವುದೆಂಬುದು ಬಯಲಾಗುತ್ತದೆ!

ಅಲ್ಲದೇ,

ದೇಶದ ಬೀಜ ಮಾರುಕಟ್ಟೆಯ ಮೇಲೆ ಶೇ.100ರಷ್ಟು ಹಿಡಿತ ಸಾಧಿಸಿ ಗುತ್ತೇದಾರಿಕೆಗೆ ಒಳಪಡಿಸುವ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅಪೂರ್ವ ಅವಕಾಶ - ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಒಂದು ಕಡೆ ಈ ಮಸೂದೆ ರೈತರಿಗಿರುವ ಬೀಜಗಳ ಮೂಲಭೂತ ಹಕ್ಕಿಗೆ ಧಕ್ಕೆ ತಂದರೆ, ಮತ್ತೊಂದೆಡೆ ಮಾದರಿ ಮಾರುಕಟ್ಟೆ ಕಾನೂನು - 2003, ಗುತ್ತಿಗೆ ಕೃಷಿಯನ್ನು ಪ್ರೋತ್ಸಾಹಿಸಿ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೇಕಾದ ಬೀಜ, ಮತ್ತು ಬೆಳೆಗಳನ್ನು ಬೆಳೆಯಲು ಅವಕಾಶ ನೀಡುತ್ತದೆ. ಮಾತ್ರವಲ್ಲ ರೈತರಿಂದ ಬೆಳೆ ಖರೀದಿಸುವಾಗ ಖಾಸಗೀ ವ್ಯಾಪಾರಸ್ಥರು ಕೃತಕವಾಗಿ ಬೆಲೆ ಕುಸಿಯುವಂತೆ ಮಾಡುತ್ತಿದ್ದ ತಂತ್ರಗಳನ್ನೂ ಹಾಗು ತೂಕ ಮತ್ತಿತರೆ ರೀತಿಯಲ್ಲಿ ವಂಚಿಸುತ್ತಿದ್ದ (ಎಪಿಎಂಸಿ) ಮಾರುಕಟ್ಟೆಗಳು ಮತ್ತು ಸರ್ಕಾರಿ ಏಜೆನ್ಸಿಗಳನ್ನು ರದ್ದುಗೊಳಿಸಿ, ನೇರವಾಗಿ ರೈತರಿಂದ ಖರೀದಿಸಲು ಮತ್ತು ಈ ಹಿಂದಿನಂತೆ ಕೃತಕವಾಗಿ ಬೆಲೆಗಳನ್ನು ಇಳಿಸಿ ವಂಚಿಸಲು ನೆರವಾಗುವಂತಹ ಖಾಸಗೀ ಹಾಗೂ ವಿಶೇಷ ಮಾರುಕಟ್ಟೆಗಳನ್ನು ನಿರ್ಮಿಸಿ, ಬಹುರಾಷ್ಟ್ರೀಯ ಸಂಸ್ಥೆಗಳ ಕಪಿಮುಷ್ಟಿಗೆ ದೇಶೀಯ ಕೃಷಿಯನ್ನು ತಳ್ಳಲಾಗಿದೆ. ಈ ಎಲ್ಲದರಿಂದ ಇಬ್ಬಂದಿಯೆನಿಸಿ, ಈ ವ್ಯವಸಾಯವೇ ಬೇಡವೆನಿಸಿ ಸಾಲಕ್ಕೆ ಭೂಮಿ ಬಿಟ್ಟುಕೊಟ್ಟರೇ.... ಅವುಗಳನ್ನು ಕೇಂದ್ರೀಕರಿಸಿ ಇಟ್ಟುಕೊಳ್ಳಲು ಬಹುರಾಷ್ಟ್ರೀಯ ಕಂಪೆನಿಗಳಿಗೆ, ದೊಡ್ಡ ಬಂಡವಾಳಶಾಹಿ ಕೃಷಿಕರಿಗೆ ಅನುಕೂಲವಾಗುವಂತೆ, ಭೂಕೇಂದ್ರೀಕರಣಕ್ಕೆ ದೊಡ್ಡ ರೀತಿಯಲ್ಲಿ ಎಡೆ ಕೊಡಲು, ಭೂಸುಧಾರಣೆಗೆ ತಿದ್ದುಪಡಿ ಮಾಡಲಾಗಿದೆ! ಯೋಚಿಸಬೇಕಾಗಿಲ್ಲ?!

ಸೆಪ್ಟೆಂಬರ್ 29 ರ ಚಳುವಳಿ.......

ಪುಟ 4 ರಿಂದ

ಯಶಸ್ವಿಯಾಯಿತು.

ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ, ಗ್ರಾಮ ಪಂಚಾಯಿತಿ ನೌಕರರ ಸಂಘ, ದಲಿತ ಸಂಘರ್ಷ ಸಮಿತಿ ಇವರೆಲ್ಲ ಸಂಘಟನೆಯ ನೇತೃತ್ವದಲ್ಲಿ ಬಸವನ ಬಾಗೇವಾಡಿಯಲ್ಲಿ ಮೆರವಣಿಗೆ ತೆಗೆದು ಬಸವೇಶ್ವರ ಚೌಕದಲ್ಲಿ ರಸ್ತೆ ತಡೆ 4 ಗಂಟೆ ಮಾಡಲಾಯಿತು. 500 ಜನರು ಮುತ್ತಗಿ ಕ್ರಾಸ್ ಹೆದ್ದಾರಿ ಒಂದು ತಾಸು ಬಂದು ಮಾಡಿದರು. ಪ್ರಾಂತ ರೈತ ಸಂಘದ ರಾಮಚಂದ್ರ ರೂಡಗಿ, ರಾಮಣ್ಣ ಶೀರೆಗೋಳ, ಸಾಯಬಣ್ಣ ಹಂದಿಗನೂರ, ರಾಜೇಸಾಬ ಕೋಲಾರ, ರಾಜ್ಯ ರೈತ ಸಂಘದ ಅರವಿಂದ ಕುಲಕರ್ಣಿ, ರಮೇಶ್ ರಾಠೋಡ, ಪಂಚಾಯಿತಿ ನೌಕರರಿಂದ ಜಿ.ವಿ.ಕಲ್ಯಾಣ, ಕುಂಬಾರ ಡಿ.ಎಸ್.ಎಸ್. ಸುರೇಶ ಮಣ್ಣೂರ ಇವರು ಮುಖಂಡತ್ವ ವಹಿಸಿದರು.


ಇಂಡಿಯಲ್ಲಿ ಎ.ಪಿ.ಎಂ.ಸಿ. ಆವರಣದಿಂದ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಹಾಯ್ದು ಬಸವೇಶ್ವರ ಸರ್ಕಲ್‌ದಲ್ಲಿ ಒಂದು ಗಂಟೆ ರಸ್ತೆ ಬಂದು ಮಾಡಿದರು ಹಾಗೂ ವಿಜಾಪುರ ಸೊಲ್ಲಾಪೂರ ರೇಲ್ವೆ ಅರ್ಧ ಗಂಟೆ ತಡೆಹಿಡಿದರು. ಪ್ರಾಂತ ರೈತ ಸಂಘದ ತಾಲೂಕಾ ಅಧ್ಯಕ್ಷ ಸೋಮಣ್ಣ ಮೇತ್ರಿ, ಪಿ.ಎಲ್. ಬಂದಪಟ್ಟೆ ಕಾರ್ಯದರ್ಶಿ, ಹುಸೇನಿ ಮಾರ್ಕಬ್ಬಿನಹಳ್ಳಿ, ರಾಜ್ಯ ರೈತ ಸಂಘದ ತಾಲೂಕಾ ಅಧ್ಯಕ್ಷರು ಗ್ರಾ.ಪಂ.ನೌ.ಸಂಘದ ಸಂಗಪ್ಪ ಶಿರೂರ, ಕಾರ್ಯದರ್ಶಿ ಕೇರೂರ ಯುವ ಜನ ಮುಖಂಡ ಬಿ.ಡಿ. ಪಾಟೀಲ ಇವರ ಮುಖಂಡತ್ವದಲ್ಲಿ ಹೋರಾಟ ಯಶಸ್ವಿಯಾಯಿತು.

ಸಿಂಧಗಿ : ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರ, ರಾಜ್ಯ ರೈತ ಸಂಘದ ಸಿದ್ರಾಮ ರಂಜುಣಗಿ, ಡಿ.ವೈ.ಎಫ್.ಐ.ದ ಬಾಬು ಕೇಸರಿ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಚೌಧರಿ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಎಸ್.ಜಿ.ಬೋರಗಿ, ರಾಮಗಿ, ರಾಮಗಿರಿ ಮಠ ಗ್ರಾಮ ಪಂಚಾಯತ್ ನೌಕರರ ಸಂಘದ ತಾಲೂಕಾ ಅಧ್ಯಕ್ಷ ಮುಂತಾದವರು ನೇತೃತ್ವ ವಹಿಸಿದ್ದರು. ಮುಖ್ಯ ಬೀದಿಗಳಲ್ಲಿ ಹಾಯ್ದು ಬಸವೇಶ್ವರ ಸರ್ಕಲ್‌ದಲ್ಲಿ ರಸ್ತೆ ತಡೆ ಮಾಡಲಾಯಿತು.

ಮೋರಟಗಿ : ಪ್ರಾಂತ ರೈತ ಸಂಘದ ಚೆನ್ನಪ್ಪ ಕುಂಬಾರ, ಭಾರತ ವಿದ್ಯಾರ್ಥಿ ಫೆಡರೇಷನ್‌ದ ಸೊನ್ನದ್, ವಸಂತ ಈಳಗೇರ, ಡಿ.ವೈ.ಎಫ್.ಐ. ಮುಖಂಡರ ನೇತೃತ್ವದಲ್ಲಿ ಹೆದ್ದಾರಿ ತಡೆ ಮಾಡಿ, ಗಾಡಿ ಎತ್ತು ನಿಲ್ಲಿಸಿ ಹೆದ್ದಾರಿಯನ್ನು 4 ತಾಸು ಯಶಸ್ವಿಯಾಗಿ ತಡೆಯಲಾಯಿತು.

ವಿಜಾಪುರ ತಾಲೂಕಿನ ಯಕ್ಕುಂಡಿ ಗ್ರಾಮದಲ್ಲಿ ರಾಚಪ್ಪ ಹಡಪದ, ಪ್ರಾಂತ ರೈತ ಸಂಘ ಘಟಕದ ಅಧ್ಯಕ್ಷರು ಎಲ್ಲರೂ ಕೂಡಿ ಮುಂಜಾನೆ 7 ಗಂಟೆಯಿಂದ 10.30ರವರೆಗೆ ವಿಜಾಪುರ ಜಮಖಂಡಿ ಹೆದ್ದಾರಿಯನ್ನು ಬಂದು ಮಾಡಿದರು.

ಮುದ್ದೇಬಿಹಾಳದಲ್ಲಿ ಗ್ರಾಮ ಪಂಚಾಯತ್ ನೌಕರರ ಸಂಘದ ತಾಲೂಕಾ ಅಧ್ಯಕ್ಷ ಹಿರೇಮಠ, ಶಶಿ ಕುಲಕರ್ಣಿ, ರಾಜ್ಯ ರೈತ ಸಂಘದ ಅಹ್ಮದ ನಂದವಾಡಗಿ, ಹಾಗೂ ದಲಿತ ಸಂಘದ ಮುಖಂಡರ ನೇತೃತ್ವದಲ್ಲಿ ಸೇರಿ ರಸ್ತೆ ತಡೆ ಚಳುವಳಿಯನ್ನು ಯಶಸ್ವಿ ಮಾಡಲಾಯಿತು.



ಹಗರಿಬೊಮ್ಮನಹಳ್ಳಿಯಲ್ಲಿ ಭಾರಿ ರ್‍ಯಾಲಿ

ಬಳ್ಳಾರಿ : ಸೆಪ್ಟೆಂಬರ್ -29ರಂದು ಅಖಿಲ ಭಾರತ ಮುಷ್ಕರ ಜಿಲ್ಲೆಯಾದ್ಯಂತ ಯಶಸ್ವಿಯಾಗಿ ಸಂಘಟಿಸಲಾಗಿದೆ. ಹೊಸಪೇಟೆ - ಹಗರಿಬೊಮ್ಮನಹಳ್ಳಿಗಳು ಬಂದ್ ಆಚರಿಸಿವೆ! ಅದೇ ರೀತಿ ಶಿರುಗುಪ್ಪಾದಲ್ಲಿ ಪ್ರತಿಭಟನಾ ಪ್ರದರ್ಶನ ಮೆರವಣಿಗೆ ನಡೆಯುವಾಗ ಅಂಗಡಿ ಮುಂಗಟ್ಟುಗಳು ಮುಚ್ಚುವ ಮೂಲಕ ವ್ಯಾಪಾರಿ ಸಮುದಾಯಗಳು ಬೆಂಬಲಿಸಿದವು. ಬಳ್ಳಾರಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಅದೇ ಸಂದರ್ಭದಲ್ಲಿ ರೈತಸಂಘ ಮತ್ತು ಸಿಪಿಐ(ಎಂ) ಪಕ್ಷದ ಘಟಕಗಳಿಂದ ರಸ್ತೆ ತಡೆ ನಡೆದಿದೆ. ತೆಕ್ಕಳಕೋಟೆಯಲ್ಲಿ 400 ಜನರು, ತೋರಣಗಲ್ಲಿನಲ್ಲಿ 60 ಜನ 2 ಗಂಟೆ ಕಾಲ ರಸ್ತೆ ತಡೆ ಚಳುವಳಿ ನಡೆಸಿದ್ದಾರೆ. ಎಐಟಿಯುಸಿ ನೇತೃತ್ವದಲ್ಲಿ ಹಡಗಲಿ ತಾಲೂಕಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಗಿದೆ.



ರಾಯಚೂರಿನಲ್ಲಿ ರಸ್ತೆ ತಡೆ

ಹಗರಿ ಬೊಮ್ಮನಹಳ್ಳಿಯಲ್ಲಿ 3500ರಿಂದ 4000 ಜನರು ಅದೇ ರೀತಿ ಹೊಸಪೇಟೆ-1200 ಜನರು, ಶಿರುಗುಪ್ಪಾದಲ್ಲಿ ತೆಕ್ಕಲಕೋಟೆ ಸೇರಿ ಒಟ್ಟು 1100 ಜನರು ಬಳ್ಳಾರಿ ನಗರದಲ್ಲಿ 1300 ಜನರು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ ಮುಷ್ಕರದಲ್ಲಿ 7 ಸಾವಿರದಷ್ಟು ಜನರು ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

ಹೊಸಪೇಟೆಯಲ್ಲಿ 28ರಂದು ಪಂಜಿನ ಮೆರವಣಿಗೆಯನ್ನು ಜೆ.ಸಿ.ಟಿ.ಯು ಮತ್ತು ಸಿಪಿಎಂನಿಂದ ಆಯೋಜಿಸಲಾಗಿತ್ತು. 60 ಜನರು ಭಾಗಿಯಾದವರ ಸಂಖ್ಯೆ ಇದೆ. ಹೊಸಪೇಟೆಯಲ್ಲಿ 27ರಂದು 100 ಜನರ ಬೈಕ್ ರ್‍ಯಾಲಿಯನ್ನು ಯಶಸ್ವಿಯಾಗಿ ಸಂಘಟಿಸಲಾಗಿತ್ತು. 28 ರಿಂದ 2 ದಿನ ಆಟೋಪ್ರಚಾರವನ್ನು ಹಗರಿ ಬೊಮ್ಮನಹಳ್ಳಿ ಹೊಸಪೇಟೆಗಳಲ್ಲಿ ನಡೆಸಲಾಯಿತು. ಹೊಸಪೇಟೆಯಲ್ಲಿ ಬಂದ್ ಯಶಸ್ವಿಗೊಳಿಸಲು ಪ್ರಚಾರ ನಡೆಸಲಾಯಿತು.

ಮುಷ್ಕರ ವಿಫಲಗೊಳಿಸುವ ಪೋಲೀಸರ ಯತ್ನಗಳ ನಡುವೆಯೂ ಜನಬೆಂಬಲದಿಂದಾಗಿ ಮುಷ್ಕರ ಯಶಸ್ವಿಯಾಗಿ ಬಂದ್ ಆಗಿದೆ. ಜೆಸಿಟಿಯು ಜಿಲ್ಲಾ ಸಮಾವೇಶ ಬಳ್ಳಾರಿಯಲ್ಲಿ ಯಶಸ್ವಿಯಾಗಿ 200 ಕಾರ್ಯಕರ್ತರಿಂದ ನಡೆದಿತ್ತು. ಕರ್ನಾಟಕ ಪ್ರಾಂತರೈತ ಸಂಘ ಹಗರಿಬೊಮ್ಮನಹಳ್ಳಿ ಶಿರುಗುಪ್ಪಗಳಲ್ಲಿ ನಾಲ್ಕು ದಿನ ಜೀಪ್ ಜಾಥಾ ನಡೆಸಿತ್ತು.

ಜಿಲ್ಲೆಯಲ್ಲಿ ಅಂಗನವಾಡಿ ನೌಕರರು, ಅಕ್ಷರದಾಸೋಹದ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗಿದ್ದು ಗಮನ ಸೆಳೆದ ವಿಚಾರವಾಗಿದೆ. ಸಂಡೂರು ತಾಲೂಕಾ ಕೇಂದ್ರಗಳಲ್ಲಿ ನೂರಾರು ಜನರ ಸರಕಾರಿ ನೌಕರರ ಒಕ್ಕೂಟದ ನೇತೃತ್ವದ ಪ್ರತಿಭಟನೆ ನಡೆದಿದೆ. ಕೂಡ್ಲಿಗಿ ತಾಲೂಕಿನಲ್ಲಿ ಗ್ರಾಂಪಂಚಾಯತ್ ನೌಕರರ ಸಂಘ (ಸಿಐಟಿಯು) ಪ್ರತಿಭಟನೆ ನಡೆಸಿದೆ. ಹಡಗಲಿಯಲ್ಲಿ ಪಂಚಾಯ್ತಿ ನೌಕರರ ಹಾಗೂ ಒಕ್ಕೂಟದ ನೌಕರರು ಪ್ರತಿಭಟನೆ ನಡೆಸಿದ ವರದಿಗಳಿವೆ.


ಸೆಪ್ಟೆಂಬರ್ 29ರಂದು ನಡೆದ ಮುಷ್ಕರ ಹಗರಿಬೊಮ್ಮನಹಳ್ಳಿಯಲ್ಲಿ ಇತಿಹಾಸ ನಿರ್ಮಿಸಿದೆ. ಬೆಳಿಗ್ಗೆ ಕೆಂಪು ಸೂರ್ಯ ಉದಯವಾಗುತ್ತಿದ್ದಂತೆ ದುಡಿಯುವ ಜನ ವಿಭಾಗ ಹಗರಿಬೊಮ್ಮನಹಳ್ಳಿ ನಗರದಲ್ಲಿ ತಮ್ಮ ತಮ್ಮ ಸಂಘದ ಬ್ಯಾನರಡಿಯಲ್ಲಿ ಒಬ್ಬರ ಹಿಂದೆ ಒಬ್ಬರ ಸಿಪಾಯಿಗಳಂತೆ ಶಿಸ್ತುಬದ್ಧವಾಗಿ ನಿಂತರು. ಸುಮಾರು 3500 ಕ್ಕೂ ಹೆಚ್ಚು ಕಾರ್ಮಿಕರು ಇದ್ದರು. ಇದು ಹಗರಿಬೊಮ್ಮನಹಳ್ಳಿಯಲ್ಲಿ ಇತಿಹಾಸದಲ್ಲಿ ಅತಿ ಹೆಚ್ಚು ಕಾರ್ಮಿಕರು ಭಾಗವಹಿಸಿದ ಪ್ರತಿಭಟನಾ ರ್‍ಯಾಲಿ ಇದಾಗಿತ್ತು. ಇದರ ಪೂರ್ವಬಾವಿ ತಯಾರಿ ಪ್ರಚಾರ ಕಾರ್ಮಿಕರ ಬೃಹತ್ ರ್‍ಯಾಲಿ ಇಡೀ ನಗರವೇ ತನ್ನಷ್ಟಕ್ಕೆ ಸಂಪೂರ್ಣ ಬಂದ್ ಆಗಿ ಪರಿವರ್ತನೆಗೊಂಡಿತ್ತು. ಈ ಒಂದು ಕಾರ್ಮಿಕರ ಬೃಹತ್ ಪ್ರತಿಭಟನಾ ರ್‍ಯಾಲಿ ತಾಲೂಕಿನ ನಾಗರಿಕರಲ್ಲಿ ಸಂಚಲನವುಂಟು

→

...ಫ್ಯಾಸಿಸ್ಟ್ ಶಿವಸೇನೆ !!!

ಪುಟ 3 ರಿಂದ

'ಹಿಂದೂ ರಾಷ್ಟ್ರದ ನಿರ್ಮಾಣ' ತನ್ನ ಗುರಿಯೆಂದು ಘೋಷಿಸಿದೆ. ಮಹಾತ್ಮಗಾಂಧಿಯನ್ನು ಕೊಂದ ನಾಥೂರಾಂ ಗೋಡ್ಸೆ, ನಾಜಿ ಜರ್ಮನಿಯ ಅಡಾಲ್ಫ್ ಹಿಟ್ಲರ್‌ನನ್ನು ವೈಭವೀಕರಿಸುತ್ತ, ಆರಾಧಿಸುತ್ತದೆ. ಇತಿಹಾಸದ ವಿಕೃತ ತಿರುಚುವಿಕೆ, ಬಹುಸಂಸ್ಕೃತಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಅದರ ಕರಾಳ ಕೃತ್ಯಗಳಲ್ಲಿ ಕೆಲವು. ಭಾರತ-ಪಾಕ್ ಕ್ರಿಕೆಟ್ ಸರಣಿ ಕ್ರೀಡೆ ವಿರೋಧಿಸುವ, ಪ್ರೇಮಿಗಳ ದಿನವನ್ನು ಪಾಶ್ಚಾತ್ಯ ಸಂಸ್ಕೃತಿಯೆಂದು ಹೀಗಳೆವ ಸೇನೆ ಪಾಪ್ ಗಾಯಕ ಮೈಕೆಲ್ ಜಾಕ್ಸನ್‌ನನ್ನು ಕರೆಸಿ ಗಂಟು ಮಾಡಿಕೊಂಡಿದ್ದು ಅದರ ದೇಶಪ್ರೇಮದ ಡೋಂಗಿತನ, ಹಣ ಮಾಡುವ ದಂಧೆಯ ಒಂದು ಸ್ಯಾಂಪಲ್. ಕಲಾವಿದರು, ಸಾಹಿತಿಗಳು, ಪತ್ರಕರ್ತರ ಮೇಲೆ ಹಲ್ಲೆ ನಡೆಸಿರುವುದು ಮರೆಯಲಾಗದ ಘಟನೆಗಳು.



ಕರುನಾಡಿನಲ್ಲಿ ನೆಲೆಯೂರೀತೆ?

ಇಂತಹ ಕುಖ್ಯಾತಿ ಹೊಂದಿರುವ ಶಿವಶೇನೆ ಕರ್ನಾಟಕದಲ್ಲಿ ಬೆಳೆ(ಸ)ಯಲು ಯತ್ನಿಸುತ್ತಿದೆ. ಜನರ ಮುಂದೆ ಬಿಂಬಿತವಾಗುತ್ತಿದೆ? ಇಲ್ಲಿ ನೆಲೆ ಕಂಡುಕೊಳ್ಳಬಹುದೇ?

ದೇಶದಲ್ಲಿ ಕೋಮುವಾದಿ, ಫ್ಯಾಸಿಸ್ಟ್ ಸ್ವರೂಪದ ಶಕ್ತಿಗಳು ಬೆಳೆದ, ಬೆಳೆಯುತ್ತಿರುವ ಬಗೆಯತ್ತ ನೋಡಿದರೆ ಇದು ಅರ್ಥವಾಗುವುದು. ಆಳುವವರ್ಗಗಳು ಅನುಸರಿಸುತ್ತಾ ಬಂದ, ಅನುಸರಿಸುತ್ತಿರುವ ನೀತಿಗಳಿಂದ 'ಉದ್ಭವವಾಗಿರುವ ತೀವ್ರ ಬಿಕ್ಕಟ್ಟಿಗೆ ಒಂದು ಬಲ ಪ್ರತಿಗಾಮಿ ಪ್ರತಿಕ್ರಿಯೆ, ಜನತೆಯ ಶೋಷಣೆ ನಿರಂತರಗೊಳಿಸುವ ಆಳುವವರ್ಗಗಳ ಆಯುಧ' ಎಂಬುದನ್ನು ಗ್ರಹಿಸಿದಾಗ ಕರ್ನಾಟಕ ರಾಜ್ಯವೂ ಇದಕ್ಕೆ ಹೊರತಲ್ಲ. ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳನ್ನು ಜಾರಿಗೊಳಿಸುವ ಭರಾಟೆಯಲ್ಲಿ ಮೊದಲ ಸ್ಥಾನಗಳಿಸಲು ಬಹುತೇಕ ಕರ್ನಾಟಕ ಸರ್ಕಾರಗಳು ನಡೆಸಿರುವ ಸ್ಪರ್ಧೆ ಜಗಜ್ಜಾಹೀರು. ವಿದೇಶಿ ಬಂಡವಾಳ ಹೂಡಿಕೆಗೆ ದುಂಬಾಲು ಬಿದ್ದು, ಅದನ್ನೂ ರಾಜಧಾನಿಯತ್ತ ಹರಿಸಿಕೊಳ್ಳುತ್ತಿರುವಾಗ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಬ್ಯಾಂಕ್‌ಗಳ ಶರತ್ತುಗಳಿಗೆ ಶರಣಾಗಿ, ಅವುಗಳ ಜಾರಿಯಿಂದಾಗುತ್ತಿರುವ ಅನಾಹುತಗಳಿಗೂ ಎಣೆಯಿಲ್ಲ. ಆರ್ಥಿಕ ಪ್ರಗತಿಯ ಬೊಗಳೆಯ ನಾಲಿಗೆ ಚಾಚಿದಷ್ಟು ದುಡಿವ ಜನತೆಯ, ಸಾಮಾನ್ಯರ ಸಾವು-ಸಂಕಟಗಳ ಬೆಳೆಗೆ ತಡೆಯಿಲ್ಲ. ಬಂಡವಾಳಗಾರರ ಸ್ಥಾನ ದೇಶ-ವಿದೇಶಗಳಲ್ಲಿ ಬೆಳೆದಂತೆ, ಕಂಪನಿಗಳ ಶೇರುಗಳು ಮೇಲೇರುತ್ತಿರುವಂತೆ ಜನರ ಬದುಕು ನೆಲ ಕಚ್ಚುತ್ತಿದೆ. ಇದರ ವಿರುದ್ಧ ಪ್ರತಿಭಟಿಸಿ, ಪ್ರತಿರೋಧಗಳು ಬೆಳೆಯುತ್ತಿವೆ. ಅದು ಪ್ರಜಾಸತ್ತಾತ್ಮಕ ಹಾದಿ ಹಿಡಿಯದಂತೆ ಹಾದಿ ತಪ್ಪಿಸುವುದು, ಉಗ್ರವಾಗಿ ದಮನಿಸುವುದು, ಆಳುವವರ ತಂತ್ರ. ಒಂದೆಡೆ ಪ್ರಭುತ್ವದ ದಮನ, ಇನ್ನೊಂದೆಡೆ ಆಂತರಿಕ ಪ್ರತಿಗಾಮಿ ಶಕ್ತಿಗಳ ಆಕ್ರಮಣ. ಶಿವಸೇನೆ ಇಂತಹ ಕೃತ್ಯಕ್ಕೆ ಹೇಳಿ ಮಾಡಿಸಿದ್ದು.

ಕರ್ನಾಟಕದಲ್ಲಿ ಇದಕ್ಕಾಗಿ ಹಲವಾರು ಸಂಘಟನೆ - ಶಕ್ತಿಗಳಿವೆ. ಸಂಘ ಪರಿವಾರದ ಹಲವು ಶಾಖೆಗಳಿವೆ, ಸಂಘಟನೆಗಳಿವೆ. ರಾಜಕೀಯ ಅಂಗವಾಗಿ ಬಿಜೆಪಿ ಇದೆ. ಈ ಪರಿವಾರದಂತೆ ಹಿಂದುತ್ವ ಪ್ರತಿಪಾದಿಸುವ ಕೋಮುವಿಭಜನೆ ಹುನ್ನಾರ ಹಬ್ಬಿಸುವ ಶಿವಸೇನೆಯ ಅಗತ್ಯ ಸಂಘಪರಿವಾರಕ್ಕೆ ಕಂಡಿದೆ. ಯಾಕೆ?

ಸಂಘ ಪರಿವಾರದ ತಂತ್ರಗಳು

ಕರ್ನಾಟಕದಲ್ಲೀಗ ಮೊಟ್ಟಮೊದಲ ಬಾರಿಗೆ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಬಿಜೆಪಿ ಸ್ಥಾನಗಳು ಗಣನೀಯವಾಗಿ ಹೆಚ್ಚಿದ್ದು, ವಿಧಾನಸಭೆಯಲ್ಲಿ 'ಅಧಿಕೃತ' ವಿರೋಧ ಪಕ್ಷವಾಗಿದೆ. ಅಧಿಕಾರಕ್ಕೇರಲು ಹವಣಿಸುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ಹಾಗೂ ಅದಕ್ಕೆ ಪೂರ್ವೋಪಾದಿಯಾಗಿ ಎಸ್.ಎಂ.ಕೃಷ್ಣರ ಕಾಂಗ್ರೆಸ್ ಸರ್ಕಾರದ ವಿರುದ್ಧದ ಅತೃಪ್ತಿ ಲಾಭ ತನಗೆ ಸಿಕ್ಕಬೇಕೆಂದು ಹಲವಾರು ಕಸರತ್ತು ನಡೆಸಿತು. ಕೋಮುಗಲಭೆಗಳನ್ನು ಸೃಷ್ಟಿಸಿತು. ಅಭಿವೃದ್ಧಿಯ ನಾಟಕವಾಡಿತು. ಕಾಂಗ್ರೆಸ್ ವಿರೋಧಿ ಜಾತ್ಯತೀತ ಶಕ್ತಿಗಳ/ ಪಕ್ಷಗಳನ್ನು ಒಡೆಯಲು ತೊಡಗಿತು. ಇದರ ಲಾಭ ಬಿಜೆಪಿಗೆ ಸ್ವಲ್ಪಮಟ್ಟಿಗೆ ಸಿಕ್ಕಿದ್ದು ನಿಜವಾದರೂ ಅಧಿಕಾರ ಹಿಡಿಯುವಲ್ಲಿ ವಿಫಲವಾಯಿತು. ಜನಾದೇಶ ಸೆಕ್ಯುಲರ್ ಶಕ್ತಿಗಳತ್ತಲೇ ಇದೆ.

ಬಿಜೆಪಿ ಕೋಮುವಾದಿ ಅಜೆಂಡಾ, ಆಕ್ರಮಣಕಾರಿಯಾಗಿ ಹಿಡಿದೇ ಅಧಿಕಾರಕ್ಕೇರಬಹುದೇ? ಅದರ ಆಶಯ ಹಾಗಿದ್ದರೂ ಇಂದಿನ ರಾಜ್ಯದ ರಾಜಕೀಯ-ಸಾಮಾಜಿಕ ಸ್ಥಿತಿಗತಿ ಮುಕ್ತ ಹಾದಿಯನ್ನು ಕಲ್ಪಿಸುತ್ತಿಲ್ಲ. ಅದು ಆಗೀಗ ಸೋಗು ಹಾಕುವ ಅನಿವಾರ್ಯತೆಗೆ ಒಳಗಾಗಿ. ಉಗ್ರಕೋಮುವಾದ ಪ್ರತಿಪಾದಿಸುತ್ತಲೇ, ಅಭಿವೃದ್ಧಿ - ಜನರ ಪ್ರಶ್ನೆಗಳಂತಹ ವಿಷಯಗಳನ್ನೆತ್ತಿ ಬೆಳೆಯಲು, ತನ್ನ ಬೆಂಬಲದ (ಕಾಂಗ್ರೆಸ್ ವಿರೋಧಿ) ನೆಲೆಯನ್ನು ಉಳಿಸಿಕೊಳ್ಳಲು ಬಯಸುತ್ತಿದೆ. ಬಿಜೆಪಿ- ಸಂಘ ಪರಿವಾರದ ಸಿದ್ಧಾಂತ ಒಪ್ಪದ ಆದರೆ ರಾಜಕೀಯವಾಗಿ ದಡ ಸೇರುವ, ಬಿಜೆಪಿ ಅಧಿಕಾರಕ್ಕೆ ಬಂದೇ ಬಿಡುತ್ತದೆ ಎಂಬ ಭ್ರಮೆಯಿಂದ ಮಂತ್ರಿಗಳಾಗುವ ಆಶಯವುಳ್ಳ ಕಾಂಗ್ರೆಸ್ ವಿರೋಧಿ ವ್ಯಕ್ತಿ-ಶಕ್ತಿಗಳು ಅದರೊಂದಿಗೆ ಅನಿವಾರ್ಯವಾಗಿ ಇದ್ದಾರೆ. ಭ್ರಮನಿರಸನವಾಗಿರುವುದರಿಂದ ಅದರಿಂದ ಹೊರಬರುವ ಯತ್ನಗಳೂ ನಡೆದಿವೆ. ಈಚೆಗೆ ಜೆಡಿ(ಎಸ್)ನಲ್ಲಿ ಬಿಕ್ಕಟ್ಟು ಉಲ್ಬಣವಾದದ್ದು, ಮೈತ್ರಿಕೂಟದಲ್ಲಿ ಒಡಕು ಸ್ಫೋಟಗೊಂಡ ಸಂದರ್ಭದಲ್ಲಿ ಅಂತಹವರು ಯಡಿಯೂರಪ್ಪನವರ ಜೊತೆ ಹೊರಬರುವ ಯತ್ನಗಳು ಗಮನಾರ್ಹ. ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಹಿಡಿತಕ್ಕೆ ಸಂಬಂಧಿಸಿ ಘರ್ಷಣೆ, ಗುಂಪುಗಾರಿಕೆ ಇವೆ. ಇದರ ನಡುವೆ ರಾಜಿ ನಡೆದಿದೆಯಾದರೂ ಅದು ಸ್ಫೋಟಿಸದೇ ಇರದು.

ರಾಜ್ಯದ ಬಿಜೆಪಿಯೊಳಗೆ ಉಗ್ರ ಹಿಂದುತ್ವವನ್ನು ಜಾರಿಗೊಳಿಸಬೇಕು ಎಂಬುದಕ್ಕೆ ಪರ-ವಿರೋಧಗಳಿವೆ. ಇತರೆ ಸೆಕ್ಯುಲರ್ ಪಕ್ಷಗಳಿಂದ ಸೆಳೆಯಲು ತೊಡಕಾಗುತ್ತದೆ. ಹಾಗೆ ಹೋಗುವುದು ಇಂದಿನ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯ ಎಂದೂ ಸಂಘ ಪರಿವಾರ ಭಾವಿಸಿದೆ. ಆದರೆ ಹಿಂದುತ್ವದ ಗುರಿಯನ್ನು ಕೈಬಿಡುವುದು ಅಸಾಧ್ಯದ ಮಾತೇ ಸರಿ. ಆದ್ದರಿಂದಲೇ ಬಿಜೆಪಿ ಹಾಗೂ ಅದರ ನಾಯಕರಿಗೆ ಆಧುನಿಕ - ಉದಾರವಾದೀ ಮುಖವಾಡ ತೊಡಿಸಲು ಎಲ್ಲಿಲ್ಲದ ಕಸರತ್ತು ನಡೆಸಿದೆ. ಈ ಮುಖದ ಮೂಲಕವಾದರೂ ಇನ್ನೂ ಕೆಲವರನ್ನು ಸೆಳೆದು ಜನರನ್ನು ಮರುಳುಗೊಳಿಸಿ ಅಧಿಕಾರ ಹಿಡಿಯಬೇಕೆಂಬುದು ಅದರ ಯತ್ನ. ಎನ್‌ಡಿಎ ಒಳಗಿನ ಒತ್ತಡಗಳೂ (ಅದರ ಇತರೆ ಭಾಗಿದಾರ ಪಕ್ಷಗಳು - ಅದರ ಬೆಂಬಲಿಗ ಸಮೂಹದ ಜನ ಒತ್ತಡಗಳೂ) ಇವೆ. ಈಗಾಗಲೇ ಜನತಾದಳದ ಒಂದು ಪ್ರಮುಖ ಬಣದ ನೆಲೆಯನ್ನು ಮೈತ್ರಿ ಹೆಸರಿನಲ್ಲಿ ನುಂಗಲಾಗಿದೆ. ಇನ್ನೂ ಹೊಸತು ಪ್ರದೇಶ, ಜನ ಅದಕ್ಕೆ ಬೇಕಿದೆ. ಈ ಸಂದರ್ಭದಲ್ಲಿ ಬಿಜೆಪಿಯ ಉದಾರವಾದೀ ಮುಖ ತೋರುತ್ತಲೇ, ಉಗ್ರ ಹಿಂದುತ್ವದ ಇನ್ನೊಂದು ರಾಜಕೀಯ ನೆಲೆ ಸಂಘ ಪರಿವಾರಕ್ಕೆ ಬೇಕು - ಅದೇ ಶಿವಸೇನೆ. ಮುಂದೆ ಸಂಘ ಪರಿವಾರದ ಲೆಕ್ಕಾಚಾರದಂತೆ ಎಲ್ಲವೂ ನಡೆದರೆ ಶಿವಸೇನೆ-ಬಿಜೆಪಿ ಸೇರಿ ಸರ್ಕಾರ ರಚಿಸಬಹುದು ಎಂಬ ಲೆಕ್ಕಾಚಾರ!

ಬಜರಂಗದಳ, ವಿಶ್ವ ಹಿಂದೂ ಪರಿಷತ್ ಹೆಸರಿನಲ್ಲಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ (ಬಿಜೆಪಿ ಪ್ರಬಲ ಇರುವೆಡೆಗಳಲ್ಲಿ) ಸಾಕಷ್ಟು ದಾಂಧಲೆ ನಡೆಸಿರುವ (ಕ್ರಿಮಿನಲ್‌ಗಳನ್ನು ಸೆಳೆದುಕೊಂಡು) ಮುತಾಲಿಕ ಜಿಲ್ಲೆ ಜಿಲ್ಲೆಗಳಲ್ಲಿ ಆ ಸಂಪರ್ಕಗಳನ್ನು ಬಳಸಿ (ಮುಖ್ಯವಾಗಿ ಆರ್‌ಎಸ್‌ಎಸ್) ಸಮಾವೇಶಗಳನ್ನು ನಡೆಸಿ ಸಂಘಟನಾ ಸ್ವರೂಪ ನೀಡಲು ಓಡಾಡುತ್ತಿದ್ದಾನೆ. ಬಾಳ ಠಾಕ್ರೆಯನ್ನು ಬೆಂಗಳೂರಿಗೆ ಕರೆಸುವ ಕಾರ್ಯಕ್ರಮ ಘೋಷಿಸಿದ್ದಾನೆ. ಬಿಜೆಪಿಯಲ್ಲಿರುವ ಹಲವಾರು ಶಾಸಕರು ತನ್ನಪಕ್ಷಕ್ಕೆ ಬರಲಿದ್ದಾರೆ ಎಂಬ ಸೂಚನೆ ನೀಡಿದ್ದಾನೆ. ಇಂತಹವರು ಸಂಘ ಪರಿವಾರದ ಸಿದ್ಧಾಂತದ ಅತ್ಯಂತ ಸಮರ್ಥಕರು ಇರುತ್ತಾರೆ ಎಂದು ಬೇರೆ ಹೇಳಬೇಕಿಲ್ಲ. ಹೀಗೆ ಕೆಲಸ ಹಂಚಿಕೆಯ ಕಾರ್ಯತಂತ್ರವಿರುವುದು ಸ್ಪಷ್ಟಗೋಚರ.

ಎಚ್ಚರ ಬೇಕಿದೆ

ಶಿವಸೇನೆಗೆ ರಾಜ್ಯದಲ್ಲಿ ಬೆಳೆಯಲು ಅಡೆ-ತಡೆಗಳೂ ಇವೆ. ಅದು ಭಾವಿಸಿದಷ್ಟು ವೇಗವಾಗಿ ಅಧಿಕಾರ ಹಿಡಿಯುವುದು ಸುಲಭವೇನಲ್ಲ. ಆದಾಗ್ಯೂ ಅದು ಪ್ರಜಾಸತ್ತಾತ್ಮಕ, ಜಾತ್ಯತೀತ ಸ್ವರೂಪಕ್ಕೆ, ಮೌಲ್ಯಗಳ ಮೇಲೆ ಸಾಕಷ್ಟು ಹಾನಿ ಮಾಡಬಲ್ಲದು. ಇದನ್ನು ಆರಂಭದಲ್ಲೇ ಎದುರಿಸುವ ಸೈದ್ಧಾಂತಿಕ - ರಾಜಕೀಯ ಸ್ಪಷ್ಟತೆ, ನಿಲುಮೆಯನ್ನು ಇತರೆ ಸೆಕ್ಯುಲರ್ ರಾಜಕೀಯ ಪಕ್ಷಗಳು ತಳೆಯಬಲ್ಲುವೇ? ಅಪಾಯವನ್ನು ಗಂಭೀರವಾಗಿ ಅರಿಯಬೇಕೆಂದು ಒತ್ತಾಯಿಸ ಬೇಕಾಗಿದೆ. ಜಾತಿ ಆಧಾರಿತ ರಾಜಕೀಯ, ಬಿಜೆಪಿಯೇತರ ಕಾಂಗ್ರೆಸ್ ವಿರೋಧಿ ಶಕ್ತಿಗಳಲ್ಲಿ ಒಡಕು, ಕಾರ್ಮಿಕ ವರ್ಗದ ಚಳುವಳಿಗೆ ಇರುವ ರಾಜಕೀಯ ಮಿತಿಗಳು [illegible]ವಸೇನೆ ಬೆಳೆಯಲು ಹದ ನೆಲೆ ಆಗಬಹುದಾದ ಅಪಾಯ ಇದೆ. ಇದರ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷಿತ ಶಕ್ತಿಗಳು ಎದ್ದು ನಿಲ್ಲಬೇಕಿದೆ. ಮುಖ್ಯವಾಗಿ ಕಾರ್ಮಿಕವರ್ಗ ಸರ್ವಸನ್ನದ್ಧಗೊಳ್ಳಬೇಕಿದೆ.

▲

ಗಾಂಧೀ ಜಯಂತಿಯಂದು ಗಾಂಧೀ ಫೋಟೋ ಒಡೆದು ಹಾಕಿದ ದುಷ್ಕರು

ಡಾ|| ಎ.ಎಚ್.ಸಾಳುಂಕೆಯವರು ಮಹಾರಾಷ್ಟ್ರದ ಶ್ರೇಷ್ಠ ವಿಚಾರವಂತರು. ತುಲನಾತ್ಮಕ ದೃಷ್ಟಿಯಿಂದ ಧರ್ಮಶಾಸ್ತ್ರದ ಬಗ್ಗೆ ಅಭ್ಯಸಿಸಿದವರು. ಅವರು ಬರೆದ 'ವಿದ್ರೋಹಿ ತುಕಾರಾಮ' ಕೃತಿ ಮಹಾರಾಷ್ಟ್ರದಲ್ಲಿ ಕೋಲಾಹಲವನ್ನೇ ಎಬ್ಬಿಸಿತು. ಕಟ್ಟರ್ ಹಿಂದುತ್ವವಾದಿಗಳು ಮಹಾ ರಾಷ್ಟ್ರದಲ್ಲಿ ಅವರ ಸಭೆ, ಇತ್ಯಾದಿ ಕಾರ್ಯಕ್ರಮ ನಡೆಯದಂತೆ ಗೊಂದಲ ಮಾಡುತ್ತಲೇ ಇದ್ದಾರೆ.

ಅಕ್ಟೋಬರ್ 2 ರಂದು(ಗಾಂಧಿ ಜಯಂತಿ) ಬೆಳಗಾವಿಯಲ್ಲಿ 'ಬಲಿವಂಶ' ಎಂಬ ಅವರ ಕೃತಿಯ ಕುರಿತು ಗಣಪತಿ ಗಲ್ಲಿಯ ಸಾರ್ವಜನಿಕ ವಾಚನಾಲಯದಲ್ಲಿ ಡಾ|| ಸಾಳುಂಕೆಯವರು ಉಪನ್ಯಾಸ ನೀಡಲು ಆಗಮಿಸಿದ್ದರು.

ಪುರಾಣದಲ್ಲಿ ಬಲಿಚಕ್ರವರ್ತಿಯನ್ನು ಪದಚ್ಯುತಿಗೊಳಿಸಿದ ಕುತಂತ್ರವನ್ನು ಬೆತ್ತಲೆಗೊಳಿಸಿ ರೈತಾಪಿ ಇತ್ಯಾದಿ ಶೋಷಿತ ಜನರನ್ನು, ಬಲಿ ಚಕ್ರವರ್ತಿಯನ್ನು ಹತ್ತಿಕ್ಕಿದ ದುರಾತ್ಮರ ಪೀಳಿಗೆಯವರೇ ತುಳಿಯುತ್ತಿದ್ದಾರೆ ಎಂಬುದು ಡಾ. ಸಾಳುಂಕೆಯವರ ಉಪನ್ಯಾಸದ ಸಾರಾಂಶ.

ಬೆಳಗಾವಿಯ ಎಲ್ಲಾ ಪುರೋಗಾಮಿ ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಹತ್ತಾರು ಶಿವಸೇನೆ ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಪ್ರವೇಶಿಸಿ ಪಾಲ್ಗೊಂಡವರ ಮೇಲೆ ಹಲ್ಲೆ ನಡೆಸಿದ್ದಾರೆ. ಡಾ|| ಸಾಳುಂಕೆಯವರನ್ನೇ ಗುರಿಯಾಗಿಟ್ಟು ಈ ಹಲ್ಲೆ ನಡೆದಿದೆ. ಬೆಳಗಾವಿಯ ಖ್ಯಾತ ವಕೀಲರು, ಸಮಾಜವಾದಿ ಚಿಂತಕ ಹಾಗೂ ಕಾರ್ಮಿಕ ಮುಖಂಡ ಶ್ರೀರಾಮ್ ಅಷ್ಟೆ ಗಾಯಗೊಂಡಿದ್ದಾರೆ. ತೀವ್ರ ಗಾಯಗೊಂಡವನನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಗಾಯಗೊಂಡವರಲ್ಲಿ ಸ್ಥಳೀಯ ಟಿ.ವಿ. ವರದಿಗಾರರೂ ಸೇರಿದ್ದಾರೆ.

ಈ ಸಲದ ಗಣೇಶ ಉತ್ಸವ ಯಾವುದೇ ಗಲಾಟೆ ಗಲಭೆಯಿಲ್ಲದೇ ಶಾಂತ ರೀತಿಯಿಂದ ನಡೆದದ್ದರಿಂದ ಅವಕಾಶ ಸಿಗದ ದುಷ್ಕರು ಈ ಹೀನ ಕೃತ್ಯ ನಡೆಸಿದ್ದಾರೆ. ಕೈಗೆ ಸಿಕ್ಕವರನ್ನು ಬಡಿದು ವಾಚನಾಲಯದಲ್ಲಿದ್ದ ಗಾಂಧೀಜಿಯ ಫೋಟೋ ತುಳಿದು ಹಾಕಿದ್ದಾರೆ. ವಿಶೇಷವೆಂದರೆ ಇಷ್ಟೆಲ್ಲಾ ಅಡಚಣೆ ಆದರೂ ಕಾರ್ಯಕ್ರಮ ಮುಂದುವರಿದಿದೆ. ಈ ಹೀನ ಘಟನೆಗೆ ಕಾರಣವಾದ ಎಲ್ಲಾ ದುಷ್ಕರನ್ನು ಕೂಡಲೇ ಬಂಧಿಸಿ ಅಭಿಪ್ರಾಯ ಸ್ವಾತಂತ್ರ್ಯ ರಕ್ಷಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಮದುರ್ಗ ಪ್ರದೇಶ ಸಮಿತಿ ಒತ್ತಾಯಿಸಿದೆ.

ಮುಂದಿನ ದಿನಗಳಲ್ಲಿ ಪ್ರತಿಗಾಮಿಗಳ ಆಟಾಟೋಪ ತಡೆಯಲು ಮುಂದಾಗಬೇಕೆಂದು ವಿಚಾರವಂತರಿಗೆ ಮನವಿ ಮಾಡಿದೆ.

→

ಮಾಡಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಮತ್ತು ಮನೆಯ ಮಾಡಿನ ಮೇಲೆ ಜನಸಮೂಹ ನಿಂತು ನೋಡಿದ್ದು ವಿಶೇಷವಾಗಿತ್ತು. ಕಾರ್ಮಿಕರು ಈಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಸಾಗುವ ಸಂದರ್ಭದಲ್ಲಿ ಕಾರ್ಮಿಕ ಘೋಷಣೆ ಮುಗಿಲು ಮುಟ್ಟುವಂತೆ ಕಾಣುತ್ತಿತ್ತು. ಈ ರ್‍ಯಾಲಿ ತಾಲೂಕು ಕಛೇರಿ ಮುಂದೆ ಸೇರಿ ಬೃಹತ್ ಬಹಿರಂಗ ಸಭೆ ಮಾಡಲಾಯಿತು. ಈ ಬಹಿರಂಗ ಸಭೆಯಲ್ಲಿ ವಿವಿಧ ವಿಭಾಗದ ಯುವಜನರ ಪರವಾಗಿ ಮುಖಂಡರು ಮಾತನಾಡಿದರು. ಈ ರ್‍ಯಾಲಿಯಲ್ಲಿ ಸಿಐಟಿಯು, ಸರ್ಕಾರಿ ನೌಕರರ ಒಕ್ಕೂಟ, ಬಿಸಿಯೂಟ ಕಾರ್ಮಿಕರು, ಅಂಗನವಾಡಿ ನೌಕರರು ತುಂಗಭದ್ರಾ ಗ್ರಾಮೀಣ ಬ್ಯಾಂಕ್ ನೌಕರರು ಎಸ್.ಬಿ.ಎಸ್.ಒ, ಎನ್.ಸಿ.ಬಿ.ಸಿ, ಬ್ಯಾಂಕ್ ನೌಕರರು, ಎಐಬಿಇಎ ಬ್ಯಾಂಕ್ ನೌಕರರು, ಗ್ರಾಮ ಪಂಚಾಯ್ತಿ, ಪಂಚಾಯತ್‌ರಾಜ್ ಇಲಾಖೆ ನೌಕರರು ಸರ್ವಶಿಕ್ಷಣ ಅಭಿಯಾನ ಬೋಧಕರು, ಬೀಡಿ ಕಾರ್ಮಿಕರು, ಎಸ್‌ಎಫ್‌ಐ, ಡಿವೈಎಫ್‌ಐ, ಕೆಪಿಆರ್‌ಎಸ್, ಜೆ.ಎಂ.ಎಸ್, ಅಂಗಡಿ ಗುಮಾಸ್ತ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಆಟೋ ಚಾಲಕರ ಸಂಘ, ಮ್ಯಾಕ್ಸಿಕ್ಯಾಬ್ ಡ್ರೈವರ್ ಸಂಘ, ಗೂಡ್ಸ್ ಆಟೋ ಡ್ರೈವರ್ ಯೂನಿಯನ್, ತಟ್ಟೆ ವ್ಯಾಪಾರಿಗಳ ಸಂಘ, ಬೈಲ್ ಪತ್ತಾರ್ ಕಾರ್ಮಿಕರ ಸಂಘ ಹಮಾಲರ ಸಂಘ, ಬಂಡಿ ಹಮಾಲರ ಸಂಘ, ಪಿಂಚಣಿದಾರರ ಸಂಘ, ಗ್ರಾಮ ಪಂಚಾಯ್ತಿ ನೌಕರರ ಸಂಘ, ಕಾರ್‌ಡ್ರೈವರ್ ಸಂಘ, ಟೈರ್‌ಮ್ಯಾನ್, ಇನ್ನು ಹಲವಾರು ಸಂಘಟನೆಯ ಮುಖಂಡರುಗಳು ಭಾಗವಹಿಸಿದ್ದರು. ಒಟ್ಟಾರೆ ಈ ತಾಲೂಕಿನ ಸಾರ್ವತ್ರಿಕ ಮುಷ್ಕರ ತಾಲೂಕಿನ ಜನತೆ ಚರ್ಚೆಯಲ್ಲಿ ತೊಡಗುವಂತಾಗಿದೆ.

ಈ ಒಂದು ಕಾರ್ಮಿಕರ ಬೃಹತ್ ಪ್ರತಿಭಟನಾ ರ್‍ಯಾಲಿ ನೇತೃತ್ವವನ್ನು ಅಖಿಲ ಭಾರತ ಮುಷ್ಕರಕ್ಕಾಗಿನ ಹಗರಿಬೊಮ್ಮನಹಳ್ಳಿ ತಾಲೂಕು ಸಂಚಾಲನ ಸಮಿತಿ ಸಂಚಾಲಕರಾದ ರಂಗನಾಥ ಹವಾಲ್ದಾರ್, ಅಖಿಲ ಕರ್ನಾಟಕ ಸರ್ಕಾರಿ ನೌಕರ ಒಕ್ಕೂಟ, ಸಿಐಟಿಯು, ಜಿಲ್ಲಾಧ್ಯಕ್ಷರಾದ ಕೆ.ಎಸ್.ಬಸವರಾಜ್, ಸರ್ಕಾರಿ ನೌಕರರ ಒಕ್ಕೂಟದ ತಾಲೂಕು ಅಧ್ಯಕ್ಷರಾದ ಇ.ಕೃಷ್ಣಮೂರ್ತಿ ಸಿಐಟಿಯು ತಾಲೂಕು ಪ್ರಧಾನ ಕಾರ್ಯದರ್ಶಿಗಳಾದ ಎನ್.ಟಿ.ಲಲಿತ ಹಾಗೂ ಅನ್ವರ್ ಬಾಷ ನೇತೃತ್ವವನ್ನು ವಹಿಸಿದ್ದರು.

ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಮೆರವಣಿಗೆ ಹಾಗೂ ನಗರದ ಸರ್ಕಾರಿ ಆಸ್ಪತ್ರೆ ಬಳಿ ರಸ್ತೆ ತಡೆ ನಡೆಸಲಾಯಿತು. ರಸ್ತೆ ತಡೆಯಲ್ಲಿ ಸುಮಾರು 350 ಜನ ರೈತರು, ಕೂಲಿಕಾರರು ಪಾಲ್ಗೊಂಡಿದ್ದರು. ಅಡಿವೆಪ್ಪ, ಬಿ.ಗಣೇಶ, ಜಗನ್ನಾಥ್, ಗಾಳೆಪ್ಪ, ಮೌಲಾಸಾಬ್ ಮುಂತಾದವರು ನೇತೃತ್ವ ವಹಿಸಿದ್ದರು. ಸಾಹಿತಿಗಳೂ ರಾಜ್ಯ ರೈತಸಂಘದ ಮುಖಂಡರೂ ಆದ ಕುರಿಕಡ್ಡಿ ಶಿವಕುಮಾರ್ ದಿ.ಗೋಣಿಬಸಪ್ಪ ಇತರರು ಈ ಸಂದರ್ಭದಲ್ಲಿ ಮಾತನಾಡಿದರು.

ಮುಷ್ಕರಕ್ಕೆ ಪೂರ್ವಭಾವಿಯಾಗಿ ಎಸ್‌ಎಫ್‌ಐ-ಡಿವೈಎಫ್‌ಐಗಳಿಂದ 28ರಂದು ರಾತ್ರಿ ಪಂಜಿನ ಮೆರವಣಿಗೆ ನಡೆದಿತ್ತು. 27ರಂದು ನೌಕರರ-ಕಾರ್ಮಿಕರ ಕುಟುಂಬಗಳ ಸಭೆ ನಡೆಸಲಾಗಿತ್ತು.

ಮಹಿಳೆಯ ಅಮಾನುಷ ಕೊಲೆ - ಮುಚ್ಚಿಹಾಕಲು ಸಂಚು

ನ್ಯಾಯಕ್ಕಾಗಿ ಪೊರಕೆ ಹಿಡಿದು ಬೀದಿಗಿಳಿದ ಮಹಿಳೆಯರು

ಮಹಿಳೆಯ ಅಮಾನುಷ ಕೊಲೆ... ಮುಚ್ಚಿ ಹಾಕುವ ಯತ್ನ.... ಮಹಿಳೆಯ ಆಸ್ತಿ ಲಪಟಾಯಿಸಲು ಬಲಾತ್ಕಾರದಿಂದ ಸಹಿ..... ಇಂತಹ ದೌರ್ಜನ್ಯಗಳು ಅವ್ಯಾಹತವಾಗಿ ನಡೆದಿವೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಇಂತಹ ಪ್ರಕರಣಗಳಲ್ಲಿ ನೊಂದ ಮಹಿಳೆಯರ ಪರವಾಗಿ ಮಧ್ಯಪ್ರವೇಶಿಸಿ ದಿಟ್ಟ ಚಳುವಳಿ ನಡೆಸಿದೆ. ಈ ಪ್ರಕರಣಗಳಲ್ಲಿ ಪೊಲೀಸರೂ ಅಪರಾಧಿಗಳೊಂದಿಗೆ ಶಾಮೀಲಾಗಿ ನ್ಯಾಯ ಪಡೆದುಕೊಳ್ಳುವ ದಾರಿಯಲ್ಲಿ ತಡೆಗೋಡೆಯಾಗಿರುವುದು ಅಘಾತಕಾರಿ ವಿಚಾರ. ಚಳುವಳಿಯ ವರದಿ ಇಲ್ಲಿದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಮಾನಭಂಗ, ಕೊಲೆ ಪ್ರಕರಣಗಳು ಹೆಚ್ಚುತ್ತಿದ್ದರೂ ತಡೆಗಟ್ಟುವ ಪರಿಣಾಮಕಾರಿ ಕ್ರಮಗಳು ಸರ್ಕಾರದ ವತಿಯಿಂದಾಗಲಿ ಪೋಲೀಸ್ ಇಲಾಖೆಯಾಗಲೀ ಕೈಗೊಳ್ಳಲಾಗುತ್ತಿಲ್ಲ, ಬದಲಿಗೆ ಆರೋಪಿಗಳು ಬಚಾವ್ ಆಗುವ ರೀತಿಯಲ್ಲಿ ತಂತ್ರಗಳನ್ನು ತಾವೇ ತೋರಿಸಿಕೊಡುವ ಮೂಲಕ ಅಪರಾಧಿಗಳ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ಖಂಡಿಸಿ ಪ್ರತಿದಿನ ಪ್ರತಿ ಪೋಲಿಸ್ ಠಾಣೆಗಳ ಮುಂದೆ ಪ್ರತಿಭಟನೆಗಳು ನಡೆಸಬೇಕಾದ ಅನಿವಾರ್ಯತೆ ಬಂದಿದೆ.

ದಿನಾಂಕ 2.8.05ರಂದು ಹೊಸಕೋಟೆ ತಾಲ್ಲೂಕು ಮಾಕನಹಳ್ಳಿ ಗ್ರಾಮದ ನಿವಾಸಿಯಾದ 45 ವರ್ಷದ ಮುನಿಯಮ್ಮ ಎಂಬುವವರನ್ನು ರಾಜಪ್ಪ ಎಂಬುವವರು ಭೀಕರವಾಗಿ ಮಹಿಳೆಯರು ತಲೆ ತಗ್ಗಿಸುವಂತಹ ರೀತಿಯಲ್ಲಿ ಅಮಾನವೀಯವಾಗಿ ಕೊಲೆ ಮಾಡಿರುತ್ತಾರೆ.


ಮುನಿಯಮ್ಮನಿಗೆ 25 ವರ್ಷಗಳ ಹಿಂದೆ ತಮಿಳು ನಾಡಿನ ಡೆಕ್ಕಣಿಕೋಟೆಯ ರಾಜಪ್ಪ ಎಂಬುವವರ ಜೊತೆ ವಿವಾಹವಾಯಿತು. ಮುನಿಯಮ್ಮನಿಗೆ ವಿವಾಹಕ್ಕೆ ಮುಂಚೆ ಅದೇ ಗ್ರಾಮದ ನಿವಾಸಿಯಾದ ಚಿಕ್ಕ ಮುನಿಯಪ್ಪನ ಜೊತೆ ಅಕ್ರಮ ಸಂಬಂಧವಿತ್ತು. ಮದುವೆಯಾದ ನಂತರ 1 ವರ್ಷದ ಕಾಲ ಮುನಿಯಮ್ಮ ಗಂಡನ ಜೊತೆ ಡೆಕ್ಕಣಿಕೋಟೆಯಲ್ಲಿ ಸಂಸಾರ ನಡೆಸಿಕೊಂಡಿದ್ದಳು. ನಂತರ 9 ತಿಂಗಳ ಗರ್ಭಿಣಿ ಬಾಣಂತನಕ್ಕೆಂದು ತನ್ನ ತವರಿಗೆ ಬಂದವಳು ಹೆರಿಗೆಯಾದ ನಂತರ ಮತ್ತೆ ಗಂಡನ ಮನೆಗೆ ಹೋಗಲಿಲ್ಲ. ಈಕೆಗೆ ಮಂಜುಳ ಎಂಬ ಹೆಣ್ಣು ಮಗಳಿದ್ದಾಳೆ. ನಂತರ ಮುನಿಯಮ್ಮ ಮತ್ತು ಚಿಕ್ಕ ಮುನಿಯಪ್ಪನವರ ಸಂಬಂಧ ಮುಂದುವರಿದಿದೆ. ನಂತರ ಕೆಲವಾರು ವರ್ಷಗಳಿಂದ ಇಬ್ಬರ ಮಧ್ಯೆ ಸಂಬಂಧ ಕಡಿದುಹೋಗಿ ಮುನಿಯಮ್ಮ ಕೂಲಿ ಮಾಡಿ ತನ್ನ ಮಗಳಾದ ಮಂಜುಳ ಜೊತೆ ಜೀವನವನ್ನು ಸಾಗಿಸುತ್ತಿದ್ದಳು. ಮನೆಯ ಪಕ್ಕದಲ್ಲಿದ್ದ 5 ಅಡಿ ಜಾಗಕ್ಕೆ ವಿನಾಕಾರಣ ಜಗಳ ತೆಗೆದು ಚಿಕ್ಕಮುನಿಯಪ್ಪನ ಮನೆಯವರು ಮುನಿಯಮ್ಮನಿಗೆ 2-3 ಬಾರಿ ಹೊಡೆದರು. ಹಲವು ಊರಿನ ಮುಖಂಡರು ನ್ಯಾಯ ಮಾಡಿ ಸುಮ್ಮನಿರಿಸಿರುತ್ತಾರೆ. ಇದೇ ಊರಿನಲ್ಲಿ ಮಗಳಾದ ಮಂಜುಳಳಿಗೆ ಮದುವೆಯಾಗಿ 2 ಮಕ್ಕಳಿದ್ದು ತಾಯಿಯ ಜೊತೆ ಕಷ್ಟ-ಸುಖದಲ್ಲಿ ಭಾಗಿಯಾಗುತ್ತಿದ್ದಳು. ಮಂಜುಳ ಗಂಡ ಸ್ವಲ್ಪ ಕುಡುಕ. ಮುನಿಯಮ್ಮ ಮಗಳಿಗೆ ತನಗೆ ತಿಳಿದಂತೆ ಬುದ್ಧಿ ಹೇಳುತ್ತಿದ್ದಳು. 'ಗಂಡ ಕುಡುಕನಾದರೂ ಪರವಾಗಿಲ್ಲ ನೀನು ಅವನ ಹತ್ತಿರ ಸಂಸಾರ ಮಾಡು ನಾನು ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಪ್ರಾಣ ಕಳೆದುಕೊಳ್ಳಬಾರದು' ಎಂದು.

ದಿನಾಂಕ 2.8.05ರಂದು ಸಂಜೆ 5-6 ಗಂಟೆ ಹೊತ್ತಿಗೆ ಚಿಕ್ಕಮುನಿಯಪ್ಪ ಮತ್ತು ಆತನ ಹೆಂಡತಿ, ಚಿಕ್ಕಮುನಿಯಪ್ಪನ ಅಣ್ಣ, ಅತ್ತಿಗೆ ಮತ್ತು ಮಕ್ಕಳು ಮುನಿಯಮ್ಮನ ಮೇಲೆ ವಿನಾಕಾರಣ ಜಗಳ ತೆಗೆದು ನಡುರಸ್ತೆಯಲ್ಲಿಯೇ ಆಕೆಗೆ ಚೆನ್ನಾಗಿ ಹೊಡೆದು ಆಕೆಯ ಮೈಮೇಲೆ ಸೀಮೆ ಎಣ್ಣೆ ಸುರಿದು ಸಾಯಿಸುವ ಪ್ರಯತ್ನ ನಡೆಸಿದರು. ಇದನ್ನು ಗಮನಿಸಿದ ಊರಿನ ವ್ಯಕ್ತಿಗಳು ಜಗಳ ಬಿಡಿಸಿ ಬುದ್ಧಿ ಹೇಳಿ ಮನೆಗೆ ಕಳಿಸಿದರು. ಆ ಸಂದರ್ಭದಲ್ಲಿ ತಾಯಿಯ ಜೊತೆ ಇರಲು ಮಂಜುಳ ಮನೆಗೆ ಹೋದಾಗ ಮುನಿಯಮ್ಮ ನನಗೆ ಏನು ಆಗುವುದಿಲ್ಲ, ನಿನ್ನ ಗಂಡ ಕುಡುಕ ಗಲಾಟೆ ಮಾಡುತ್ತಾನೆ, ನಿನ್ನ ಮನೆಗೆ ಹೋಗು ಎಂದು ಹೇಳಿ ಮಗಳನ್ನು ಅವರ ಮನೆಗೆ ಕಳಿಸಿದರು.

ಮಾರನೇ ದಿನ ಬೆಳಿಗ್ಗೆ 6 ಗಂಟೆಗೆ ತನ್ನ ತಾಯಿಯನ್ನು ನೋಡಲು ಮಂಜುಳ ಮನೆಗೆ ಬಂದಾಗ ಮನೆಯ ಬಾಗಿಲ ಚಿಲಕ ಹಾಕಿರಲಿಲ್ಲ, ಎಲ್ಲಿಯೋ ಹೊರಗೆ ಹೋಗಿರಬಹುದೆಂದು ಬಾಗಿಲು ತಳ್ಳಿ ಒಳಗೆ ಹೋದರೆ ಮುನಿಯಮ್ಮ ರಾತ್ರಿ ಮಲಗಿದಂತೆ ಕಾಣಲಿಲ್ಲ. ಕಾರಣ ಚಾಪೆ ಹಾಕಿದ ಸೂಚನೆ ಕಾಣಿಸಿಲ್ಲ. ಅಡುಗೆ ಕೋಣೆ ಇಣುಕಿದಾಗ ಒಲೆಯ ಗೂಡಿನಲ್ಲಿತ್ತು ಮುನಿಯಮ್ಮನ ಶವ. ತಕ್ಷಣ ಹೆದರಿದ ಮಂಜುಳ ಕಿರುಚಿಕೊಂಡು ಹೊರಗೆ ಓಡಿ ಬಂದು ಊರಿನವರಿಗೆ ತಿಳಿಸಿದಾಗ ಪೋಲೀಸ್ ಠಾಣೆಗೆ ದೂರು ನೀಡಲು ತಿಳಿಸಿದರು. ಮಂಜುಳ ಕಾಡುಗೋಡಿ ಪೋಲೀಸ್ ಠಾಣೆಗೆ ದೂರು ಕೊಟ್ಟರು. ಅವರು ದೂರು ಸ್ವೀಕರಿಸಿ ಬರುತ್ತೇವೆಂದು ಹೇಳಿ ಹೊರಟವರು ನಂತರ ಯಾವುದೋ ಗಣ್ಯ ವ್ಯಕ್ತಿಗಳ ವತಿಯಿಂದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ದೂರವಾಣಿ ಕರೆ ಬಂದು, ನಂತರ ಬರುವುದಾಗಿ ಹೇಳಿ ಮಂಜುಳಳನ್ನು ಊರಿಗೆ ವಾಪಸ್ ಕಳಿಸಿದರು. ಮುನಿಯಮ್ಮನ ಶವವನ್ನು

ಗೌರಮ್ಮ

ಹೊರಗೆ ತೆಗೆದರೆ ಭೀಕರವಾಗಿ ಕೊಲೆಯಾಗಿದ್ದಳು. ಆಕೆ ಆತ್ಮಹತ್ಯೆಮಾಡಿಕೊಂಡ ರೀತಿಯಲ್ಲಿ ಕೇಸನ್ನು ಮುಚ್ಚಿಹಾಕಲು ಸೀಮೆಎಣ್ಣೆ ಹಾಕಿ ಸುಟ್ಟು ಒಲೆಗೂಡಿನ ಒಳಗೆ ತುರುಕಿರುತ್ತಾರೆ. ಮುನಿಯಮ್ಮನ ಶವ ಹೊರಗೆ ತೆಗೆದ ಸಂದರ್ಭದಲ್ಲಿ ಇವೆಲ್ಲವನ್ನೂ ನೇರವಾಗಿ ಕಂಡ ಪ್ರತ್ಯಕ್ಷದರ್ಶಿಗಳಿದ್ದಾರೆ. ಇವೆಲ್ಲ ಸಾಕ್ಷಿಗಳು ಇದ್ದರೂ ಸಹ ಕಾಡುಗೋಡಿ ಪೊಲೀಸ್ ಇನ್ಸ್‌ಪೆಕ್ಟರ್ ನಾಗರಾಜ್ ತರಾತುರಿಯಲ್ಲಿ ಹೆಣವನ್ನು ವೈದೇಹಿ ಆಸ್ಪತ್ರೆಯ ವೈದ್ಯರ ಮೂಲಕ ಪರೀಕ್ಷೆಗೆ ಒಳಪಡಿಸಿ ಇದು ಕೊಲೆಯಲ್ಲ, ಆತ್ಮಹತ್ಯೆ. ಆಕೆ ಹೊಟ್ಟೆಯಲ್ಲಿ ಕ್ಯಾನ್ಸರ್‌ನ 3 ಕೆ.ಜಿ. ಗಡ್ಡೆಯಿತ್ತು. ಅದರ ನೋವು ತಾಳಲಾರದೆ ಸೀಮೆ ಎಣ್ಣೆ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ವೈದ್ಯಕೀಯ ವರದಿಯನ್ನು ನೀಡಿದ್ದಾರೆ. ಮುನಿಯಮ್ಮನ ಮಗಳಿಗೆ ಆರೋಪಿಗಳ ಪರವಾದ ಕೆಲವು ವ್ಯಕ್ತಿಗಳು ಒಂದು ಕಾಲು ಲಕ್ಷ ಹಣ ನೀಡುತ್ತೇವೆ ಕೇಸು ಬೇಡ ಎಂದು ನ್ಯಾಯ ಪಂಚಾಯಿತಿ ಮಾಡಿದರು. ಮುನಿಯಮ್ಮನ ಮಗಳು ಮಂಜುಳ ಕೂಲಿ ಮಾಡಿಯಾದರೂ ಬದುಕುತ್ತೇನೆ ನನಗೆ ಯಾವ ಹಣವೂ ಬೇಡ. ನನ್ನ ತಾಯಿಯನ್ನು ಕೊಲೆ ಮಾಡಿದವರಿಗೆ ಶಿಕ್ಷೆಯಾಗಬೇಕೆಂದು ಎಷ್ಟು ವಿಧವಾಗಿ ಪೊಲೀಸ್‌ನವರಿಗೆ ಹೇಳಿದರೂ ಗಣನೆಗೆ ತೆಗೆದುಕೊಳ್ಳದೆ ಆರೋಪಿ ಪರ ವಕಾಲತ್ತು ವಹಿಸಿರುತ್ತಾರೆ. ಮುನಿಯಮ್ಮನಿಗೆ ಆದ ಅನ್ಯಾಯ ಬೇರೆ ಮಹಿಳೆಯರಿಗೆ ಆಗಬಾರದೆಂದು ಅಂಗನವಾಡಿ ಶಿಕ್ಷಕಿಯಾದ ರಾಜಮ್ಮನವರ ನೇತೃತ್ವದಲ್ಲಿ ಸ್ತ್ರೀಶಕ್ತಿ ಮಹಿಳೆಯರು ಸಹ ಇದು ಆತ್ಮಹತ್ಯೆಯಲ್ಲಾ ಕೊಲೆ, ಆರೋಪಿಗಳನ್ನು ಬಂಧಿಸಿ ಎಂದು ದೂರು ನೀಡಿದ್ದರೆ ಕಾಡುಗೋಡಿ ಪೊಲೀಸ್‌ನವರು ಅವರನ್ನು ಬಾಯಿಗೆ ಬಂದಂತೆ ಬೈಯ್ದು ಓಡಿಸಿದ್ದಾರೆ. 15 ದಿನಗಳ ನಂತರ ಸಾಕಷ್ಟು ಹೋರಾಟ ನಡೆಸಿ ನ್ಯಾಯ ಸಿಗದಿದ್ದಾಗ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಹತ್ತಿರ ಬಂದಾಗ ತಕ್ಷಣ ಜಿಲ್ಲಾ ಕಾರ್ಯದರ್ಶಿ ಗೌರಮ್ಮನವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿ, ಮರುಶವಪರೀಕ್ಷೆ ಆಗಬೇಕು, ಆರೋಪಿಗಳಿಗೆ ಶಿಕ್ಷೆ ಆಗಬೇಕೆಂದು ಒತ್ತಾಯಿಸಲಾಯಿತು. 1 ವಾರವಾದರೂ ಉತ್ತರ ಸಿಗದಿದ್ದಾಗ ದಿನಾಂಕ 20.08.05ರಂದು ಸುಮಾರು 150 ಜನರು ಜನವಾದಿ



ಸಂಘಟನೆ ನೇತೃತ್ವದಲ್ಲಿ ಕಾಡುಗೋಡಿ ಪೊಲೀಸ್ ಠಾಣೆ ಎದುರು ಧರಣಿ ನಡೆಸಿದಾಗ 4 ಜನ ಆರೋಪಿಗಳನ್ನು ನಮ್ಮ ಮುಂದೆ ಅರೆಸ್ಟ್ ಮಾಡಿ ತಂದರು. ನಂತರ 2 ದಿನದಲ್ಲಿ ಎಲ್ಲರನ್ನು ಬಂಧಿಸುವುದಾಗಿ ಭರವಸೆಯನ್ನು ನೀಡಿದ ನಂತರ ಧರಣಿಯನ್ನು ಮುಕ್ತಾಯ ಮಾಡಲಾಯಿತು.

ಆದರೆ ನಮ್ಮ ಮುಂದೆ ಅರೆಸ್ಟ್ ಮಾಡಿದವರನ್ನು ಸಂಜೆ ಹೊತ್ತಿಗೆ ಬಿಟ್ಟು ಕಳಿಸಿದ್ದಾರೆ. ನಂತರ ನಮ್ಮ ಸಂಘಟನೆ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಸಿ ದಿನಾಂಕ 30.08.05ರಂದು ಮರುಶವಪರೀಕ್ಷೆ ಹಾಗೂ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಓ ಫಾರ್ಮ್‌ನಿಂದ ಸುಮಾರು 150 ಮಹಿಳೆಯರು ಪೊರಕೆಗಳನ್ನು ಹಿಡಿದು ಕಾಡುಗೋಡಿ ಪೋಲೀಸ್ ಠಾಣೆವರೆಗೆ 'ಪೊಲೀಸ್‌ನವರಿಗೆ ಧಿಕ್ಕಾರ', 'ಮುನಿಯಮ್ಮನನ್ನು ಕೊಂದ ಆರೋಪಿಗಳನ್ನು ಬಂಧಿಸಿ' ಎಂಬ ಘೋಷಣೆಯನ್ನು ಕೂಗುತ್ತಾ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ರ‍್ಯಾಲಿಯನ್ನು ಮಾಡಿ 3 ಗಂಟೆಗಳ ಕಾಲ ರಸ್ತೆ ತಡೆ ನಡೆಸಲಾಯಿತು. ಕಾಡುಗೋಡಿ ಪೊಲೀಸ್‌ನವರ ಬಗ್ಗೆ ಇದ್ದ ಆಕ್ರೋಶನ್ನು ವ್ಯಕ್ತ ಪಡಿಸುತ್ತಾ ಸಾರ್ವಜನಿಕರು ಸುಮಾರು 300-400 ಜನರು ನಮ್ಮ ಹೋರಾಟಕ್ಕೆ ಬೆಂಬಲವನ್ನುಸೂಚಿಸಿದರು. ನಂತರ 3 ಗಂಟೆ ರಸ್ತೆ ತಡೆ ನಡೆಸಲಾಯಿತು. ಪೊಲೀಸ್‌ನವರು ಮಧ್ಯ ಪ್ರವೇಶಿಸಿದರೆ ಮಹಿಳೆಯರು ಆಕ್ರೋಶದಲ್ಲಿ ಪೊರಕೆಯಲ್ಲಿಯೇ ನಮಗೆ ಬಡಿಯುತ್ತಾರೆಂದು ಹೆದರಿ ಹತ್ತಿರ ಸುಳಿಯಲಿಲ್ಲ. ನಂತರ ಮಹಿಳಾ ಪೊಲೀಸ್‌ನವರನ್ನು ಕಳಿಸಿ ಮರು ಶವಪರೀಕ್ಷೆಗೆ ನಾವು ಡಿ.ಸಿ.ಗೆ ಪತ್ರ ಬರೆಯುತ್ತೇವೆ. ನಮ್ಮನ್ನು ಸಾಕಷ್ಟು ಬೈದು ಮಾನಮರ್ಯಾದೆ ಕಳೆದಿರುತ್ತೀರಿ. ದಯವಿಟ್ಟು ಧರಣಿಯನ್ನು ವಾಪಸ್ ತೆಗೆದುಕೊಳ್ಳಿ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ನಾಗರಾಜ್ ಬೇಡಿಕೊಂಡಾಗ ಧರಣಿಯನ್ನು ಮುಗಿಸಲಾಯಿತು. ಮುನಿಯಮ್ಮನ ಶವ ಹೂತಿರುವುದನ್ನು ಆರೋಪಿಗಳು ಬೇರೆ ಕಡೆ ಸ್ಥಳಾಂತರಿಸುತ್ತಾರೆಂದು ನಮಗೆ ಅನುಮಾನ ಎಂದು ಮಹಿಳೆಯರು ತಿಳಿಸಿದಾಗ ಇಬ್ಬರು ಪೋಲೀಸ್‌ನವರನ್ನು ಕಾವಲು ಕಾಯಲು ಹಾಕಿರುತ್ತಾರೆ. 5 ಗಂಟೆಗೆ ಗ್ರಾಮಾಂತರ ಡಿ.ಸಿ.ಯವರನ್ನೇ ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಮರುಶವ ಪರೀಕ್ಷೆಗೆ ಆದೇಶ ಮಾಡಿರುತ್ತಾರೆ. ಶವಪರೀಕ್ಷೆ ನಡೆಯುವವರೆಗೆ ಊರಿನ ಕೆಲವು ಪುರುಷರು ಮಹಿಳೆಯರು ಸುಮಾರು 15 ದಿನ ಹೆಣವನ್ನು ಕಾವಲು ಕಾಯುವ ಮೂಲಕ ಚರಿತ್ರೆ ನಿರ್ಮಿಸಿರುತ್ತಾರೆ. ಮಾಕನಹಳ್ಳಿಯ ಸುತ್ತ ಮುತ್ತಲಿನ ಗ್ರಾಮದ ದಾಸರಹಳ್ಳಿ ವಾಗಟ, ಮೇಡಹಳ್ಳಿ, ಕನ್ನಮಂಗಲ, ವಿಜನಾಪುರದ ಮಹಿಳೆಯರು ನಡೆಸಿದ ಹೋರಾಟ ಮತ್ತೆ ಪೊರಕೆ ಪ್ರದರ್ಶನಕ್ಕೆ ಹೆದರಿದ ಅಧಿಕಾರಿಗಳು, ಸುಮ್ಮನಿದ್ದರೆ - ನಮ್ಮನ್ನು ಸುಮ್ಮನೇ ಬಿಡುವುದಿಲ್ಲವೆಂದು ಅರಿತು, 2 ತಿಂಗಳ ನಂತರ ಹೆಣವನ್ನು ಹೊರಗೆ ತೆಗೆದು ಮರುಶವ ಪರೀಕ್ಷೆಯನ್ನು ನಡೆಸಿರುತ್ತಾರೆ. ಅಧಿಕಾರಿಗಳಿಗೆ ಈಗ ಮನವರಿಕೆಯಾಗಿದೆ, ಇದು ಕೊಲೆಯಾಗಿರುವುದು ಸತ್ಯವೆಂದು, ಕೊಲೆಯನ್ನು ಮುಚ್ಚಿಹಾಕುವ ಯತ್ನದಲ್ಲಿ ಸ್ಥಳೀಯ ಶಾಸಕರ ಕೈವಾಡವಿದೆ ಎಂದು ಸಂಘಟನೆ ಶಂಕಿಸಿದೆ. ತನಿಖೆಯಿಂದ ಸತ್ಯ ಹೊರಬರಬೇಕಿದೆ. ಪೊರಕೆಯ ಹೋರಾಟ ತಾಲೂಕಿನಾದ್ಯಂತ ಪ್ರಚಾರವಾಗಿದ್ದು ಮಹಿಳೆಯರಲ್ಲಿ ಧೈರ್ಯ ಬಂದಿದೆ. ಮಹಿಳಾ ಸಂಘಟನೆ ಕಟ್ಟಲು ಪ್ರಯತ್ನವನ್ನು ಮಾಡುತ್ತಿದ್ದಾರೆ.

ಇದು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಮಹಿಳೆಯರಿಗೆ ಸಿಕ್ಕ ಜಯ. ಈ ಹೋರಾಟದ ನೇತೃತ್ವ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗೌರಮ್ಮ, ಅಧ್ಯಕ್ಷರಾದ ಸುನಂದ, ಉಪಾಧ್ಯಕ್ಷರಾದ ಅನುಸೂಯ, ರಾಜಮ್ಮ ಸುಶೀಲ ಮತ್ತಿತರರು ವಹಿಸಿದ್ದರು. ಹೋರಾಟಕ್ಕೆ ನಿಂತ ಮಹಿಳೆಯರಿಗೆ ಜನವಾದಿ ಮಹಿಳಾ ಸಂಘಟನೆ, ಜಿಲ್ಲಾ ಸಮಿತಿ ಅಭಿನಂದನೆಯನ್ನು ಸಲ್ಲಿಸುತ್ತದೆ. ಈ ಹೋರಾಟದ ಕುರಿತು ಉದಯ ಟಿ.ವಿ.ಯ ಕ್ರೈಂಸ್ಟೋರಿ ಯಲ್ಲಿ ಸಹ ಬಿತ್ತರಿಸಿರುತ್ತಾರೆ. ಆರೋಪಿ ಗಳನ್ನು ಬಂಧಿಸದಿದ್ದರೆ ಮತ್ತೆ ಹೋರಾಟ ಅನಿವಾರ್ಯವೆಂದು ಸಂಘಟನೆ ಎಚ್ಚರಿಸಿದೆ.

○

ತಲಘಟ್ಟಪುರ ಠಾಣೆ ವ್ಯಾಪ್ತಿಯ ಸಾಲುಹುಣಸೆ ಗ್ರಾಮದ ನಿವಾಸಿ ಸುಶೀಲಮ್ಮನ ಆಸ್ತಿ ವಿವಾದದಲ್ಲಿ ಮಧುಕರ ಎಂಬಾತ ನಕಲು ಸೃಷ್ಟಿಸಿ ಆಸ್ತಿಯನ್ನು ವಂಚಿಸಿದ ಪ್ರಕರಣದಲ್ಲಿ ತಲಘಟ್ಟಪುರ ಪೊಲೀಸ್ ಠಾಣೆಯ ಅಧಿಕಾರಿಗಳು ಮಹಿಳಾ ಪೊಲೀಸ್ ಇಲ್ಲದೆ ಪುರುಷ ಪೋಲೀಸನವರು ಸೂಜಿಯಿಂದ ಉಗುರಿನ ಬೆರಳುಗಳಿಗೆ ಚುಚ್ಚಿ ದೈಹಿಕ, ಮಾನಸಿಕ ಹಿಂಸೆಗೆ ಒಳಪಡಿಸಿರುವುದನ್ನು ಖಂಡಿಸಿ, ಹೋರಾಟ ನಡೆಸಲಾಗಿದೆ. ಇದೇಠಾಣೆಯ ವ್ಯಾಪ್ತಿಗೆ ಬರುವ ತರಳು ಪಂಚಾಯ್ತಿಗೆ ಸೇರಿದ ಕುಂಚಗುರು ಪಾಳ್ಯದ ನಿವಾಸಿ ಲಕ್ಷ್ಮಮ್ಮ ಎಂಬುವವರು ವಿಧವೆಯಾಗಿದ್ದು, ಅವರನ್ನು ವಂಚಿಸಲು ಮಾನಸಿಕವಾಗಿ, ದೈಹಿಕವಾಗಿ ಹಿಂಸಿಸಿ ಕೋಣೆಯಲ್ಲಿ ಕೂಡಿಹಾಕಿ ಬಲವಂತದಿಂದ ಸಹಿ ಹಾಕಿಸಿಕೊಂಡಿರುವುದರ ವಿರುದ್ಧ ದೂರು ನೀಡಿದರೂ ದೂರು ದಾಖಲಿಸದೆ ಸತಾಯಿಸುವ ಪೊಲೀಸ್ ಅಧಿಕಾರಿಗಳ ವಿರುದ್ಧ ಅಖಿಲ ಭಾರತ ಜನವಾದಿ ಮಹಿಳಾ ಸಂಘ, ತಲಘಟ್ಟಪುರ ಪೊಲೀಸ್ ಠಾಣೆಯ ಎದುರು ಪ್ರತಿಭಟನೆಯನ್ನು ಆಗಸ್ಟ್ 28 ರಂದು ನಡೆಸಲಾಯಿತು.

ಈ ಹೋರಾಟಗಳ ಫಲವಾಗಿ ಬೆಂಗಳೂರಿನ ಪೊಲೀಸ್ ಅಧಿಕಾರಿಗಳು ಎಚ್ಚೆತ್ತುಕೊಳ್ಳುವಂತೆ, ಸರಿಯಾದ ಕ್ರಮ ವಹಿಸಲು ಸಾಧ್ಯವಾಗಿದೆ. ಇದರ ಫಲವಾಗಿ ನಮ್ಮ ಜೊತೆ ರಾಜಿಯಾಗಲು ಆರೋಪಿಗಳು ಬಂದಿದ್ದಾರೆ. ನಮ್ಮ ಸಂಘಟನೆಗಳು ನ್ಯಾಯ ನೀಡಲು ಪ್ರಯತ್ನಿಸುತ್ತಿದೆ.

- ವಿ.ಎನ್.ಯಶೋಧ

'ವಿಶ್ವಸಂಸ್ಥೆ ಪ್ರಜಾಪ್ರಭುತ್ವ ನಿಧಿ' – ಬುಶ್ ಬಾಲಂಗೋಚಿಯಾದ ಮನಮೋಹನ

ಇತ್ತೀಚಿಗಿನ ಪ್ರಧಾನಮಂತ್ರಿ ಮನಮೋಹನ ಸಿಂಗ್ ಅಮೆರಿಕ ಭೇಟಿಯಲ್ಲಿ ಒಂದು ಘಟನೆ ಭಾರತದಲ್ಲಿ ಹೆಚ್ಚು ಗಮನ ಸೆಳೆಯಲಿಲ್ಲ. ಭಾರತದ ಮಾಧ್ಯಮಗಳು ಅಧ್ಯಕ್ಷ ಮುಷರ್ರಫ್ ಜತೆ ಭೇಟಿ ಮತ್ತು ಇರಾನ್ ಅಣುಶಕ್ತಿ ವಿವಾದದಲ್ಲಿ ಭಾರತದ ನಿಲುವು ಬಗ್ಗೆ ಹೆಚ್ಚು ಪ್ರಚಾರ ಕೊಟ್ಟವು. ಇನ್ನೊಂದು ಗಂಭೀರ ಘಟನೆ ಅಮೆರಿಕ ಮತ್ತು ವಿಶ್ವಸಂಸ್ಥೆ ಜತೆಸೇರಿ ಸ್ಥಾಪಿಸಿರುವ 'ವಿಶ್ವ ಸಂಸ್ಥೆ ಪ್ರಜಾಪ್ರಭುತ್ವ ನಿಧಿ'ಯಲ್ಲಿ ಭಾರತ ಸಹ ಸಹ-ಪ್ರಾಯೋಜಕನಾದದ್ದು. ಇದು ಪ್ರಧಾನಿಗಳ ಜುಲೈ ಭೇಟಿಯಲ್ಲಿ ಭಾರತ-ಅಮೆರಿಕ ಜಂಟಿಯಾಗಿ ಹಮ್ಮಿಕೊಂಡ 'ಜಾಗತಿಕ ಪ್ರಜಾಪ್ರಭುತ್ವ ಕಾರ್ಯಕ್ರಮ'ದ ಮಂದುವರೆದ ಭಾಗ.

ಏನಿದು ವಿಶ್ವಸಂಸ್ಥೆ ಪ್ರಜಾಪ್ರಭುತ್ವ ನಿಧಿ?

ಈ ನಿಧಿಯನ್ನು ಜುಲೈನಲ್ಲಿ ವಿಶ್ವಸಂಸ್ಥೆ ಆರಂಭಿಸಿದರೂ, ಇದು ನಿಜವಾಗಿ ಅಧ್ಯಕ್ಷ ಬುಶ್‌ರವರ ಐಡಿಯಾ. ಸೆಪ್ಟೆಂಬರ್ 2004 ರಲ್ಲಿ ವಿಶ್ವಸಂಸ್ಥೆ ಮಹಾಸಭೆಯಲ್ಲಿ ಮಾಡಿದ ಬಾಷಣದಲ್ಲಿ ಬುಶ್ ವಿಶ್ವಸಂಸ್ಥೆ 'ಪ್ರಜಾಪ್ರಭುತ್ವ ನಿಧಿ'ಯೊಂದನ್ನು ಸ್ಥಾಪಿಸಬೇಕು ಎಂದು ಹೇಳಿದ್ದರು. ಜುಲೈನಲ್ಲಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಈ ನಿಧಿಯ ಆರಂಭದ ಘೋಷಣೆ ಮಾಡಿದಾಗ 26 ದೇಶಗಳು ಅದಕ್ಕೆ ಬೆಂಬಲ ವ್ಯಕ್ತಪಡಿಸಿದವು. ಇಂತಹ ದೇಶಗಳಲ್ಲಿ ಅಮೆರಿಕದ ಬೆಂಬಲಿಗ ಅಥವಾ ಬಾಲಂಗೋಚಿ ದೇಶಗಳು, ಪೂರ್ವಯುರೋಪ್ ದೇಶಗಳು ಹೆಚ್ಚಾಗಿ ಇದ್ದವು. ಭಾರತ ಸಹ ಈ ನಿಧಿಯ ಬೆಂಬಲಿಗನಾಯಿತು ಎನ್ನುವುದು ಚೋದ್ಯದ ವಿಷಯ. ಅಮೆರಿಕ ಈ ನಿಧಿಗೆ ಘೋಷಿಸಿದಷ್ಟೇ (ಅಂದರೆ 10 ಮಿಲಿಯ ಡಾಲರು) ವಂತಿಗೆಯನ್ನು ಭಾರತ ಸಹ ಘೋಷಿಸಿತು.

ವಿಶ್ವಸಂಸ್ಥೆ ಪ್ರಜಾಪ್ರಭುತ್ವ ನಿಧಿ ಮಾಡಿದರೆ ತಪ್ಪೇನು! ಅದಕ್ಕೆ ಭಾರತ ಬೆಂಬಲ ನೀಡಿದರೆ ತಪ್ಪೇನು? ಜಗತ್ತಿನ ಎಲ್ಲಾ ದೇಶಗಳಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವಂತೆ ನೋಡಿಕೊಳ್ಳುವುದು ವಿಶ್ವಸಂಸ್ಥೆಯ ಕೆಲಸವಲ್ಲವೇ? ಭಾರತ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿ ಅದನ್ನು ಬೆಂಬಲಿಸುವುದರಲ್ಲಿ ಏನು ತಪ್ಪು ಎಂಬ ಅಮಾಯಕ ಪ್ರಶ್ನೆಗಳು ಬರಬಹುದು.

ಬುಶ್‌ಗೂ ಪ್ರಜಾಪ್ರಭುತ್ವಕ್ಕೂ ಎತ್ತಣ ಸಂಬಂಧ?

ಅಧ್ಯಕ್ಷ ಬುಶ್‌ನ ಒತ್ತಡದ ಮೇರೆಗೆ ಈ ನಿಧಿ ಸ್ಥಾಪಿತವಾಗಿರುವುದು. ಬುಶ್‌ಗೂ ಪ್ರಜಾಪ್ರಭುತ್ವಕ್ಕೂ ಎತ್ತಣ ಸಂಬಂಧ ಎಂಬುದು ಎಲ್ಲರಿಗೂ ಗೊತ್ತಿದೆ. ಬುಶ್ ಅಧ್ಯಕ್ಷರಾದ ಮೇಲೆ ಅವರು ಅಫಘಾನಿಸ್ತಾನದ ಮತ್ತು ಇರಾಕ್‌ನಲ್ಲಿ 'ಪ್ರಜಾಪ್ರಭುತ್ವ' ಸ್ಥಾಪಿಸಿದ 'ಬಗೆ' ಎಲ್ಲರಿಗೂ ಗೊತ್ತಿರುವಂತಿದೆ. ನೋಮ್ ಚೋಮ್ಸ್ಕಿ ಯವರು ಬುಶ್‌ರ ನೀತಿಯನ್ನು 'ಮಿಲಿಟರಿ ಮಾನವತಾವಾದ' ಎಂದು ಗೇಲಿ ಮಾಡುತ್ತಾರೆ. 'ಜನರನ್ನು ರಕ್ಷಿಸಬೇಕಾದರೆ ಅವರನ್ನು ಬಾಂಬು ಹಾಕಿ ಕೊಲ್ಲಬೇಕು' - ಇದು ಬುಶ್‌ರ ಮಿಲಿಟರಿ ಮಾನವತವಾದದ ಸಾರ. ಅದೇ ರೀತಿ ಬುಶ್ ಪ್ರಜಾಪ್ರಭುತ್ವ ಸಹ. ಬುಶ್ ಪ್ರಜಾಪ್ರಭುತ್ವ ಸ್ಥಾಪಿಸಲು ಬಾಂಬ್ ಮಳೆ ನಡೆಯುತ್ತದೆ. ಜನರ ಎಲ್ಲಾ ಹಕ್ಕು ಕಿತ್ತುಕೊಳ್ಳುತ್ತಾರೆ. ವರ್ಷಗಟ್ಟಲೆ ವಿದೇಶಿ ಪಡೆಗಳು ಆಂತರಿಕ ಯುದ್ಧದಲ್ಲಿ ತೊಡಗಿರುತ್ತವೆ. ಬಂದೂಕುಗಳ ನೆರಳಡಿಯಲ್ಲಿ ಮತದಾನ ನಡೆಯುತ್ತದೆ. ಪ್ರಜಾಪ್ರಭುತ್ವ ರಕ್ಷಿಸಲು ಮತ್ತು ಸ್ಥಾಪಿಸಲು, ಹಲವು ಬಾರಿ ಬುಶ್‌ಗೆ ಮಿಲಿಟರಿ ದಾಳಿ ಅಗತ್ಯ ಕಂಡಿದೆ!


'ಪ್ರಜಾಪ್ರಭುತ್ವಕ್ಕಾಗಿ ಆಕ್ರಮಣ'!

ಜಗತ್ತಿನಲ್ಲೆಲ್ಲಾ ಪ್ರಜಾಪ್ರಭುತ್ವ ಸ್ಥಾಪಿಸುವ ಗೀಳು ಅಧ್ಯಕ್ಷ ಬುಶ್‌ರಿಗೆ ಮಾತ್ರವಲ್ಲ, ಅವರ ಹಿಂದಿನ ಹಲವು ಅಧ್ಯಕ್ಷರುಗಳಿಗೂ ಇತ್ತು. ಅಮೆರಿಕಾದ ವಿದೇಶಿ ನೀತಿಯ ಅವಿಭಾಜ್ಯ ಅಂಗ ಇದು. ಅಮೆರಿಕದ ಅಧ್ಯಕ್ಷರುಗಳ ಪ್ರಜಾಪ್ರಭುತ್ವ ಎಂದರೆ ಮುಕ್ತ ಮಾರುಕಟ್ಟೆ. ಮುಕ್ತ ಮಾರುಕಟ್ಟೆ ಇಲ್ಲದೆ ಪ್ರಜಾಪ್ರಭುತ್ವ ಸಾಧ್ಯವಿಲ್ಲ. ಅಥವಾ ಮುಕ್ತ ಮಾರುಕಟ್ಟೆಗಾಗಿಯೇ ಪ್ರಜಾಪ್ರಭುತ್ವ. ಮುಕ್ತ ಮಾರುಕಟ್ಟೆ ಎಂದರೆ ಅಮೆರಿಕನ್ ಮತ್ತಿತರ ಹಣಕಾಸು ಬಂಡವಾಳದ ರಕ್ಷಣೆ ಎಂಬುದು ಅದರ ಇನ್ನೊಂದು ಆಯಾಮ. ಅಂದರೆ ಅಮೆರಿಕಾದ ಆಳುವ ವರ್ಗಗಳ ಹಿತಾಸಕ್ತಿ ಕಾಪಾಡುವ ವ್ಯವಸ್ಥೆಯೇ ಅವರ ದೃಷ್ಟಿಯಲ್ಲಿ 'ಪ್ರಜಾಪ್ರಭುತ್ವ'. ಅವರ ಹಿತಾಸಕ್ತಿಗೆ ಅನುಗುಣವಲ್ಲದ್ದು ಪ್ರಜಾಪ್ರಭುತ್ವ ಅಲ್ಲ. ಅಂತಹ ವ್ಯವಸ್ಥೆಯನ್ನು ಸರ್ಕಾರ, ಚಳುವಳಿ, ಪಕ್ಷ, ಅವುಗಳ ಬೆಂಬಲಿಗರನ್ನು ನಾಶ ಮಾಡಿ ಅಮೆರಿಕನ್ 'ಹಿತಾಸಕ್ತಿ' ಗೆ ಅನುಗುಣವಾದ ವ್ಯವಸ್ಥೆ ಸ್ಥಾಪಿಸಲು ಈ ನಿಧಿ. ವಿಶ್ವಸಂಸ್ಥೆಯ ಬೋರ್ಡ್‌ಲ್ಲಿ ಮಾತ್ರ. ಅದನ್ನು ಚುನಾಯಿಸುವುದು ಅಮೆರಿಕನ್ ಸರ್ಕಾರ. ವಿಶ್ವಸಂಸ್ಥೆಯ 170 ಕ್ಕೂ ಹೆಚ್ಚು ದೇಶಗಳಲ್ಲಿ ಕೇವಲ 25 ದೇಶಗಳು ಅದನ್ನು ಬೆಂಬಲಿಸಿರುವುದು ಇದಕ್ಕೆ ನಿದರ್ಶನ. ಸೆಪ್ಟೆಂಬರ್ 2004 ರ ವಿಶ್ವಸಂಸ್ಥೆ ಭಾಷಣದಲ್ಲಿ ಬುಶ್ ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಬಗ್ಗೆ (ಜೋಕ್ ಅಲ್ಲ, ಸೀರಿಯಸ್ಸಾಗೀ) ಮಾತನಾಡಿದ್ದರು.

ಅರಬ್ ಜಗತ್ತಿನಲ್ಲೇ ಸಾಕಷ್ಟು ಪ್ರಜಾಪ್ರಭುತ್ವ ಸ್ಥಾಪಿಸಿದ್ದ ಪ್ಯಾಲೆಸ್ಟೀನ್ ನಾಯಕರನ್ನು ಕಿತ್ತೊಗೆಯಲು ಜಗತ್ತಿನ ಇತರೆಲ್ಲಾ ನಾಯಕರಿಗೆ ಕರೆ ನೀಡಿದ್ದರು. ಪ್ಯಾಲೆಸ್ಟೀನ್ ಸರ್ಕಾರ ಚುನಾಯಿತವಾದರೂ ಅಮೆರಿಕದ ಮೂಗಿನ ನೇರಕ್ಕೆ ನಡೆಯದ್ದರಿಂದ ಈ ಮಾತು ಎಂದು ಎಲ್ಲರಿಗೂ ಗೊತ್ತು.

ನಿಕರಾಗುವ, ವೆನೆಜುವೆಲಾಗಳಲ್ಲಿ ಪ್ರಜಾಪ್ರಭುತ್ವ ಬುಡಮೇಲು ಪ್ರಯತ್ನ

ಅಮೆರಿಕ ಹಿಂದೆ ಪ್ರಜಾಪ್ರಭುತ್ವ ಪ್ರಸಾರಕ್ಕೆ ಏನು ಮಾಡಿದೆ? ಯಾವ ದೇಶಗಳಲ್ಲಿ ಯಾವ ರೀತಿಯ 'ಪ್ರಜಾಪ್ರಭುತ್ವ' ಯಾವ ವಿಧಾನದಲ್ಲಿ ತಂದಿದೆ ಎಂದು ನೋಡಬಹುದು. 80 ರದಶಕದಲ್ಲೇ ಅಧ್ಯಕ್ಷ ರೇಗನ್‌ರ ಅಭ್ಯರ್ಥಿ ಎನ್‌ಇಡಿ(National Endowment for Democracy-ರಾಷ್ಟ್ರೀಯ ಪ್ರಜಾಪ್ರಭುತ್ವನಿಧಿ) ಸ್ಥಾಪಿಸಲಾಯಿತು. ಇದರ ಉದ್ದೇಶ ವಾಕ್ಯವೇ 'ಮುಕ್ತ ಮಾರುಕಟ್ಟೆಗಳೇ ಪ್ರಜಾಪ್ರಭುತ್ವ ರಕ್ಷಿಸುವುದು'. ಎನ್‌ಇಡಿ - ಖಾಸಗಿ ಕಂಪನಿಗಳು, 'ಮುಕ್ತ' ಟ್ರೇಡ್‌ಯೂನಿಯನ್‌ಗಳು, ಅಂತರ್‌ರಾಷ್ಟ್ರೀಯ ಪ್ರಜಾಪ್ರಭುತ್ವ ಸಂಸ್ಥೆ, ಅಂತರ್‌ರಾಷ್ಟ್ರೀಯ ವ್ಯವಹಾರಗಳಿಗೆ ಮೀಸಲಾದ



ನಾಲ್ಕು ಸಂಸ್ಥೆಗಳನ್ನು ಒಳಗೊಂಡಿದೆ.

ಎನ್‌ಇಡಿ 80 ರ ದಶಕದಲ್ಲಿ ನಿಕರಾಗುವದಲ್ಲಿ ಜನರ ಆಶಯ ಪ್ರತಿನಿಧಿಸಿದ ಕ್ರಾಂತಿಕಾರಿ ಸ್ಯಾಂಡಿನಿಸ್ಟಾ ಸರ್ಕಾರ ಉರುಳಿಸಲು ಲಕ್ಷಾಂತರ ಡಾಲರುಗಳನ್ನು ಖರ್ಚು ಮಾಡಿತು. 1989 ರ ಒಂದರಲ್ಲೇ ನಿಕರಾಗುವದ ಬಲಪಂಥೀಯ ಪಕ್ಷ ಮತ್ತು ಇತರ ಗುಂಪುಗಳಿಗೆ 90 ಲಕ್ಷ ಡಾಲರು ಖರ್ಚು ಮಾಡಿತು. ಕ್ಯೂಬಾದ ವಿರೋಧಿಗಳು ಮತ್ತು ವಲಸೆಗಾರರಿಗೆ ದಶಕಗಳಿಂದ ಎನ್‌ಇಡಿ ಧನ ಸಹಾಯ ಒದಗಿಸುತ್ತಿದೆ. ಉಕ್ರೇನಿನ ಅಧ್ಯಕ್ಷರನ್ನು ಬದಲಿಸಲು ಮೂರು ವರ್ಷಗಳಲ್ಲಿ ಆರುವರೆ ಕೋಟಿ ಡಾಲರು ಖರ್ಚು ಮಾಡಿವೆ.

ಹೈತಿಯ ಅಧ್ಯಕ್ಷ ಅರಿಸ್ಟಿಡ್ ಪದಚ್ಯುತಿಗೆ ಆತನ ವಿರೋಧಿಗಳಿಗೆ ಹಣದ ಹೊಳೆ ಹರಿಯಿತು.



ಪೂರ್ವಯುರೋಪು, ಮಧ್ಯ ಏಶ್ಯಾಗಳಲ್ಲಿ ದೊಡ್ಡ ಪ್ರಮಾಣದಲ್ಲಿ 'ಪ್ರಜಾಪ್ರಭುತ್ವ' ಸ್ಥಾಪಿಸಿದ್ದು ಎಲ್ಲರಿಗೂ ಗೊತ್ತು. ನಿಜವಾದ ಪ್ರಜಾಪ್ರಭುತ್ವ ಬುಡಮೇಲು ಮಾಡಲು ಎನ್‌ಇಡಿ ಇರುವುದು ಎಂದು ಜಗಜ್ಜಾಹೀರಾಗಿದೆ. ಇದಕ್ಕೆ ಇತ್ತೀಚಿನ ಉತ್ತಮ ಉದಾಹರಣೆ ವೆನೆಜುವೆಲಾ. ಅಲ್ಲಿನ ಚುನಾಯಿತ ಅಧ್ಯಕ್ಷ ಹ್ಯೂಗೋ ಚವೇಝರನ್ನು ಬುಡಮೇಲು ಮಾಡಲು ಬಳಸದ ಅಸ್ತ್ರ ಇಲ್ಲ. ಮಿಲಿಟರಿ ಕ್ಷಿಪ್ರಕ್ರಾಂತಿ, ಆರ್ಥಿಕ ದಿಗ್ಬಂಧನ, ಸಾರ್ವತ್ರಿಕ ಮುಷ್ಕರ - ಲಾಕೌಟ್, ಬಲಪಂಥೀಯ ಪಕ್ಷಗಳ ಹಿಂಸಾಚಾರ, ಕೊಲೆ ಪ್ರಯತ್ನ, ಮಿಲಿಟರಿ ದಾಳಿಯ ಬೆದರಿಕೆ, 2000 ದಿಂದ 2001 ರೊಳಗೆ ಎನ್‌ಇಡಿ ವೆನೆಜುವೆಲಾದ ವಿರೋಧಿ ರಾಜಕೀಯ ಪಕ್ಷಗಳಿಗೆ ಧನ ಸಹಾಯ ಮೂರು ಪಟ್ಟು ಏರಿಸಿತು. (2.5 ಲಕ್ಷ ಡಾಲರುಗಳಿಂದ 8.7 ಲಕ್ಷ ಡಾಲರುಗಳಿಗೆ) ಆದರೂ ಅಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಸಾಧ್ಯವಾಗಲಿಲ್ಲ ಎನ್ನುವುದು ಬೇರೆ ಮಾತು.

ಅಮೆರಿಕನ್ ರಾಜಕೀಯ ವ್ಯವಸ್ಥೆ ಹೊರಿಸುವ ಹುನ್ನಾರ

ಕ್ಲಿಂಟನ್ ಅಧ್ಯಕ್ಷಗಿರಿಯ ಅವಧಿಯಲ್ಲಿ (ಜೂನ್ 2000 ರಲ್ಲಿ) ಪೋಲೆಂಡಿನ ವಾರ್ಸಾದಲ್ಲಿ 'ಪ್ರಜಾಪ್ರಭುತ್ವ ಸಮುದಾಯ' ಎಂಬ ಸಂಘಟನೆ ಸ್ಥಾಪಿಸಿ ಸಮಾವೇಶ ನಡೆಯಿತು. ವಾಜಪೇಯಿ ಸರ್ಕಾರ ಇದರಲ್ಲಿ ವಿಪರೀತ ಆಸಕ್ತಿ ತೋರಿಸಿ ಸಹ - ಪ್ರಾಯೋಜಕವಾಯಿತು. ಅದರ ಮುಂದುವರಿಕೆಯಾಗಿ ವಿಶ್ವಸಂಸ್ಥೆಯಲ್ಲಿ 'ಪ್ರಜಾಪ್ರಭುತ್ವ ಗುಂಪು' ಸ್ಥಾಪಿಸಲು ಅಮೆರಿಕಾ ಮುಂದಾಯಿತು. ವಿಶ್ವಸಂಸ್ಥೆ ಮಾನವ ಹಕ್ಕು ಆಯೋಗದಲ್ಲಿ ಅಧ್ಯಕ್ಷರಾಗಿ ಚುನಾಯಿತವಾಗಲು ಸಾಧ್ಯವಾಗದೆ ಹೋದಾಗ ಈ ಪ್ರಯತ್ನ ಆರಂಭವಾಯಿತು. ಆಗಿನಿಂದ ಎನ್‌ಇಡಿ ಬದಲು ವಿಶ್ವಸಂಸ್ಥೆಯ ಮೂಲಕ ಪ್ರಜಾಪ್ರಭುತ್ವ ಸ್ಥಾಪಿಸುವ ಹೆಸರಲ್ಲಿ, ಅಮೆರಿಕದ ರಾಜಕೀಯ ವ್ಯವಸ್ಥೆಯು ತನ್ನ ಮೂಗಿನ ನೇರಕ್ಕೆ ಹೊರಿಸಲು ವಿಶ್ವಸಂಸ್ಥೆಯನ್ನು ಬಳಸಲು ಪ್ರಯತ್ನ ನಡೆಸುತ್ತಿದೆ.

ಈಗಿನ 'ವಿಶ್ವಸಂಸ್ಥೆ ಪ್ರಜಾಪ್ರಭುತ್ವ ನಿಧಿ' ಹಲವು ದಶಕಗಳ ಈ ಪ್ರಯತ್ನದ ಮುಂದುವರಿಕೆಯಷ್ಟೆ. ಇರಾಕ್ ಮತ್ತು ಜಾರ್ಜಿಯಾಗಳಲ್ಲಿ ಪ್ರಜಾಪ್ರಭುತ್ವದ ಉದಯವನ್ನು ಬೆಂಬಲಿಸಿ ಮಾತನಾಡಿಸಲು ಬುಶ್ ಸೆಪ್ಟೆಂಬರ್‌ನಲ್ಲಿ ಈ ನಿಧಿಯನ್ನು ಅದಕ್ಕಾಗಿ ಬಳಸುತ್ತಾರೆ ಎಂಬುದು ಸ್ಪಷ್ಟ. ಚುನಾವಣೆ ಮೊದಲು ಮತ್ತು ನಂತರ ಅಮೆರಿಕ ಜತೆ ಸಹಕರಿಸುವ ಹಲವು ರಾಜಕೀಯ ಪಕ್ಷಗಳಿಗೆ ಅಮೆರಿಕ ಈಗಾಗಲೇ ಧನ ಸಹಾಯ (ಸುಮಾರು ಎಂಟು ಕೋಟಿ ಡಾಲರು) ಒದಗಿಸಿದೆ. ತನ್ನ ಮೂಗಿನ ನೇರಕ್ಕೆ ಎಲ್ಲಾ ದೇಶಗಳ ರಾಜಕೀಯ-ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಅಮೆರಿಕದ ಈ ಹುನ್ನಾರಕ್ಕೆ ಭಾರತ ಏಕೆ ಬೆಂಬಲ ಕೊಡಬೇಕು? ಭಾರತದ ಜತೆ ಸ್ನೇಹ-ಸಂಬಂಧ ಹೊಂದಿರುವ ವೆನಿಜುವೆಲಾ, ಕ್ಯೂಬಾ, ಮಾಜಿ-ಸೋವಿಯತ್‌ನ ಮಧ್ಯಾಏಶ್ಯಾ ದೇಶಗಳಲ್ಲಿ ಬುಡಮೇಲು ಕೃತ್ಯಗಳಲ್ಲಿ ಭಾರತ ಏಕೆ ಬೆಂಬಲಕೊಡಬೇಕು? ಇದನ್ನು ನಮ್ಮ ದೇಶದ ಜನತೆ ಪ್ರಧಾನಿಗಳನ್ನು ಕೇಳಬೇಕಾಗಿದೆ. ○

'ದಿನಕ್ಕೊಬ್ಬ ಅಮೆರಿಕನ್ ಸೈನಿಕನನ್ನು ಬಲಿತೆಗೆದುಕೊಂಡ 'ಆಧುನಿಕ ಬಕಾಸುರ'

ನೀವು ಬಕಾಸುರನ ಕಥೆ ಕೇಳಿರಬೇಕು. ದಿನಕ್ಕೊಬ್ಬರನ್ನು ಬಲಿತೆಗೆದುಕೊಳ್ಳುತ್ತಿದ್ದನಂತೆ ಆತ. ಆದರೆ ಆಧುನಿಕ ಬಕಾಸುರನ ಬಗ್ಗೆ ನಿಮಗೆ ಗೊತ್ತಿರಲಿಕ್ಕಿಲ್ಲ. ಅಮೆರಿಕದ ಅಧ್ಯಕ್ಷ ಬುಶ್ ಕಳೆದ 5 ವರ್ಷಗಳಲ್ಲಿ 1727 ದಿನಗಳಲ್ಲಿ ಅಧ್ಯಕ್ಷನಾಗಿರುವಾಗ ಇರಾಕ್ ಯುದ್ಧದಲ್ಲಿ 1873 ಅಮೆರಿಕನ್ ಸೈನಿಕರನ್ನು ಬಲಿ ತೆಗೆದುಕೊಂಡಿದ್ದಾರೆ. ಇನ್ನು ಆತನ ನರಮೇಧಕ್ಕೆ ಬಲಿಯಾದ ಇರಾಕಿಗಳು, ಅಫಘಾನರು, ನಿರಪರಾಧಿ ನಾಗರಿಕರಂತೂ ಲೆಕ್ಕವೇ ಇಲ್ಲ. ಅವರ ಸಂಖ್ಯೆ ಲಕ್ಷಾಂತರ. ಆತನಿಗೆ ತಾನು 'ಯುದ್ಧ ಅಧ್ಯಕ್ಷ' ಎಂದು ಹೇಳಿಕೊಳ್ಳಲು ಹೆಮ್ಮೆ. 'ಆಧುನಿಕ ಬಕಾಸುರ' ಎಂದು ಕರೆದರೂ ಆತನ ಹೆಮ್ಮೆಪಡಬಹುದೇನೋ?

ಯುರೋಪನ್ನು 'ಕಾಡುತ್ತಿರುವ' ಕಮ್ಯುನಿಸ್ಟ್ ಪೆಡಂಭೂತ

ಕಾರ್ಲ್‌ಮಾರ್ಕ್ಸ್ ಆತನ ಕಾಲದಲ್ಲೇ ಯುರೋಪಿನ ಆಳುವವರ್ಗಗಳನ್ನು ಗೇಲಿ ಮಾಡುತ್ತಾ 'ಯುರೋಪನ್ನು ಕಮ್ಯುನಿಸ್ಟ್ ಪೆಡಂಭೂತವು ಕಾಡುತ್ತಿದೆ' ಎಂದು ಹೇಳಿದ್ದ. ಪೂರ್ವಯುರೋಪಿನ ದೇಶಗಳಲ್ಲಿ ಸಮಾಜ ವಾದಕ್ಕೆ ಹಿನ್ನಡೆಯಾದ ಮೇಲೂ ಅವರಿಗೆ ಆ ಭಯ ಇನ್ನೂ ಹೋಗಿಲ್ಲ ಅಂತ ಕಾಣ್ತದೆ. ಇತ್ತೀಚಿಗೆ ಯುರೋಪಿಯನ್ ಕೌನ್ಸಿಲ್‌ನ ರಾಜಕೀಯ ಕಮಿಷನ್ ಒಂದು ವರದಿ ತಯಾರಿಸಿದೆಯಂತೆ. ಅದರಲ್ಲಿ 'ಕಮ್ಯುನಿಸಂ ಎಂಬ ಮಾರಿಯ ವಿರುದ್ಧ ದನಿ ಎತ್ತಬೇಕು' ಎಂದು ಹೇಳಿದೆಯಂತೆ. ಯುರೋಪಿಯನ್ ಕೌನ್ಸಿಲ್‌ನ ಈ ವರದಿಯ ವಿರುದ್ಧ ಜಗತ್ತಿನ ಕಮ್ಯುನಿಸ್ಟ್ ಮತ್ತು ಸೋಶಲಿಸ್ಟ್ ಪಕ್ಷಗಳು ತೀವ್ರ ಪ್ರತಿಭಟನಾ ಕಾರ್ಯಕ್ರಮ ಹಾಕಿಕೊಂಡಿವೆ. ರಶ್ಯನ್, ಫ್ರೆಂಚ್ ಮತ್ತು ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷಗಳು ಜಗತ್ತಿನಾದ್ಯಂತ ಪ್ರತಿಭಟನೆಗೆ ಕರೆಕೊಟ್ಟಿವೆ. ಯುರೋಪಿಯನ್ ಕೌನ್ಸಿಲ್‌ನ ರಾಜಕೀಯ ಕಮಿಷನ್‌ನ ಅಧ್ಯಕ್ಷರಿಗೆ ಇಮೇಲ್, ಫ್ಯಾಕ್ಸ್, ಪತ್ರಗಳ ಮೂಲಕ ಪ್ರತಿಭಟನೆ ಸಲ್ಲಿಸಲು ಕರೆಕೊಟ್ಟಿವೆ.

ಸಿಪಿಐ(ಎಂ) ಸಹ ಪ್ರತಿಭಟನೆಗೆ ಕರೆ ಕೊಟ್ಟಿದೆ. ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಅಕ್ಟೋಬರ್ 1 ರಿಂದ 15 ರವರೆಗೆ 'ಪ್ರತಿಭಟನಾ ಪಕ್ಷ' ಕ್ಕೆ ಕರೆ ನೀಡಿದೆ. ಪ್ರತಿಭಟನಾ ಪತ್ರಕ್ಕೆ ಸಹಿ ಸಂಗ್ರಹಣಾ ಚಳುವಳಿ, ಪೋಸ್ಟರ್ ಪ್ರದರ್ಶನ, ಮಾರ್ಕ್ಸ್‌ವಾದ- ಲೆನಿನ್‌ವಾದದ ಪ್ರಚಾರ - ಹೋರಾಟದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.



ಮಂಗಳೂರು : ಡಿವೈಎಫ್ಐ ನೇತೃತ್ವದಲ್ಲಿ ಸರಳ ವಿವಾಹ

ಮಂಗಳೂರಿನ ಡಿವೈಎಫ್ಐ ಪಂಜಿಮೊಗರು ಘಟಕದ ಕಾರ್ಯದರ್ಶಿಯಾಗಿ ಹಲವಾರು ವರ್ಷಗಳಿಂದ ದುಡಿಯುತ್ತಾ ಬಂದಿರುವ ಸಕ್ರಿಯ ಕಾರ್ಯಕರ್ತ ಅನಿಲ್ ಡಿಸೋಜ ಮತ್ತು ಅದೇ ಪರಿಸರದ ಸೌಮ್ಯ ಇವರು ಒಬ್ಬರನ್ನೊಬ್ಬರು ಅರಿತು ಇತ್ತೀಚೆಗೆ ಸತಿ ಪತಿಗಳಾಗಿ ದಾಂಪತ್ಯ ಜೀವನಕ್ಕೆ ಪಾದಾರ್ಪಣೆಗೈದರು.

ಕುಟುಂಬದ ಹಿರಿಯರು ಸಂಪ್ರದಾಯ ಪ್ರಕಾರ ನಡೆಸುವ ಮದುವೆಗಳಿಗೆ ಅದೆಷ್ಟೋ ಅಡ್ಡಿಗಳು ಬಂದು ನಿಂತು ಹೋಗುತ್ತವೆ. ಅದರಲ್ಲೂ ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸಿ ವಿವಾಹವಾಗುವುದರಲ್ಲಿ ಅಡ್ಡಿಗಳು ಕಡಿಮೆ ಎಂಬಂತಿಲ್ಲ, ಅನ್ನುವುದಕ್ಕೆ ಅನಿಲ್ ಮತ್ತು ಸೌಮ್ಯರವರೇ ಸಾಕ್ಷಿ.

ಅನಿಲ್ ಮತ್ತು ಸೌಮ್ಯ ಇಬ್ಬರೂ ಬೇರೆ ಬೇರೆ ಧರ್ಮದವರಾಗಿದ್ದು ಜಾತಿ ಮತ್ತು ಮತಗಳ ನಡುವಿನ ಅಡ್ಡಗೋಡೆಯನ್ನು ತೂರೆದು, ಸವಾಲನ್ನು ಸ್ವೀಕರಿಸಿ ಮನುಷ್ಯತ್ವದ ಪ್ರೀತಿಯ ಸೌಧವನ್ನು ಕಟ್ಟುವ ಹೆಜ್ಜೆಯನ್ನು ಮುಂದಿಟ್ಟು ನಡೆದರು. ಆದರೆ ಇವೆಲ್ಲದಕ್ಕೆ ಅನಿಲ್ ಮತ್ತು ಸೌಮ್ಯರವರ ಮನೆಯವರಿಂದ ವಿರೋಧಗಳು ಬಂದ ಕಾರಣ ಸಮಸ್ಯೆಗಳು ತಲೆದೋರಿತು. ಆ ಕೂಡಲೇ ಡಿವೈಎಫ್ಐ ಸಂಘಟನೆಯು ಮಧ್ಯ ಪ್ರವೇಶಿಸಿ ಇಬ್ಬರನ್ನು ಒಂದಾಗಿಸುವ ಪ್ರಯತ್ನವನ್ನು ಮಾಡಿತು. ಅದರ ಭಾಗವಾಗಿ ನವೀಕೃತಗೊಂಡ ವಿಕಾಸ ಕಛೇರಿಯಲ್ಲಿ ಸರಳ ವಿವಾಹ ಮಾಡುವುದಾಗಿ ನಿರ್ಧರಿಸಲಾಯಿತು.

ದಿನಾಂಕ 7.9.2005ರಂದು ವಿಕಾಸ ಕಛೇರಿಯಲ್ಲಿ ನಡೆದ ಸರಳ ವಿವಾಹ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಕೃಷ್ಣಪ್ಪ ಕೊಂಚಡಿಯವರು ಜಾತಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಗಳು, ವರದಕ್ಷಿಣೆ ಕಿರುಕುಳ, ಆಡಂಬರದ ಮದುವೆಗಳು ಈ ಸಮಾಜದಲ್ಲಿ ಎಲ್ಲೆ ಮೀರುತ್ತಿದೆ. ಇವೆಲ್ಲಾ ಮನವ ಕುಲಕ್ಕೆ ವಿರೋಧಿಯಾಗಿದೆ. ಆದ್ದರಿಂದ ನಾವೆಲ್ಲಾ ಜಾತಿ ಧರ್ಮ ಮರೆತು ಮೊದಲು ಮನುಷ್ಯರಾಗಲು ಕಲಿಯೋಣ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾರಾಯಣ ಗುರುಗಳು ನೀಡಿದ ಜಾತಿ ಮತ ಯಾವುದಾದರೇನು? ಮನುಷ್ಯ ಮಾತ್ರ ಒಳ್ಳೆಯವನಾದರೆ ಸಾಕು ಅನ್ನುವ ಉದಾತ್ತ ಘೋಷನೆಯ ಪ್ರಸ್ತುತತೆಯ ಬಗ್ಗೆ ಒತ್ತಿ ಹೇಳಿದರು.

ವಿವಾಹ ಕಾರ್ಯಕ್ರಮದ ನಿರ್ವಹಣೆಯನ್ನು ಎಲ್.ಐ.ಸಿ. ಏಜೆಂಟರ ಸಂಘದ ಜಿಲ್ಲಾ ಮುಖಂಡರಾದ ಎಂ.ದೇವದಾಸ್‌ರವರು ನೆರವೇರಿಸಿದರು. ಡಿವೈಎಫ್ಐ ಜಿಲ್ಲಾ ನಾಯಕರಾದ ಅಶೋಕ್ ಕೊಂಚಾಡಿ, ಮುನೀರ್ ಕಾಟಿಪಳ್ಳ, ಅಜೀರ ಜೋಕಟ್ಟೆ, ಮುಸ್ತಾಫ ಪಂಜಿಮೊಗರು, ಮುಂತಾದವರು ನವದಂಪತಿಗಳಿಗೆ ಶುಭ ಕೋರಿ ಮಾತನಾಡಿದರು. ಪ್ರಾರಂಭದಲ್ಲಿ ಡಿವೈಎಫ್ಐ ಜಿಲ್ಲಾ ಕೋಶಾಧಿಕಾರಿ ದಯಾನಂದ ಶೆಟ್ಟಿಯವರು ಸ್ವಾಗತಿಸಿ. ಬಶೀರ್ ಪಂಜಿಮೊಗರು ವಂದಿಸಿದರು.

ವರದಿ : ಅಶೋಕ್ ಕೊಂಚಾಡಿ

ಹಾವೇರಿಗೊಂದು ಸರ್ಕಾರಿ ಪದವಿ ಕಾಲೇಜು - ಎಸ್ಸೆಫ್ಐ ಹೋರಾಟ

ಹಾವೇರಿಗೊಂದು ಸರ್ಕಾರಿ ಪದವಿ ಕಾಲೇಜು ಸ್ಥಾಪನೆಗೆ ಒತ್ತಾಯಿಸಿ ಹಾಗೂ ಹಾವೇರಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಹಾವೇರಿ ಜಿಲ್ಲೆಯಿಂದ ಆಗಮಿಸಿದ ಸಾವಿರಾರು ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದರ ಫಲವಾಗಿ ಹೋರಾಟಕ್ಕೆ ಮಣಿದು ಸೆಪ್ಟೆಂಬರ್ 22 ರಂದು ಮುಖ್ಯಮಂತ್ರಿ ಶ್ರೀ ಎನ್.ಧರ್ಮಸಿಂಗ್‌ರವರು ಮಾತುಕತೆ ನಡೆಸಿದರು.

ಬನ್ನಪ್ಪ ಪಾರ್ಕ್‌ನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಮೈಸೂರು ಬ್ಯಾಂಕ್ ಸರ್ಕಲ್, ಶಿವಾನಂದ ಸರ್ಕಲ್ ಮೂಲಕ ನೆಹರು ಪಾರ್ಕ್ ಆವರಣದಲ್ಲಿ ಬೃಹತ್ ಪ್ರತಿಭಟನಾ ಸಭೆಯಾಗಿ ಮಾರ್ಪಟ್ಟಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್ಎಫ್ಐ ರಾಜ್ಯ ಉಪಾಧ್ಯಕ್ಷ ಮತ್ತು ಜಿಲ್ಲಾ ಸಮಿತಿ ಅಧ್ಯಕ್ಷ ವಿಜಯಕುಮಾರ್ ದೊಡ್ಡಮನಿಯವರು ಮಾತನಾಡಿ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗುವಂತೆ ವಿಶೇಷ ಯೋಜನೆ ರೂಪಿಸಿ, ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಬೇಕು, ಹಾವೇರಿ ನಗರಕ್ಕೊಂದು ಸರ್ಕಾರಿ ಪದವಿ ಕಾಲೇಜು ಮತ್ತು ಎಲ್ಲಾ ತಾಲ್ಲೂಕಿಗೆ ಅಗತ್ಯ ಸರ್ಕಾರಿ ಶಾಲಾ-ಕಾಲೇಜು-ಹಾಸ್ಟೆಲ್ ತೆರೆಯಬೇಕು ಎಂದು ಒತ್ತಾಯಿಸಿದರು. ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ಹೆಚ್.ಆರ್.ನವೀನಕುಮಾರ್, ಜಿಲ್ಲಾ ಕಾರ್ಯದರ್ಶಿ ನಾರಾಯಣ ಕಾಳೆ, ರಾಜ್ಯಾಧ್ಯಕ್ಷ ಬಿ.ರಾಜಶೇಖರಮೂರ್ತಿ ಮಾತನಾಡಿದರು.

ನಂತರ ನಿಯೋಗ ಮುಖ್ಯಮಂತ್ರಿಯನ್ನು ಭೇಟಿ ಮಾಡಿತು. ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಧರ್ಮಸಿಂಗ್ ಮಾತನಾಡಿ ನಂತರ ಎಲ್ಲಾ ಅಧಿಕಾರಿಗಳು, ಶಿಕ್ಷಣ ಸಚಿವರನ್ನೊಳಗೊಂಡ ಸಭೆಯನ್ನು ಇದೇ 22 ರಂದು ಎಸ್ಎಫ್ಐ ನಿಯೋಗದೊಂದಿಗೆ ನಡೆಸಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಪರಿಶೀಲಿಸಲು ಹಾಗೂ ಹಾವೇರಿಗೊಂದು ಸರ್ಕಾರಿ ಕಾಲೇಜು ನೀಡಲು ಕ್ರಮವಹಿಸುವಂತೆ ಅಧಿಕಾರಗಳಿಗೆ ಸೂಚಿಸಿದರು. ಜಿಲ್ಲೆಯ ಸಮಗ್ರ ಶೈಕ್ಷಣಿಕ ಅಭಿವೃದ್ಧಿ ಹಾಗೂ ಕೃಷಿ-ನೀರಾವರಿ - ಕೈಗಾರಿಕೆ ಸೇರಿದಂತೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ 12 ಬೇಡಿಕೆಗಳ ಆಧಾರದಲ್ಲಿ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಚಳುವಳಿಯ ನೇತೃತ್ವವನ್ನು ರಾಜ್ಯ ಮುಖಂಡರಾದ ಅನಂತನಾಯ್ಕ, ಎಂ.ಎಸ್.ಹಡಪದ, ಜಿಲ್ಲಾ ಮುಖಂಡರಾದ ಚಂದ್ರು ಅಕ್ಕಿವಳ್ಳಿ, ವಿಕಾಸ್ ಹಿರೇಮಠ, ಮುತ್ತು ಹಿರೇಮನಿ, ಶಿವಪುತ್ರ ಮಣ್ಣೊಡ್ಡರ್ ಮುಂತಾದವರು ವಹಿಸಿದ್ದರು.

ವರ್ತೂರಿನಲ್ಲಿ 'ಕಾಂ. ಸೂರಿಭವನ್' ಕ್ಕೆ ಚಾಲನೆ

ಬೆಂಗಳೂರಿನ ವರ್ತೂರು ಕ್ಷೇತ್ರದಲ್ಲಿ ಸುಮಾರು 1976ರಿಂದ ಹಲವಾರು ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸುವ ಮೂಲಕ ಸಾಕಷ್ಟು ಚಳುವಳಿಗಳು ಬೆಳೆದು ಬಂದಿದೆ. ಮತ್ತು ರಾಜಕೀಯವಾಗಿ ಸಹ ಜನರು ಬದಲಾವಣೆ ಬಯಸಿ ಕಾಂ. ಸೂರಿಯವರನ್ನು ಕ್ಷೇತ್ರದ ಶಾಸಕರಾಗಿ ಆಯ್ಕೆ ಮಾಡಿದ ಕ್ಷೇತ್ರ ಇದು. ಆದರೆ ಇಷ್ಟೆಲ್ಲಾ ಚಳುವಳಿಗಳಿದ್ದರೂ ಅದರ ಕಾರ್ಯನಿರ್ವಹಣೆಗೆ ಅಗತ್ಯವಾದ ಸ್ವಂತಕಟ್ಟಡವಿರಲಿಲ್ಲ. ಇತ್ತೀಚೆಗೆ ಟಿನ್ ಕಾರ್ಖಾನೆ ಹಿಂಭಾಗವಿರುವ ಉದಯನಗರದಲ್ಲಿ 30-44ಅಡಿಗಳ ಜಾಗವನ್ನು ಸುಮಾರು 8 ಲಕ್ಷ ನೀಡಿ ಖರೀದಿಸಿದ್ದು, ಅಲ್ಲಿ ದಿನಾಂಕ 31.08.05ರಂದು 'ಕಾಮ್ರೇಡ್ ಸೂರಿ'ಯವರ ಸ್ಮಾರಕ ಭವನದ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.



ಪಕ್ಷದ ವರ್ತೂರು ಕ್ಷೇತ್ರ ಸಮಿತಿಯ ಕಾರ್ಯದರ್ಶಿ ಕಾಂ. ರಾಮಚಂದ್ರ, ದುಡಿಯುವ ವರ್ಗಕ್ಕೋಸ್ಕರ ಸಾಕಷ್ಟು ಪ್ರಮಾಣದಲ್ಲಿ ಸಿಐಟಿಯು ಸಂಘಟನೆ ದುಡಿಯುತ್ತಿದ್ದು ಕಛೇರಿಯ ಕೊರತೆಯಿತ್ತು, ಈಗ ಒಳ್ಳೆಯ ಅವಕಾಶ ಸಿಕ್ಕಿದೆ. ತಾವೆಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸ್ವಾಗತ ಕೋರಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಪ್ರಕಾಶ್ ಮಾತನಾಡುತ್ತಾ ಈ ಸ್ಮಾರಕ ಭವನಕ್ಕಾಗಿ ಸಾಕಷ್ಟು ಗಣನೀಯ ಪ್ರಮಾಣದಲ್ಲಿ ಕಾರ್ಮಿಕರು ಆರ್ಥಿಕ ಸಹಾಯ ಮಾಡಿರುತ್ತಾರೆ. ಇದರ ಹಿಂದೆ ಹಲವಾರು ಮುಖಂಡರುಗಳ ಪ್ರಯತ್ನ, ಶ್ರಮ ಇದೆ. ಮೊದಲ ಬಾರಿಗೆ ಸ್ವಂತ ಕಛೇರಿ ಕಟ್ಟುವ ಪ್ರಯತ್ನವನ್ನು ಈ ಪ್ರದೇಶದಲ್ಲಿ ಮಾಡುತ್ತಿರುವುದು ಬೇರೆ ಪ್ರದೇಶಗಳಿಗೆ ಮಾರ್ಗದರ್ಶಕವಾಗಲಿ ಎಂದು ಅಭಿನಂದನೆ ತಿಳಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗುರುಶಾಂತ ಮಾತನಾಡುತ್ತಾ ಬಸವಣ್ಣನವರ ವಚನ 'ಜಂಗಮಕ್ಕೆ ಅಳಿವಿಲ್ಲ' ಎಂಬ ರೀತಿಯಲ್ಲಿ ಚಳುವಳಿಗೆ ಕೊನೆಯಿಲ್ಲ. ಬೆಂಗಳೂರಿನಲ್ಲಿ ವೈಯಕ್ತಿಕವಾಗಿ ಯೋಚಿಸುವ ಜನರು ಹೆಚ್ಚಿರುವಾಗ ಈ ಪ್ರದೇಶದಲ್ಲಿ ನಮ್ಮ ಸಂಗಾತಿಗಳು ಚಳುವಳಿಯನ್ನು ಬೆಳೆಸುವ ದೃಷ್ಟಿಯಿಂದ ಸ್ವಂತ ಕಛೇರಿ ಕಟ್ಟಲು ಪ್ರಯತ್ನಿಸಿರುವ ವಿಷಯ ತಿಳಿದು ನನಗೆ ಆರೋಗ್ಯ ಸರಿಯಿಲ್ಲದಿದ್ದರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಆರೋಗ್ಯ ಸುಧಾರಿಸುತ್ತದೆಂದು ಬಂದೆ ಎಂದು ಹರ್ಷ ವ್ಯಕ್ತಪಡಿಸಿದರು.

ಆಧುನಿಕ ಬೆಂಗಳೂರಿಗೆ ಕಾಂ. ಸೂರಿಯವರ ನೀಡಿರುವ ಅಗಾಧ ಕೊಡುಗೆಯನ್ನು ಮರೆಯುವಂತಿಲ್ಲ. ಈ ದೃಷ್ಟಿಯಲ್ಲಿ ಕಾಂ. ಸೂರಿ ಸ್ಮಾರಕ ಭವನವನ್ನು ಕಟ್ಟುತ್ತಿರುವ ಈ ಪ್ರದೇಶದ ಪಕ್ಷದ ಸಂಗಾತಿಗಳಿಗೆ ರಾಜ್ಯ ಕಾರ್ಯದರ್ಶಿ ಮಂಡಳಿಯ ಪರವಾಗಿ ಅವರು ಅಭಿನಂದನೆ ಸಲ್ಲಿಸಿದರು. ಕಾರ್ಮಿಕ ಮುಖಂಡರು ಹಾಗೂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಆದ ಕಾಂ. ಹೆಚ್.ಎನ್. ಗೋಪಾಲಗೌಡರು ಮಾತನಾಡುತ್ತಾ ಸುಮಾರು 30 ವರ್ಷಗಳಿಂದ ಹಲವಾರು ಚಳುವಳಿ - ಹೋರಾಟ ನಡೆದರೂ ಕಾರ್ಮಿಕರಿಗಾಗಿ ಸ್ವಂತ ಜಾಗವಿರಲಿಲ್ಲ. ಮೈಸೂರು ಸ್ಟೀಲ್, ಗೇರ್ಸ್ ಅಂಡ್ ಡ್ರೆವಸ್, ಹಾರ್‌ವುಡ್ ಗಾರ್ಮೆಂಟ್ಸ್, ಮೆಕನಲಿ ಬೆಂಗಳೂರು. ಕಾರ್ಮಿಕರು ದೊಡ್ಡ ರೀತಿಯಲ್ಲಿ ಜಾಗ ಖರೀದಿಸಲು ಹಣ ನೀಡಿರುತ್ತಾರೆ. ಅದೇ ರೀತಿಯಲ್ಲಿ ವಿ.ಸಿ.ಡಬ್ಲ್ಯು., ಟಿ.ಟಿ.ಕೆ. ಹೆಲ್ತ್ ಕೇರ್‌ನ ಕಾರ್ಮಿಕರು ಮತ್ತು ಆರ್.ಎಂ.ಸಿ. ರೆಡಿ ಮಿಕ್ಸ್ ಕಾರ್ಮಿಕರು ಸಹ ಕಟ್ಟಡ ನಿರ್ಮಾಣಕ್ಕೆ ಸಹಾಯವನ್ನು ಮಾಡುತ್ತಿದ್ದಾರೆ. ಹೀಗೆ ಹಲವಾರು ಕಾರ್ಮಿಕರ ಕೊಡುಗೆ ಇದರಲ್ಲಿದೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರದೇಶದಲ್ಲಿ ಕಾರ್ಮಿಕರ, ವಿದ್ಯಾರ್ಥಿ, ಯುವಜನರ, ಮತ್ತು ಮಹಿಳೆಯರ ಅಲ್ಪಸ್ವಲ್ಪವಿರುವ ರೈತರ ಚಳುವಳಿಗಳನ್ನು ಬೆಳೆಸುವ ದೃಷ್ಟಿಯಿಂದ ಈ ಕಛೇರಿ ಉಪಯೋಗವಾಗಬೇಕು ಎಂದು ತಿಳಿಸಿದರು.

ಕಾಂ. ಗೌರಮ್ಮನವರು ಶ್ರಮಜೀವಿ ಹಾಗೂ ಕಾರ್ಮಿಕ ವರ್ಗವನ್ನು ಸಂಘಟಿಸಲು ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಎಲ್ಲ ಶೋಷಿತ ವರ್ಗಗಳ ಚಳುವಳಿಯನ್ನು ಕಟ್ಟಲು ಈ ಕಛೇರಿಯನ್ನು ಬಳಸುವಂತಾಗಬೇಕು. ಆದ್ದರಿಂದ ಇಲ್ಲಿ ಭಾಗವಹಿಸಿರುವ ಪಕ್ಷದ ಎಲ್ಲ ಸದಸ್ಯರು, ಹಿತೈಷಿಗಳು, ಕಾರ್ಮಿಕರು ಉದಾರವಾಗಿ ಸಹಾಯ ಮಾಡಬೇಕೆಂದು ತಿಳಿಸುತ್ತಾ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಕಾಂ. ಹೆಚ್.ಎನ್.ಗೋಪಾಲಗೌಡ ಪಾಯ ಅಗೆಯುವ ಮೂಲಕ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದರು.



ಉಡುಪಿ ಹಾಗೂ ದ.ಕ. ಜಿಲ್ಲೆಯ ಬಿಎಸ್‌ಎನ್‌ಎಲ್ ದಿನಗೂಲಿ ನೌಕರರು, ಸೆಪ್ಟೆಂಬರ್ 6 ರಂದು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಬಿಎಸ್‌ಎನ್‌ಎಲ್ ಕಚೇರಿ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಿದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH